ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳ ಒಂದು ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕರು
ಎಚ್. ಹಂಪಯ್ಯ
ನೋಂದಣಿ ಸಂಖ್ಯೆ : KUKS-೦೦೫೧೧

ಮಾರ್ಗದರ್ಶಕರು
ಡಾ. ಮಲ್ಲಿಕಾರ್ಜುನ ವಣೇನೂರು
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯಾಧ್ಯಯನ ವಿಭಾಗ

ಕನ್ನಡ ಸಾಹಿತ್ಯಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೨

1029

ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳ ಒಂದು ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕರು

ಎಚ್. ಹಂಪಯ್ಯ

ಮಾರ್ಗದರ್ಶಕರು

ಡಾ. ಮಲ್ಲಿಕಾರ್ಜುನ ವಣೇನೂರು

ಸಹಾಯಕ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯಾಧ್ಯಯನ ವಿಭಾಗ

ಕನ್ನಡ ಸಾಹಿತ್ಯಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೩

ಪ್ರಮಾಣ ಪತ್ರ

ಕನ್ನಡ ಎಂ.ಫಿಲ್. ಪದವಿಯ ಅಧ್ಯಯನದ ಅಂಗವಾಗಿ ಐದನೆಯ ಪತ್ರಿಕೆಗಾ**'ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳ ಒಂದು ಅಧ್ಯಯನ'** ಎಂಬ ವಿಷಯದ ಕುರಿತು ಕನ್ನಡ ಸಾಹಿತ್ಯಾಧ್ಯಯನ ವಿಭಾಗದಲ್ಲಿ **ಡಾ. ಮಲ್ಲಿಕಾರ್ಜುನ ವಣೆನೂರು** ಅವರ ಮಾರ್ಗದರ್ಶನದಲ್ಲಿ ಪ್ರಸ್ತುತ ನಿಬಂಧವನ್ನೂ ಸಿದ್ಧಪಡಿಸಿರುತ್ತೇನೆ. ಈ ನಿಬಂಧವನ್ನು ಬೇರೆ ಯಾವುದೇ ಪದವಿಗಾಗಲಿ, ವಿಶ್ವವಿದ್ಯಾಲಯಕ್ಕಾಗಲಿ ಬಳಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಎಚ್. ಹಂಪಯ್ಯ)

ದಿನಾಂಕ :

ಸ್ಥಳ : ವಿದ್ಯಾರಣ್ಯ

ದೃಢೀಕರಣ ಪತ್ರ

ಕನ್ನಡ ಎಂ.ಫಿಲ್. ಪದವಿಯ ಅಧ್ಯಯನದ ಅಂಗವಾಗಿ ಐದನೆಯ ಪತ್ರಿಕೆಗಾಗಿ **'ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳ ಒಂದು ಅಧ್ಯಯನ'** ಎಂಬ ವಿಷಯದ ಕುರಿತು ಕನ್ನಡ ಸಾಹಿತ್ಯಾಧ್ಯಯನ ವಿಭಾಗದಲ್ಲಿ ನನ್ನ ಮಾರ್ಗದರ್ಶನದಲ್ಲಿ ಪ್ರಸ್ತುತ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವನ್ನೂ ಬೇರೆ ಯಾವುದೇ ಪದವಿಗಾಗಲಿ, ವಿಶ್ವವಿದ್ಯಾಲಯಕ್ಕಾಗಲಿ ಬಳಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಮಲ್ಲಿಕಾರ್ಜುನ ವಣೆನೂರು)

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡುಬಂದ ವಿಶಿಷ್ಟ ಪ್ರಕಾರವೆಂದರೆ ಗದ್ಯ ಸಾಹಿತ್ಯ, ಕಾದಂಬರಿ, ಸಣ್ಣಕತೆ, ಜೀವನ ಚರಿತ್ರೆ, ನಾಟಕ, ಪ್ರಬಂಧ ಹರಟೆ, ಪತ್ರಸಾಹಿತ್ಯ, ವೈಜ್ಞಾನಿಕಸಾಹಿತ್ಯ, ವಿಮರ್ಶೆ ಇತ್ಯಾದಿ. ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ಕೆಂಪುನಾರಾಯಣ ತನ್ನ ಮುದ್ರಾಮಂಜೂಷದಿಂದ ನಾಂದಿ ಹಾಡಿದನೆಂದು ಹೇಳಲಾಗಿದೆ. ಹಾಗೆಯೇ ಮುದ್ದಣನು ತನ್ನ ಅದ್ಭುತ ರಾಮಾಯಣ ರಾಮಶ್ವಮೇಧ ಎಂಬ ಕೃತಿಗಳನ್ನು ಹಳೆಗನ್ನಡ ಮತ್ತು ನಡುಗನ್ನಡ ಬೆರೆತ ಗದ್ಯದಲ್ಲಿ ಬರೆದಿದ್ದಾರೆ. ಕನ್ನಡದಲ್ಲಿ ಪ್ರಬಂಧ ಹರಟೆ ಹಾಸ್ಯ ವ್ಯಕ್ತಿಚಿತ್ರ ಮುಂತಾದವು. ವೈಶಿಷ್ಟ ಪೂರ್ಣವಾಗಿ ಪ್ರತ್ಯೇಕ ಸಾಹಿತ್ಯ ಪ್ರಕಾರವೆಂದು ಗುರುತಿಸಿಕೊಳ್ಳುವಂತೆ ಬೆಳೆದಿದೆ. ಇನ್ನೊಂದು ಮುಖ್ಯವಾದ ಅಂಶವೇನೆಂದರೆ ಶಾಸನಗಳಿಂದ ಆರಂಭವಾದ ಗದ್ಯ ಸಾಹಿತ್ಯವು ಕನ್ನಡದಗದ್ಯಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆಯನ್ನು ನೀಡಿದೆ. ಶಾಸನಗಳ ನಂತರದ ಮತ್ತೊಂದು ಮಹತ್ತರವಾದ ಬೆಳವಣಿಗೆ ಎಂದರೆ. ಶಿವಕೋಟ್ಯಾಚಾರ್ಯರು ರಚಿಸಿರುವ ವಡ್ಡಾರಾಧನೆಯ ಗದ್ಯ, ಮಾರ್ಗ ಮತ್ತು ದೇಶಿಗಳನ್ನು ಅಳವಡಿಸಿಕೊಂಡು ರಚನೆಯಾದ ಕೃತಿ. ಈ ಕೃತಿ ಹಳೆಗನ್ನಡದಲ್ಲಿ ರಚನೆಯಾಗಿದ್ದು ಇದರ ಗದ್ಯ ಶೈಲಿಯು ವಿಶಿಷ್ಟವಾದುದೆನಿಸಿಕೊಂಡಿದೆ.

೧೨ನೇ ಶತಮಾನದಲ್ಲಿ ಬಂದ ವಚನ ಸಾಹಿತ್ಯವು ಕನ್ನಡ ಗದ್ಯ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ತಿರುವನ್ನು ನೀಡಿತೆನ್ನಬಹುದು. ಜನ ಸಾಮಾನ್ಯರ ಸರಳ ಭಾಷೆಯನ್ನು ವಿವಿಧ ಕಸಬುಗಳಿಗೆ ಸೇರಿದ ಕಸುಬುದಾರರು ತಮ್ಮ ಕಸುಬಿನ ಪರಿಭಾಷೆಯನ್ನೇ ಬಳಸುವುದರ ಮೂಲಕ ಭಾಷೆಗೆ ಒಂದು ಹೊಸ ಚೈತನ್ಯವನ್ನು ನೀಡಿದರು.

೧೭ನೇ ಶತಮಾನದಲ್ಲಿ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಅದರಲ್ಲಿಯೂ ಚಿಕ್ಕದೇವರಾಜರ ಕಾಲದಲ್ಲಿ ಗದ್ಯವು ವಿಶೇಷವಾಗಿ ಬೆಳೆಯಿತು. ಉದಾಹರಣೆಗೆ ತಿರುಮಲಾರ್ಯನ ಚಿಕ್ಕದೇವರಾಜ

ವಂಶಾವಳಿ ಕನ್ನಡ ಗದ್ಯಸಾಹಿತ್ಯದ ಉತ್ತಮ ಮಾದರಿಗಳಾಗಿವೆ. ಹೊಸಗನ್ನಡ ಸಾಹಿತ್ಯವು ಸಾಂಪ್ರದಾಯಿಕ ಸಾಹಿತ್ಯಕ್ಕಿಂತ ಭಿನ್ನವಾದಂತಹ ಸಾಹಿತ್ಯ ಇಲ್ಲಿ ಬೆಳೆದು ಬಂದಿತು. ಅಂತಹ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಪ್ರಬಂಧ ಸಾಹಿತ್ಯವೂ ಒಂದು.

'ಪ್ರಬಂಧ' ಎಂಬ ಪದ ಇಂಗ್ಲಿಷ್‌ನ 'ESSAY' ಎಂಬುದಕ್ಕೆ ಸಂವಾದಿಯಾಗಿ ಬಳಸುವ ಕನ್ನಡ ಪದ, ಇದಕ್ಕೆ ಪ್ರಬಂಧ, ಲಘುಪ್ರಬಂಧ, ಭಾನಪ್ರಬಂಧ ಮುಂತಾದ ಪರ್ಯಾಯ ಹೆಸರುಗಳನ್ನು ಒಳಗೊಂಡಿದೆ. ಮೂಲತಃ ಫ್ರೆಂಚ್ ಭಾಷೆಯ 'Eassy' ಪದವನ್ನು ಒಂದು ಪ್ರಯೋಗ, ಪ್ರಯತ್ನ, ಉದ್ಯಮ ಎಂದು ಕರೆಯಲಾಯಿತು. ಈ ಪದವನ್ನು ಸರಿಯಾಗಿ ಸ್ಥಾನಾಂತರಿಸುವ ಸಮನಾರ್ಥ ಪದ ಕನ್ನಡದಲ್ಲಿ ಇಲ್ಲ. ಆದರೂ ಪ್ರಬಂಧ ಎಂಬ ಪದದಲ್ಲಿ ಆ ಅರ್ಥವನ್ನೂ ತುಂಬಾ ಬಳಸಲಾಗುತ್ತದೆ.

ಪ್ರಬಂಧವು ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಆರಂಭಕಾಲದಲ್ಲಿ ಕಾಣಿಸಿಕೊಂಡು ೧೯೩೦ರಿಂದ ಈಚೆಗೆ ಸ್ಥಾಯಿಯಾಗಿ ನೆಲೆಗೊಂಡಿದೆ. ವಿ. ಸೀತಾರಾಮಯ್ಯ, ತೀ.ನಂ. ಶ್ರೀಕಂಠಯ್ಯ, ಕುವೆಂಪು, ಎ.ಎನ್. ಮೂರ್ತಿರಾವ್, ಶಿವರಾಮ ಕಾರಂತ, ದ.ಬಾ.ಕುಲಕರ್ಣಿ, ನಾ.ಕಸ್ತೂರಿ, ಕೆ.ಎಸ್. ನರಸಿಂಹಸ್ವಾಮಿ, ಎ.ಕೆ. ರಾಮಾನುಜನ್ ಮುಂತಾದವರ ಬರಹದಿಂದ ಪ್ರಬಂಧ ಸಾಹಿತ್ಯವು ಶ್ರೀಮಂತಗೊಂಡಿದೆ. ಲಘು ಪ್ರಬಂಧ ಮತ್ತು ಹರಟೆಯ ಕ್ಷೇತ್ರದಲ್ಲಿ ಕನ್ನಡಗದ್ಯದ ಸಾಧನೆಯನ್ನು ಪ್ರಮುಖವಾಗಿ ಹೀಗೆ ಗುರುತಿಸಬಹುದಾಗಿದೆ. ವಸ್ತುವಿಗಿಂತ ಶೈಲಿಯಲ್ಲಿ ಪ್ರಾಮುಖ್ಯ ಪಡೆಯುತ್ತದೆ. ಬರಹಗಾರನ ಅನುಭವ ಸುಸಂಸ್ಕೃತ ಚಿಂತನೆ, ಅಭಿರುಚಿ ಇವೆಲ್ಲವೂ ಕಾರ್ಯ ಪ್ರವೃತ್ತವಾಗಿದ್ದುಕೊಂಡು ಅಭಿವ್ಯಕ್ತಿಯ ವಿಶಿಷ್ಟದಿಂದ ಜೀವನ ತುಂಬಿಕೊಂಡು ಹರಿಯುವ ಬೆಳವಣಿಗೆಯೂ ಈ ಪ್ರಕಾರ ನಿರ್ಧಿಷ್ಟ ಕ್ಷೇತ್ರವೊಂದನ್ನು ಇರಿಸಿಕೊಳ್ಳದೆ ಆಲೋಚನಾ ಲಹರಿಯನ್ನು ಹರಿಯಬಿಡುತ್ತ ಹಾಸ್ಯಭರಿತವಾಗಿ ಸರಾಗವಾಗಿ ಸಾಗುವ ಹರಟೆಯೊಂದು ಮನೋರಂಜನೆಗೆ ಆಹಾರವಾಗುತ್ತದೆ. ಒಂದು ವಿಷಯವನ್ನು ಕೇಂದ್ರವಾಗಿ ಹೊಂದಿದ್ದು ಅದರ ಸುತ್ತ ನಮ್ಮ ಆಲೋಚನೆಗಳನ್ನು ಹರಿಯ ಬಿಡುತ್ತ ಸಾಗಿಸುವ ಲಲಿತ ಪ್ರಬಂಧ ನಾನಾ ಬಗೆಯ ಲೇಖಕರನ್ನು ಆಕರ್ಷಿಸಿದೆ. ಪ್ರಬಂಧವು ಇದು ವ್ಯಾಕರಣದ ಒಂದು ಅಂಗವಾಗಿ ಕೆಲಸ ನಿರ್ವಹಿಸುತ್ತದೆ. ಅರ್ಥಪೂರ್ಣ ಖಚಿತ ವಾಕ್ಯಗಳ ಮೂಲಕ ವ್ಯಕ್ತಿಯ ಆಲೋಚನೆಗಳನ್ನು ಲಿಖಿತವಾಗಿ ಅಭಿವ್ಯಕ್ತಿಸುವ ಹಾಗೂ ನಿರ್ದಿಷ್ಟ ವಿಷಯವನ್ನು ಕ್ರಮಬದ್ದ ರೀತಿಯಲ್ಲಿ ಸಮರ್ಪಕವಾಗಿ ನಿರೂಪಿಸುವ ಪರಿಯಾಗಿದೆ.

ಪ್ರಬಂಧಗಳು ಸಾಮಾನ್ಯವಾಗಿ ಲೇಖಕನ ವ್ಯಕ್ತಿತ್ವದಿಂದ ಕೂಡಿದ ಸ್ವತಂತ್ರ ನಿರ್ದಿಷ್ಟ ಲಘು ಬರವಣಿಗೆ ವ್ಯಕ್ತಿಯ ವೈಜ್ಞಾನಿಕ ಆಲೋಚನೆಗಳನ್ನು ಸಹೃದಯರಿಗೆ ಗದ್ಯಾತ್ಮಕ ಕಾವ್ಯ ಶೈಲಿಯಲ್ಲಿ

ವಿಷಯ ಪ್ರಸ್ತಾಪ ಮಾಡುವ ಬಗೆಯಿದು. ಸರಳ ಭಾವಪ್ರಧಾನ ಶೈಲಿಯಲ್ಲಿ ಸೃಜನಶೀಲತೆಗೆ ಎಡೆಮಾಡಿಕೊಡುವ ಭಾಷಾ ಸಾಹಿತಿಕ ಕ್ರಿಯೆ ಸೃಜನಶೀಲ ಬರವಣಿಗೆಗೆ ಸಿದ್ಧಗೊಂಡಿರುವುದಾಗಿದೆ.

ಕನ್ನಡ ಪ್ರಬಂಧಕಾರರು ವೈವಿಧ್ಯಮಯವಾದ ವಿಚಾರಗಳನ್ನು ಪ್ರಬಂಧ ರಚನೆಯ ವಿಷಯಗಳಾಗಿ ಬಳಸಿಕೊಂಡಿದ್ದಾರೆ. ಎ.ಕೆ. ರಾಮಾನುಜನ್ ಅವರ ಪ್ರಬಂಧಗಳನ್ನು ಗೆರೆ ಎಳೆದು ತೋರಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಅವರ ಪ್ರಬಂಧಗಳು ಇತರರಿಂದ ಕೇಳಿಕಂಡಂತಹ ಅನುಭವಗಳಿಗಿಂತ ಮಿಗಿಲಾಗಿ ತಾವೇ ಸ್ವಂತ ಅನುಭವಿಸಿದ ಅನುಭವಗಳ ನಿರೂಪಣೆಯೆ ಆಗಿದೆ. ಪ್ರಬಂಧಗಳ ರಚನೆಯಲ್ಲಿ ಎ.ಕೆ. ರಾಮಾನುಜನ್‌ರಿಗೆ ಮಹತ್ವವಾದ ಸ್ಥಾನ ದೊರೆತಿದೆ. ಅವರ ಪ್ರಬಂಧಗಳು ಜೀವಂತಿಕೆ ಲಕ್ಷಣಗಳಿಂದ ಕೂಡಿದವಾಗಿವೆ. ಓದುಗರಲ್ಲಿ ಲವಲವಿಕೆಯನ್ನುಂಟುಮಾಡುತ್ತವೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನ ವ್ಯಾಪ್ತಿ ತುಂಬ ವಿಶಾಲವಾಗಿರುವುದರಿಂದ ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು. ಕನ್ನಡ ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಎಂಬ ಪುಸ್ತಕ ಆಯ್ಕೆಮಾಡಿಕೊಂಡು ಕೆಲ ಪ್ರಬಂಧಗಳನ್ನು ಆಯ್ದುಕೊಂಡಿದ್ದೇನೆ. ಇವರ ಕ್ಷೇತ್ರ ಜಾನಪದಕ್ಕೆ ಹೆಚ್ಚಿನ ಒಲವು, ಆಸಕ್ತಿ, ಅಭಿರುಚಿ ಹೊಂದಿರುವುದರಿಂದ ಗ್ರಾಮ ಜೀವನವನ್ನು ಅವರ ಸಂಸ್ಕೃತಿ ಆಚಾರ–ವಿಚಾರ ತಮ್ಮ ಪ್ರಬಂಧದಲ್ಲಿ ಕಣ್ಣಿಗೆ ಕಟ್ಟುವಂತೆ ಬರಹದಲ್ಲಿ ಸೆರೆ ಹಿಡಿಯುವ ಅದ್ಭುತ ಕಲೆಗಾರಿಕೆಯನ್ನು ಮೈಗುಡಿಸಿಕೊಂಡವರು. ಇವರ ಪ್ರಬಂಧದಲ್ಲಿ ಬರುವ ೨೦೦ ರಾಮಾಯಣಗಳು ಮಹಾಭಾರತದಲ್ಲಿ ಪುನರುಕ್ತಿ ಭಕ್ತಿ ವೈವಿದ್ಯತೆ; ಹೂ ಬಿಡುವ ಮರ: ಒಬ್ಬ ಹೆಂಗಸಿನ ಕಥೆ ಪ್ರತಿ ವ್ಯವಸ್ಥೆಯತ್ತ: ಹೆಂಗಸರ ಕತೆಗಳು, ಕತೆ ಹೇಳುವುದು. ಕನ್ನಡ ಜಾನಪದ ಎರಡು ವರ್ತುಲಗಳು ಸ್ಪೀಕಿಂಗ್ ಆಫ್ ಶಿವ. ಇವು ಪ್ರಮುಖವಾಗಿವೆ. ಇವುಗಳನ್ನು ಪ್ರಮುಖವಾಗಿ ಇಟ್ಟುಕೊಂಡು ವಿವಿಧ ದೃಷ್ಟಿಕೋನದಿಂದ ವೈಶಿಷ್ಟ್ಯಗಳನ್ನು ಗುರುತಿಸಿ ವಿಶ್ಲೇಷಣೆ ಮಾಡುವುದು ಈ ಅಧ್ಯಯನದ ವ್ಯಾಪ್ತಿಯಾಗಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಆಧುನಿಕ ಸಮಾಜದಲ್ಲಿ ಮಾನವನ ಜೀವನದ ಮೌಲ್ಯಗಳು ಯಾವ ರೀತಿಯಲ್ಲಿ ಬದಲಾವಣೆಯಾಗುತ್ತಾ ಬಂದವು ಎಂಬುದರ ಸೂಕ್ಷ್ಮವಿವರಗಳು ಇವರ ಬರಹದಲ್ಲಿ ದೊರೆಯುತ್ತವೆ. ಎ.ಕೆ. ರಾಮಾನುಜನ್‌ರು ಭಾರತೀಯ ಸಂಸ್ಕೃತಿಯನ್ನು ವಿದೇಶಗಳಲ್ಲಿ ವಿಸ್ತರಿಸಿದ್ದಾರೆ ಅಂದರೆ ಇಲ್ಲಿ ಮುಖ್ಯವಾಗಿ ತಿಳಿಯುವ ಅಂಶವೆಂದರೆ ಭಾರತೀಯ ಸಂಸ್ಕೃತಿ ವೈವಿಧ್ಯತೆಯಿಂದ ಧಾರ್ಮಿಕತೆಯಿಂದ ಭಕ್ತಿ ವೈವಿಧ್ಯತೆಯಿಂದ ಕೂಡಿರುವುದು. ಬೇರೆ

ದೇಶಗಳಿಗೆ ಹೋಲಿಕೆ ಮಾಡಿ ವಿಚಾರ ತಿಳಿಸುವಂತವರಾಗಿದ್ದಾರೆ. ತಮ್ಮ ಪ್ರಬಂಧಗಳಲ್ಲಿ ಮುಖ್ಯವಾಗಿ ಜಾನಪದ ಕಥೆಗಳನ್ನು ಇಟ್ಟುಕೊಂಡು ಅವುಗಳು ಸರಳಭಾಷೆಯಲ್ಲಿ ವಿವರಿಸಿರುವುದು ಕಂಡುಬರುತ್ತದೆ. ಹಾಗೂ ಸಂಸ್ಕೃತಿ ಆಚಾರ–ವಿಚಾರ. ಸಂಪ್ರದಾಯ ಮುಂತಾದವುಗಳನ್ನು ಕಥನದ ಮೂಲಕ ವಿಶ್ಲೇಷಣೆ ಮಾಡಿದ್ದಾರೆ. ಸಮಾಜದಲ್ಲಿ ನಡೆಯುವ ಘಟನೆಯನ್ನು ಅಥವಾ ವಾಸ್ತವತೆಯನ್ನು ಗುರ್ತಿಸಿರುವುದು ತಿಳಿಯುತ್ತದೆ.

ನವ್ಯ ಸಾಹಿತ್ಯದ ಲೇಖಕರಲ್ಲಿ ಪ್ರಮುಖವಾಗಿ ಇಡೀ ಭಾರತೀಯ ಸಂಸ್ಕೃತಿಯನ್ನೇ ತಮ್ಮ ಸಾಹಿತ್ಯ ಕೃತಿಗಳಲ್ಲಿ ಪ್ರತಿನಿಧಿಸಿದ್ದಾರೆ. ಒಬ್ಬ ಪ್ರಬಂಧಕಾರರನ್ನು ರೂಪಿಸುವಲ್ಲಿ ಬೇರೆ ಬೇರೆ ಪರಿಸರಗಳು ಎಷ್ಟು ಪ್ರಮುಖವಾಗುತ್ತವೆ ಎನ್ನುವ ವಿಚಾರಗಳು ಎಂಬುದನ್ನು ಗುರುತಿಸಬಹುದಾಗಿದೆ. ಹೀಗೆ ಬಾಳಿನ ಅಥವಾ ಜೀವನ ಅನುಭವ ನಾನಾ ಮುಖಗಳೊಂದಿಗೆ ಮೂಡಿಬಂದ ಅವರ ಸಾಹಿತ್ಯದಲ್ಲಿ ಪ್ರಬಂಧಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಣೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಅಧ್ಯಯನಕ್ಕೆ ತೊಡಗಿದ್ದೇನೆ. “ಮಹಾಭಾರತದಲ್ಲಿ ಪುನರುಕ್ತಿ ಪ್ರಬಂಧದಲ್ಲಿ ಘಟನೆಗಳ ಪುನರುಕ್ತಿಯನ್ನು ತೀವ್ರಗೊಳಿಸುವ ಉಪಾಖ್ಯಾನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಗಮನಿಸಬಹುದೆಂದು ತೋರುತ್ತದೆ. ಇಲ್ಲಿ ಕೇವಲ ಎರಡು ನಿದರ್ಶನಗಳನ್ನು ನೀಡುತ್ತೇನೆ. ಭೀಷ್ಮನು ತನ್ನ ತಂದೆಯ ಮರುಮದುವೆ ನಡೆಯಲೆಂಬ ಕಾರಣಕ್ಕೆ ಸಿಂಹಾಸನದ ಹಕ್ಕನ್ನು ವೈವಾಹಿಕ ಬದುಕನ್ನೂ ತ್ಯಾಗ ಮಾಡುವ ತೀರ್ಮಾನ ಮಾಡಿದಾಗ ಆ ತೀರ್ಮಾನಕ್ಕೊಂದು ಮಾದರಿ” ಇಲ್ಲಿ ಪ್ರತಿಗಳ ಸೃಷ್ಠಿ ಆಗಿರುವುದು ತಿಳಿಯುತ್ತದೆ. ಮತ್ತು ಕೆಲವೊಂದು ಘಟನೆಗಳನ್ನು ಇಟ್ಟುಕೊಂಡು ರಚನೆಮಾಡುವುದಾಗಿದೆ. ಇಲ್ಲಿ ವಿಶ್ಲೇಷಣೆಯನ್ನು ಸಹ ಕಾಣಬಹುದಾಗಿದೆ.

ಒಬ್ಬ ಪ್ರಬಂಧಕಾರನನ್ನು ರೂಪಿಸುವಲ್ಲಿ ಬೇರೆ ಬೇರೆ ಪರಿಸರಗಳು ಎಷ್ಟು ಪ್ರಮುಖವಾಗುತ್ತವೆ ಎನ್ನುವ ವಿಚಾರಗಳು ಎಂಬುದನ್ನು ಗುರುತಿಸಬಹುದಾಗಿದೆ. ಎ.ಕೆ. ರಾಮಾನುಜನ್‌ರು ಹೀಗೆ ಬಾಳಿನ ನಾನಾ ಮುಖಗಳೊಂದಿಗೆ ಮೂಡಿಬಂದ ಅವರ ಸಾಹಿತ್ಯದಲ್ಲಿ ಪ್ರಬಂಧಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಣೆ ಮಾಡುವ ಉದ್ದೇಶಹೊಂದಿದೆ.

ಸಮಾರೋಪದಲ್ಲಿ ಎ.ಕೆ. ರಾಮಾನುಜನ್‌ರ ಸಾಹಿತ್ಯ ಪ್ರಾಮುಖ್ಯವನ್ನು ಯಾವ ರೀತಿ ಅಳವಡಿಸಿಕೊಂಡಿದ್ದಾರೆ. ಮತ್ತು ಅವರು ಸಾಹಿತ್ಯದ ಅಭಿರುಚಿಯ ಬಗ್ಗೆ ವ್ಯಕ್ತಪಡಿಸಿರುವ ಅಂಶವನ್ನು ಈ ಸಾಹಿತ್ಯ ಪ್ರಾಮುಖ್ಯದಲ್ಲಿ ತೋರಿಸಲಾಗಿದೆ.

ಈ ಪ್ರಬಂಧದಲ್ಲಿ ಕಂಡುಬರುವಂತಹ ವಸ್ತುಗಳ ವೈವಿಧ್ಯತೆಯ ಬಗೆಗೆ ಅಂದರೆ ಎಂತಹ ಸಣ್ಣ ವಿಷಯಗಳನ್ನೂ ಈ ಪ್ರಬಂಧದಲ್ಲಿ ವಿಷಯಗಳಾಗಿ ಬಳಸಿಕೊಳ್ಳಬಹುದು ಎಂಬ ವಿವರಗಳನ್ನು ಒಳಗೊಂಡಿದೆ. ಹಾಗೂ ಮನಸ್ಸಿನಲ್ಲಿ ಉಳಿಯುವಂತ ಪಾತ್ರಗಳ ಗುಣವಿಶ್ಲೇಷತೆಗಳ

ಬಗೆಗೆ ಅವುಗಳ ವೈವಿಧ್ಯತೆಗಳ ಬಗೆಗೆ ತಿಳಿಸುವ ಪ್ರಯತ್ನ ಹಾಗೂ ಹಾಸ್ಯ ಒಗಟುಗಳ ವಿವರಣೆ ನೀಡಲಾಗಿದೆ.

ಎ.ಕೆ. ರಾಮಾನುಜನ್‌ರವರು ಕನ್ನಡ ಶ್ರೇಷ್ಠ ಲೇಖಕರಲ್ಲಿ ಒಬ್ಬರು. ಗ್ರಾಮ ಜೀವನದ ದಟ್ಟ ಅನುಭವದ ಜನಪದ ಸೊಗಸನ್ನು ತುಂಬಿ ವೈವಿಧ್ಯತೆಯನ್ನು ಎಲ್ಲ ಪ್ರಬಂಧಗಳಲ್ಲಿ ತಂದವರು ರಾಮಾನುಜನ್‌ರು ಸಹಾನುಭೂತಿ ವಿಮರ್ಶಾತ್ಮಕ ಅಂತರಂಗವನ್ನು ಇಟ್ಟುಕೊಂಡು ನಮ್ಮನ್ನು ನಾವು ಇರುವಂತೆ ಲೋಕಕ್ಕೆ ಕಾಣಿಸುವ ಮತ್ತು ಲೋಕದ ದೃಷ್ಠಿಗೆ ಹೇಗೆ ಕಾಣಬಹುದು ಎಂಬುದನ್ನು ತೋರಿಸಿಕೊಡುವ ಎರಡು ಅಪರೂಪದ ಕೆಲಸಗಳನ್ನು ರಾಮಾನುಜನ್‌ರವರ ಬರವಣಿಗೆಯಲ್ಲಿ ಕಾಣಬಹುದು.

ಅಧ್ಯಯನದ ವಿಧಾನಗಳು

ಮುಖ್ಯವಾಗಿ ಎ.ಕೆ. ರಾಮಾನುಜನ್‌ರು ಸಾಂಸ್ಕೃತಿಕ ವಸ್ತುಗಳ ಮೇಲೆ ಗಮನವಿರುವುದು ತಿಳಿಯುತ್ತದೆ. ಕನ್ನಡ ಪ್ರಬಂಧಕಾರರು ವೈವಿಧ್ಯಮಯ ವಿಚಾರಗಳನ್ನು ತಮ್ಮ ಪ್ರಬಂಧದ ವಿಷಯಗಳಾಗಿ ಆಯ್ಕೆ ಮಾಡಿಕೊಂಡಿರುವುದು. ಈ ಪ್ರಕಾರಕ್ಕೂ ಕನ್ನಡಗದ್ಯಕ್ಕೂ ಹೊಸ ಆಯಾಮಗಳನ್ನು ತರುವಲ್ಲಿ ವಿಶ್ಲೇಷಣೆಗೆ ಸಹಕಾರಿಯಾಗಿದೆ. ವಸ್ತು ವೈವಿಧ್ಯವು ಏಕತಾನತೆಯನ್ನು ಹೋಗಲಾಡಿಸಿ ಓದುಗರಲ್ಲಿ ಲವಲವಿಕೆಯನ್ನು ಉಂಟುಮಾಡುವುದಾಗಿದೆ.

ಎ.ಕೆ. ರಾಮಾನುಜನ್ ಸಹ ತಮ್ಮ ಪ್ರಬಂಧಗಳಲ್ಲಿ ವೈವಿಧ್ಯಮಯವಾದ ವಸ್ತುಗಳನ್ನು ಬಳಸಿಕೊಂಡಿರುವುದು ಸಹಜವಾದರೂ ಆ ಎಲ್ಲಾ ವಸ್ತುಗಳು ಸಹಾ ಗ್ರಾಮೀಣತೆಯ ಸೊಗಡಿನಿಂದ ಹೊರತಾದವುಗಳಲ್ಲ. ಅವರು ಭಾರತೀಯ ಸಂಸ್ಕೃತಿಯ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಮತ್ತು ಚರ್ಚೆ ಮಾಡಲಾಗಿವೆ. ಇಲ್ಲಿ ಮುಖ್ಯವಾಗಿ ಕಥೆಗಳು, ಜಾನಪದ ರಾಮಾಯಣ, ಮಹಾಭಾರತ, ವಚನಗಳ ಬಗ್ಗೆ ಬರುವ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. ಕಾಯಕನಿಷ್ಠ ಗ್ರಾಮ ಜೀವನದ ಲಕ್ಷಣವನ್ನು ಈ ಪ್ರಬಂಧದಲ್ಲಿ ಬಂದಿರುವುದು ಫಲಿತಗಳ ಬಗ್ಗೆ ಚರ್ಚಿಸಲಾಗಿದೆ. ಹೂ ಬಿಡುವ ಮರ: ಒಬ್ಬ ಹೆಂಗಸಿನ ಕತೆ, ಕೆಲಸದ ಅಜ್ಜಿ ತರುವ ಮರದ ಹೂ ರಾಜನು ಮೆಚ್ಚುವುದು ಅಜ್ಜಿ ಮಗಳನ್ನು ಮದುವೆಯಾಗುವುದು. ತೌಲನಿಕ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಹೀಗೆ ಎ.ಕೆ. ರಾಮಾನುಜನ್‌ರ ಪ್ರಬಂಧಗಳನ್ನು ರಾಚನಿಕವಿಧಾನದಲ್ಲಿ ವಿಶ್ಲೇಷಣೆಮಾಡಿ ಅವುಗಳ ಫಲಿತಗಳನ್ನು ಚರ್ಚಿಸಲಾಗಿದೆ. ಹಾಗೂ ಇಲ್ಲಿ ಬರುವ ಭಾರತೀಯ ಸಂಸ್ಕೃತಿಯನ್ನು ವಿವರಾತ್ಮಕವಾಗಿ ಒಳಗೊಂಡಿರುವುದು ತಿಳಿಯುತ್ತದೆ.

ಅಧ್ಯಾಯ ೨

ಬದುಕು ಬರಹ

ಅಧ್ಯಾಯ ೨

ಬದುಕು ಬರಹ

ವಿಶ್ವಮಾನ್ಯ ಕವಿ, ಚಿಂತಕ, ಪ್ರಾಧ್ಯಾಪಕ, ಜನಪದತಜ್ಞ, ಶ್ರೇಷ್ಠ ಭಾಷಾತಜ್ಞ, ಭಾಷಾಂತರಕಾರ ಹೀಗೆ ವಿವಿಧ ಪ್ರತಿಭೆಗಳ ಮಹೋನ್ನತ ಸಂಗಮರಾದ ಅತ್ತೀಪೇಟ್ ಕೃಷ್ಣಸ್ವಾಮಿ ರಾಮಾನುಜನ್ ಅವರು ಮಾರ್ಚ್ ೬ರಂದು ಮೈಸೂರಿನಲ್ಲಿ ಜನಸಿದರು. ತಂದೆ: ಅತ್ತೀಪೇಟ್ ಅಸುರಿ ಕೃಷ್ಣಸ್ವಾಮಿ, ತಾಯಿ: ಶೇಷಮ್ಮ. ''ಅತ್ತೀಪೇಟ್ ಅಸುರಿ ಕೃಷ್ಣಸ್ವಾಮಿ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.'' ಜೊತೆಗೆ ಅವರು ಒಬ್ಬ ಖಗೋಳವಿಜ್ಞಾನಿಯೂ ಆಗಿದ್ದರು. ಅವರಿಗೆ ಇಂಗ್ಲಿಷ್, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಅವರು ಮನೆಯಲ್ಲಿ ಮಕ್ಕಳನ್ನು ಕೂರಿಸಿಕೊಂಡು ಅನೇಕ ಕಥೆಗಳನ್ನು ಹೇಳುತಿದ್ದರು. ಹಾಗಾಗಿ ರಾಮಾನುಜನ್‌ಗೆ ಬಾಲ್ಯದಲ್ಲಿಯೇ ಕಥೆ ಹೇಳುವ, ಕೇಳುವ ಪರಿಸರ ಒಲಿದು ಬಂದಿತು. ಜೊತೆಗೆ ಅವರ ತಾಯಿ ಒಬ್ಬ ಸಂಪ್ರದಾಯಸ್ಥ ಬ್ರಾಹ್ಮಣ ಮಹಿಳೆ. ಆಕೆ ತನ್ನ ನಂಬಿಕೆ, ಆಚರಣೆ, ಪದ್ಧತಿಗಳಲ್ಲಿ ಆಳವಾದ ಶ್ರದ್ಧೆ ಹೊಂದಿದ್ದಳು.''[೨] ಆಕೆ ಒಬ್ಬ ಹಿಂದೂ ಸಮಾಜದ ಪಕ್ಕಾ ಗೃಹಿಣಿಯಾಗಿದ್ದಳು. ಆದರೆ ಆಕೆ ತಮಿಳು ಮತ್ತು ಕನ್ನಡದಲ್ಲಿ ಓದನ್ನು ಹೊಂದಿದ್ದರೂ. ರಾಮಾನುಜನ್ ತನ್ನ ತಂದೆಯಿಂದ ಬಂದ ಆಧುನಿಕತೆ ಮತ್ತು ತಾಯಿಯಿಂದ ಬಂದ ಪಾರಂಪರಿಕತೆಯ ಓದು ಈ ಎರಡರ ಸಂಘರ್ಷದಲ್ಲಿ ತಮ್ಮ ಚಾರಿತ್ರಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ರಾಮಾನುಜನ್‌ರ ಪ್ರಾಥಮಿಕಮಾಧ್ಯಮಿಕ ವಿದ್ಯಾಭ್ಯಾಸ ಮೈಸೂರಿನಲ್ಲಿ ನಡೆಯಿತು. ೧೯೫೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಆನರ್ಸ್‌ನಲ್ಲಿ ಬಿ.ಎ. ಪದವಿಯನ್ನು ಪಡೆದರು. ರಾಮಾನುಜನ್‌ರು ಮೊದಲು ವಿಜ್ಞಾನ ವಿಷಯದಲ್ಲಿ ಪ್ರವೇಶಪಡೆದಿದ್ದರು. ಆದರೆ ಅವರ ತಂದೆಗೆ ತನ್ನ ಮಗ ತಮ್ಮಂತೆ ವಿಜ್ಞಾನಿಯಾಗುವುದು, ಗಣಿತಶಾಸ್ತ್ರಜ್ಞನಾಗುವುದು ಇಷ್ಟವಿರಲಿಲ್ಲ.[೩] ಅದಕ್ಕಾಗಿ ರಾಮಾನುಜನ್ ಸಾಹಿತ್ಯ ಓದಬೇಕೆಂಬ ಆಸೆ ಅವರಿಗೆ ಬಲವಾಗಿ ಇತ್ತು. ಆದಕಾರಣ ಎರಡನೆಯ

ವರ್ಷದಲ್ಲಿ ತಮ್ಮ ಮಗನನ್ನು ಇಂಗ್ಲಿಷ್ ಸಾಹಿತ್ಯಕ್ಕೆ ಬದಲಾಯಿಸಿದರು. ಹಾಗಾಗಿ ಇಂಗ್ಲಿಷ್ ಆನರ್ಸ್‌ನಲ್ಲಿ ಬಿ.ಎ. ಪದವಿಯನ್ನು ಪಡೆದರು ಮತ್ತು ಎಂ.ಎ. ಪದವಿಯನ್ನು ಪಡೆದುಕೊಂಡರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆಯನ್ನು ಕೊಡುವುದರ ಜೊತೆಗೆ ಕನ್ನಡ ಕಸ್ತೂರಿಯನ್ನು ವಿಶ್ವದೆಲ್ಲೆಡೆ ಇಂಗ್ಲಿಷ್ ಮೂಲಕ ಪಸರಿಸುವ ಕಾರ್ಯ ಮಾಡಿದರು, ರಾಮಾನುಜನ್‌ರು ಬಿ.ಎ. ಪದವಿಯನ್ನು ಪಡೆದ ನಂತರ ಮರುವರ್ಷವೇ ಕೇರಳದಲ್ಲಿ ಇಂಗ್ಲಿಷ್ ಬೋಧಕರಾಗಿ ಕೆಲಸಕ್ಕೆ ಸೇರಿದರು. ''ಆ ವೇಳೆಯಲ್ಲಿ ಅವರ ತಂದೆಯವರು ಅವರನ್ನು ಕೇರಳಕ್ಕೆ ರೈಲು ಹತ್ತಿಸಲು ಸ್ಟೇಷನ್ನಿಗೆ ಬಂದು ಬೀಳ್ಕೊಟ್ಟು ಹೋಗಿದ್ದರು. ಅಪ್ಪ ಮಗನ ಭೇಟಿ ಅದೇ ಕೊನೆ. ಅವರ ತಂದೆ ಹೃದಯಾಘಾತದಿಂದ ತೀರಿಕೊಂಡರು. ಅನಂತರ ರಾಮಾನುಜನ್ ಕೇರಳದಿಂದ ಧಾರವಾಡಕ್ಕೆ ಭೋಧಕರಾಗಿ ತೆರಳಿದರು. ರಾಮಾನುಜನ್ ಬೋಧಕರಾಗಿದ್ದ ಅವಧಿಯಲ್ಲಿ ಒಬ್ಬ ಅತ್ಯಂತ ಬುದ್ಧಿವಂತ ಅಧ್ಯಾಪಕ ಎಂದು ಹೆಸರು ಗಳಿಸಿದ್ದರು.''[೪]

ರಾಮಾನುಜನ್‌ರು ತಮ್ಮ ತಂದೆಯೊಡನೆ ನಡೆಸುತ್ತಿದ್ದ ಬೌದ್ಧಿಕ ಚರ್ಚೆ, ಸಂವಾದದಿಂದಾಗಿ ಆ ವೇಳೆಗಾಗಲೇ ಅವರಲ್ಲಿ ಬೌದ್ಧಿಕ ವ್ಯಕ್ತಿತ್ವವೊಂದು ರೂಪುಗೊಳ್ಳತೊಡಗಿತ್ತು. ರಾಮಾನುಜನ್ ಅವರ ಪ್ರಧಾನವಾದ ಆಸಕ್ತಿ, ಶ್ರದ್ಧೆ, ಕುತೂಹಲ ಜಾನಪದ ಕ್ಷೇತ್ರವೇ ಆಗಿತ್ತು. ಅದರಲ್ಲಿ ಅವರು ಜನಪದ ಕಥೆ, ಗಾದೆ, ಒಗಟು, ಪುರಾಣ, ಆಚರಣೆ ಇವುಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಬರೆದ ಪ್ರಬಂಧಗಳು ಇವಾಗಿದೆ.

ರಾಮಾನುಜನ್‌ರು 'ತ್ರಿಭಾಷಾ' ಪರಿಸರದಲ್ಲಿ ಬೆಳೆದು ಬಂದಿರುವುದು ತಿಳಿಯುತ್ತದೆ.''ಅವರದು ಮೈಸೂರಿನಲ್ಲಿ ಮೂರು ಅಂತಸ್ತಿನ ಮನೆ, ಇವರು ಎರಡನೇ ಅಂತಸ್ತಿನಲ್ಲಿ ತಮ್ಮ ತಂದೆಯವರ ಜೊತೆ ಮಾತನಾಡುವಾಗ ಇಂಗ್ಲಿಷ್ ಭಾಷೆ, ಕೆಳ ಅಂತಸ್ತಿನಲ್ಲಿ ಅಡಿಗೆ ಮನೆಯಲ್ಲಿ ತಮ್ಮ ತಾಯಿಯ ಬಳಿ ಮಾತನಾಡುವಾಗ ತಮಿಳು ಭಾಷೆ, ಮನೆಯ ಹೊರಗೆ ಆದಿಬೀದಿಯಲ್ಲಿ ಸ್ನೇಹಿತರ ಜೊತೆ ಮಾತನಾಡುತ್ತಿದ್ದದ್ದು ಕನ್ನಡ.''[೫] ಈಗ ರಾಮಾನುಜನ್‌ರು ತಂದೆ ತಾಯಿ ಹಾಗೂ ನೆರೆಹೊರೆಯವರಿಂದ ಅಲಿಸುವ ಭಾಷೆಯ ಮಹತ್ವ ಅವರ ಬರಹಗಳಲ್ಲೂ ಕಾಣಿಸಿಕೊಂಡಿದೆ ಹಾಗೂ ಭಾಷೆಯ ಪ್ರೌಢಿಮೆ ಅವರಲ್ಲಿ ಇದ್ದುದರಿಂದ ತ್ರಿಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿರುವುದು ಕಂಡುಬರುತ್ತದೆ. ಜೊತೆಗೆ ತಮ್ಮ ಪ್ರಬಂಧಗಳಲ್ಲಿ ವೈಚಾರಿಕತೆಯನ್ನು ಬಿಂಬಿಸಿದ್ದಾರೆ.

ರಾಮನುಜನ್‌ರು ಮುಖ್ಯವಾಗಿ ''ಮೈಸೂರಿನ ಕಾಫಿ ಹೌಸ್‌ನಲ್ಲಿ ಸ್ನೇಹಿತರ ಜೊತೆ ಕೂತು ಅರ್ಧರ್ಧ ಕಾಫಿ ಕುಡಿದು ಹರಟೆ, ಕಥೆ ಕವಿತೆ, ನಾಟಕ, ಜನಪದ, ಭಾಷೆ, ಭಾಷಾಂತರ ಹೀಗೆ ಇತ್ಯಾದಿ ತರಲೆ ತಕರಾರುಗಳನ್ನೆಲ್ಲಾ ಕುರಿತು ಚರ್ಚಿಸುತ್ತಿದ್ದರು.''[೬] ತನ್ನ ಆಪ್ತರ ಜೊತೆಯಲ್ಲಿ ಸಾಹಿತ್ಯದ ಅಭಿರುಚಿಯನ್ನು ಹಂಚಿಕೊಂಡು ಯಾವ ರೀತಿಯಲ್ಲಿ ಸಾಗುತ್ತಿತ್ತು ಅನ್ನುವುದನ್ನು ತಮ್ಮ ಬರಹದಲ್ಲಿ ಗುರುತಿಸುವುದು ತಿಳಿಯುತ್ತದೆ. ಅಲ್ಲದೆ ರಾಮಾನುಜನ್‌ರು ಪ್ರಮುಖವಾಗಿ

ಸಾಹಿತ್ಯ ಸಂಸ್ಕೃತಿಯ ಚರ್ಚೆಗಳನ್ನು ಮಾಡುತ್ತ ಬಂದಿರುವುದು ಅವರ ಬದುಕಿನಲ್ಲಿ ಮಹತ್ವದ ಗಳಿಗೆಗಳು. ಎ.ಕೆ. ರಾಮಾನುಜನ್‌ರ ಪತ್ನಿಯ ಹೆಸರು ಮಾಲಿಡೇನಿಯಲ್ ಇಬ್ಬರು ಮಕ್ಕಳು. ಅವರಿಗೆ ಕೃತಿಕಾ ಮತ್ತು ಕೃಷ್ಣಸ್ವಾಮಿ.

ರಾಮಾನುಜನ್ ಕೇರಳದಿಂದ ಧಾರವಾಡಕ್ಕೆ ಬೋಧಕರಾಗಿ ತೆರಳಿದರು. ರಾಮಾನುಜನ್ ಬೋಧಕರಾಗಿದ್ದ ಆ ಅವಧಿಯಲ್ಲಿ ಒಬ್ಬ ಅತ್ಯಂತ ಬುದ್ದಿವಂತ ಅಧ್ಯಾಪಕ ಎಂದು ಹೆಸರು ಗಳಿಸಿದ್ದರು.[೭] ಅವರು ಕನ್ನಡ ನಾಡಿನಲ್ಲಿಯೂ ಭೋದಕರಾಗಿ ಕೆಲಸ ನಿರ್ವಹಿಸಿರುವುದು ತಿಳಿಯುವ ವಿಷಯವಾಗಿದೆ. ಇವರು ಮುಖ್ಯವಾಗಿ ಇಂಗ್ಲಿಷ್ ಭಾಷೆಗೆ ಕನ್ನಡದ ಅನೇಕ ಕೃತಿಗಳನ್ನು ಭಾಷಾಂತರಿಸಿದ್ದಾರೆ. ಅವರ ಅತ್ಯಂತ ಆಸಕ್ತಿಯ ಮತ್ತು ಪ್ರೀತಿಯ ಕ್ಷೇತ್ರ ಭಾಷೆ, ಸಾಹಿತ್ಯ ಮತ್ತು ಭಾಷಾಂತರವೇ ಆಗಿತ್ತು. ಅನುವಾದ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಪಾಶ್ಚಾತ್ಯ ವಿದ್ವಾಂಸರಿಗೆ, ಓದುಗರಿಗೆ ಇವರು ಅತ್ಯಂತ ಆಕರ್ಷಕವಾಗಿ ಕಂಡರು.

ರಾಮಾನುಜನ್ ಅವರನ್ನು ಅವರ ಸ್ನೇಹಿತರು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು 'ರಾಮನ್' ಆಗಿತ್ತು. ಅವರು ದಕ್ಷಿಣ ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ ೧೯೫೮ರಲ್ಲಿ ಪುಣೆಯ ಡೆಕ್ಕನ್ ವಿಶ್ವವಿದ್ಯಾಲಯದಿಂದ ''ಥಿಯರೆಟಿ ಲಿಂಗ್ವಿಸ್ಟಿಕ್ಸ್'' ವಿಷಯದಲ್ಲಿ ಉನ್ನತ ಡಿಪ್ಲೋಮ ಪದವಿ ಪಡೆದರು. ಮುಂದಿನ ವರ್ಷ ಇಂಡಿಯಾನ ವಿಶ್ವವಿದ್ಯಾಲಯದಲ್ಲಿ ಹೌಸ್‌ಯಾಲ್ಡರ್ ಅವರು ಪ್ರಾಧ್ಯಾಪಕರಾಗಿ ದೊರೆತರು. ಅಲ್ಲಿ ರಾಮಾನುಜನ್ ೧೯೬೩ರಲ್ಲಿ ಪಿಎಚ್.ಡಿ ಪದವಿ ಪಡೆದರು. ಆಮೇಲೆ ಅವರು ತಮ್ಮ ಅಧ್ಯಾಪನ ವೃತ್ತಿಯನ್ನು ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿದರು.

೧೯೬೨ರಲ್ಲಿ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಅಧ್ಯಾಪಕರಾಗಿ ಸೇರಿದ ರಾಮಾನುಜನ್ ೧೯೯೩ರಲ್ಲಿ ನಿಧನರಾಗುವ ತನಕದ ತಮ್ಮ ಬಹುತೇಕ ವೃತ್ತಿಜೀವನವನ್ನು ಅಲ್ಲಿಯೇ ನಡೆಸಿದರು."೧೯೬೩ರ ಬೇಸಿಗೆಯಲ್ಲಿ ಇಂಡಿಯನ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಲೆಟರ್ಸ್‌ಗೆ ಫೆಲೋ ಆದರು. ಆ ಸಂದರ್ಭದಲ್ಲಿ ಅವರು ಬ್ಲೂಮಿಂಗ್‌ಟನ್‌ಲ್ಲಿ ವಾಸವಿದ್ದರು. ನಂತರ ಅವರು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣ ವೆಷ್ಯ ಭಾಷಾ ವಿಭಾಗದ ಮುಖ್ಯಸ್ಥರಾದರು.''[೮] ಈಗ ರಾಮಾನುಜನ್‌ರು ತಮ್ಮ ಬದುಕಿನಲ್ಲಿ ವಿದೇಶದಲ್ಲಿ ಹೆಚ್ಚಿನದಾಗಿ ಗುರುತಿಸಿಕೊಂಡಿರುವವರಾಗಿದ್ದಾರೆ ಮತ್ತು ಭಾಷಾಂತರಕಾರರಾಗಿ ನಮ್ಮ ಸಂಸ್ಕೃತಿಯನ್ನು ಬಿಂಬಿಸಿದ್ದಾರೆ ಎನ್ನುವುದು ತಿಳಿಯುತ್ತದೆ.

ರಾಮಾನುಜನ್‌ರ ಕೆಲಸ ಮಾಡಿದ ಸಮಿತಿಗಳು ಹಾಗೂ ಅವರು ಗಳಿಸಿರುವ ಗೌರವಗಳು ಹಲವು. ಕವಿ, ಅನುವಾದಕ, ವಿದ್ವಾಂಸನೆಂದು ಬೇರೆ ಯಾವ ಕನ್ನಡಿಗನಿಗೂ ಸಿಗದ ಅಂತಾರಾಷ್ಟ್ರೀಯ

ಮನ್ನಣೆ ರಾಮಾನುಜನ್‌ಗೆ ಲಭಿಸಿದೆ. ಹಾರ್ವರ್ಡ್, ಆಕ್ಸ್‌ಫರ್ಡ್ ಮೊದಲಾದ ವಿಶ್ವವಿದ್ಯಾನಿಲಯಗಳು ವಿಶೇಷ ಉಪನ್ಯಾಸಗಳಿಗಾಗಿ ಅವರನ್ನು ಆಹ್ವಾನಿಸಿವೆ. ೧೯೭೬ರಲ್ಲಿ ಭಾರತ ಸರಕಾರದ ವತಿಯಿಂದ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ನೀಡಲಾಯಿತು. ಅತ್ಯಂತ ಶ್ರೀಮಂತನಾದ ಮೆಕಾರ್ಥರ್ ಪ್ರೈಜ್ ಫೆಲೋಶಿಪ್ಪನ್ನು ೧೯೮೩-೮೮ರ ಅವಧಿಯಲ್ಲಿ ಅವರಿಗೆ ಕೊಡಲಾಯಿತು. 'ಟೈಮ್ಸ್ ಆಫ್ ಇಂಡಿಯಾ' ರಾಮಾನುಜನ್ನರನ್ನು 'ಸಾಂಸ್ಕೃತಿಕ ನಾವಿಕ' ಎಂದು ಮುಕ್ತಕಂಠದಿಂದ ಕರೆದು ಪ್ರಶಂಸಿಸಿತು. ವಿಮರ್ಶಕರನೇಕರು ರಾಮಾನುಜನ್ನರನ್ನು 'ದುಭಾಷಿ' ಎಂದು ಕರೆದರು. ಆಗ ರಾಮಾನುಜನ್‌ರು ತಮ್ಮ ಬದುಕಿನಲ್ಲಿ ಹೆಚ್ಚಿನ ವೇಳೆಯನ್ನು ಪರರಾಷ್ಟ್ರಗಳಲ್ಲಿ ಕಳೆದರು. ಅವರು ವಿಶೇಷವಾದ ಬಹುಮಾನಗಳನ್ನು, ಹೆಸರುಗಳನ್ನು ಪಡೆದುಕೊಂಡಿದ್ದರು.

ರಾಮಾನುಜನ್‌ರಿಗೆ ತಮಿಳು ಅವರ ಆಪ್ತ ಭಾಷೆಗಳಲ್ಲಿ ಒಂದು. ''ತಮಿಳು ನಾಡಿನಲ್ಲಿಯ ಅವರ ಸಾಂಸ್ಕೃತಿಕ ಸೇವೆಗಾಗಿ ಆ ಸರಕಾರ ಅವರಿಗೆ ಚಿನ್ನದ ಪದಕ ನೀಡಿ ಗೌರವಿಸಿದೆ. ರಾಮಾನುಜನ್‌ರ ಬಹುಮುಖ ಪ್ರತಿಭೆಯನ್ನು ಮೆಚ್ಚಿದ ಅಮೆರಿಕದ ಮೆಕಾರ್ಥರ್ ಪ್ರತಿಷ್ಠಾನವು 'ಜೀನಿಯಸ್ ಅವಾರ್ಡ್' ನೀಡಿದೆ (ಈ ಪ್ರಶಸ್ತಿಯ ಮೌಲ್ಯ ೨.೬ ಲಕ್ಷ ಡಾಲರುಗಳು ಎಂದರೆ ಸುಮಾರು ೭೫ ಲಕ್ಷ ರೂಪಾಯಿಗಳು). ಅಲ್ಲದೆ ಅಮೆರಿಕದ 'ಆರ್ಟ್ಸ್ ಅಂಡ್ ಸೈನ್ಸ್ ಕಾಂಗ್ರೆಸ್' ತನ್ನ ಗೌರವ ಫೆಲೋಶಿಫ್ ನೀಡಿದೆ.''

ಪ್ರಸಿದ್ಧ ನವ್ಯ ಕವಿ ಗೋಪಾಲಕೃಷ್ಣ ಅಡಿಗರ ಪ್ರಭಾವದಿಂದ ಹೊರಬಂದು ಹೊಸ ಸಂವೇದನೆಗಳೊಂದಿಗೆ ತಮ್ಮದೇ ಆದ ರೀತಿಯಲ್ಲಿ ಕಾವ್ಯ ರಚಿಸಿದ ರಾಮಾನುಜನ್ ಮೂರು ಕವನ ಸಂಕಲನಗಳನ್ನು ಹಾಗೂ ಇಂಗ್ಲಿಷಿನಲ್ಲಿ ನಾಲ್ಕು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ಕನ್ನಡದಲ್ಲಿ ''ಹೊಕ್ಕುಳಲ್ಲಿ ಹೂವಿಲ್ಲ''(೧೯೬೯) ಇವರ ಪ್ರಥಮ ಸಂಕಲನ. ಪದ್ಯ ರಚನೆ, ಭಾಷೆಯ, ಬಳಕೆ, ಪ್ರತಿಮೆಗಳ ಬಳಕೆಯ ದೃಷ್ಟಿಯಿಂದ ಇವರ ನವ್ಯಕವನಗಳಿಗೆ ನವ್ಯ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು' ಅಲ್ಲದೆ ಕುಂಟೋಬಿಲ್ಲೆ (೧೯೯೦) ಇವರ ಕವನ ಸಂಕಲನವಾಗಿದೆ. ''ಎ.ಕೆ. ರಾಮಾನುಜನ್‌ರ ಕವನ ಸಂಕಲನಗಳು ಕನ್ನಡ ಭಾಷೆಗೆ ಹೊಸ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿವೆ. ಕನ್ನಡದಲ್ಲಿ ಅಡಿಗರ ಪ್ರಭಾವ ಉತ್ತುಂಗದಲ್ಲಿದ್ದಾಗ ರಾಮಾನುಜನ್ ಅಡಿಗರಿಗಿಂತ ತೀರಾ ಭಿನ್ನವಾದ ಒಂದು ಮಾರ್ಗವನ್ನು ಉದ್ಘಾಟಿಸಿದರು.''[೯] ಈ ಮಾತು ನಿಜವಾಗಿ ಕಂಡುಬರುವಂತಹ ಮಾತಾಗಿದೆ. ನವ್ಯ ಸಾಹಿತಿಗಳಲ್ಲಿ ಇವರೂ ಒಬ್ಬರಾಗಿರುವುದು ಕಂಡುಬರುತ್ತದೆ.

ರಾಮಾನುಜನ್‌ರು ಬರೆದದ್ದು ಎರಡು ಕತೆ. ಒಂದು, ಮಧುರೆಯಲ್ಲಿ ಒಂದು ತಲೆ (೧೯೬೫) ಎರಡು, ಅಣ್ಣಯ್ಯನ ಮಾನವಶಾಸ್ತ್ರ(೧೯೭೪). ಇವೆರಡೂ ಕತೆಗಳು ಕನ್ನಡದ ಪ್ರಮುಖ ಕಥಾ

ಸಂಕಲನಗಳಲ್ಲಿ ನಮೂದಾಗಿವೆ. ಅದೇ ರೀತಿಯಾಗಿ ಇವರು ಎರಡು ಬಾನುಲಿ ನಾಟಕಗಳನ್ನು ಬರೆದಿದ್ದಾರೆ. ಒಂದು ಗಾನಪ್ರಿಯ(೧೯೫೯), ಎರಡು ನಾದಬಿಂದು(೧೯೫೯). 'ಗಾನಪ್ರಿಯ ನಾಟಕ ಬರಯುವುದಕ್ಕೆ ತಮಿಳು ಕತೆ ಓದಿದಾಗ ಪ್ರೇರಣೆಯಾಯಿತಂತೆ. ಅದೇ ರೀತಿಯಾಗಿ 'ನಾದಬಿಂದು' ನಾಟಕಕ್ಕೂ ಜನಪದ ಕತೆಯ ಪ್ರಭಾವವಿದೆ. ಹೀಗೆ ಇವರು ಬಾನುಲಿ ನಾಟಕಗಳು, ಹಾಸ್ಯ ನಾಟಕಗಳು, ಮಕ್ಕಳ ನಾಟಕಗಳು ಈ ಕೃತಿಗಳು ರಂಗದ ಮೇಲೂ ಯಶಸ್ವಿಯಾಗಬಲ್ಲದು ಎಂದು ಹೇಳಬಹುದಾಗಿದೆ.

ರಾಮಾನುಜನ್ ಗಾದೆ, ಕತೆಗಳ ಸಂಗ್ರಹದ ಜೊತೆಗೆ ಇಂಗ್ಲಿಷ್ ಕವನ ಬರೆಯುವುದನ್ನು ರೂಡಿಸಿಕೊಂಡರು. ಹಾಗಾಗಿ ಅವರ ಮೊದಲ ಕವಲ ಸಂಕಲನ ಇಂಗ್ಲಿಷ್‌ನಲ್ಲೇ ಬಂತು. ೧೯೬೬ರಲ್ಲಿ ಅವರ ಮೊದಲ ಇಂಗ್ಲಿಷ್ ಕವನ ಸಂಕಲನ 'ದಿ ಸ್ಟ್ರೈಡರ್ಸ್' ನಂತರ ೧೯೭೧ರಲ್ಲಿ 'ರಿಲೇಷನ್ಸ್' ೧೯೭೬ರಲ್ಲಿ ಸೆಲೆಕ್ಟಡ್ ಪೊಯಮ್ಸ್ ಮತ್ತು ೧೯೮೬ರಲ್ಲಿ'ಸೆಕೆಂಡ್ ಸೈಟ್ಸ್' ಸಂಕಲನಗಳು ಪ್ರಕಟಗೊಂಡವು. ಇವುಗಳಲ್ಲಿ 'ಸೆಂಕೆಂಡ್ ಸೈಟ್ಸ್' ಅವರ ಅತ್ಯುತ್ತಮ ಇಂಗ್ಲಿಷ್ ಸಂಕನಗಳಲ್ಲಿ ಒಂದಾಗಿದೆ. ರಾಮಾನುಜನ್ ಇಂಗ್ಲಿಷ್‌ನಲ್ಲಿ ಶ್ರೇಷ್ಠ ಕವಿಯೆನಿಸಿಕೊಂಡರೂ ಅವರು ಮೊದಲು ಕವನ ಬರೆಯಲು ಪ್ರಾರಂಭಿಸಿರುವುದು ಕನ್ನಡದಲ್ಲೇ.

ಜಾನಪದ ರಾಮಾನುಜನ್‌ರಿಗೆ ಬಹುಪ್ರಿಯವಾದ ಕ್ಷೇತ್ರ. ಜಾನಪದದಲ್ಲಿ ಹಲವಾರು ಲೇಖನಗಳನ್ನು ಮತ್ತು ಎರಡು ಮಹತ್ವದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೫೫ರಲ್ಲಿ ರಾಮಾನುಜನ್‌ರ'ಗಾದೆಗಳು' ಎಂಬ ಹೆಸರಿನ ಕಿರು ಪುಸ್ತಕ ಪ್ರಕಟವಾಯಿತು. ಸುಮಾರು ೬೦ ಪುಟದ ಈ ಪುಟ್ಟ ಪ್ರಸ್ತಕದಲ್ಲಿ ಗಾದೆಗಳನ್ನು ಕುರಿತ ಅತ್ಯಮೂಲ್ಯವಾದ ಮಾಹಿತಿಗಳಿವೆ. ರಾಮಾನುಜನ್‌ರ ''ಗಾದೆಗಳನ್ನು ಓದುವವರಿಲ್ಲ, ಗಾದೆಗಳ ಪುಸ್ತಕ ಬರೆದವನೇ, ಮೂರ್ಖತನಕ್ಕೆ ಅಥವಾ ಶುಷ್ಕ ಪಾಂಡಿತ್ಯಕ್ಕೆ ಗುರಿಯಾಗುತ್ತಾನೆ'' ಎಂಬ ಗಾದೆ ಮಾತಾದರೆ ಅಚ್ಚರಿ ಏನಿಲ್ಲ. ಪಾಶ್ಚಾತ್ಯ ದೇಶಗಳಲ್ಲಿಯೂ ಪಂಡಿತರು ಈ ಬಗ್ಗೆ ಪ್ರಸ್ತಾಪಿಸಿದ್ದುಂಟು. ಅಲ್ಲಿನ ಗಾದೆಗಳ ಸಂಕಲನಗಳು ಅಷ್ಟಿದ್ದರೂ ಅಲ್ಲಿನ ಪಂಡಿತರು-ಜನರಿಗೆ ಗಾದೆಗಳ ಬಗ್ಗೆ ಆದರವಿಲ್ಲ, ತಿಳುವಳಿಕೆಯೂ ಇಲ್ಲ. ಹೀಗೆಯೇ ಬಿಟ್ಟರೆ ಗಾದೆಗಳು ಜನಮನದಿಂದ ಅಳಿಸಿಹೋಗುತ್ತವೆ''[೧೦] ಈ ಕೃತಿಯಲ್ಲಿ ಗಾದೆಯ ರೂಪರಚನೆಗಳನ್ನು ಸವಿಸ್ತಾರವಾಗಿ ವಿವರಿಸುತ್ತ ಹೋಗಿದ್ದಾರೆ. ಜೊತೆಗೆ ಕನ್ನಡ ಗಾದೆಗಳ ವಿಶ್ಲೇಷಣೆಯೂ ಇದೆ. ಕರ್ನಾಟಕದಲ್ಲಂತೂ ನಾವು ಕೇಳದಿರುವ ಎಷ್ಟೋ ರಸಮಯ ವಿಚಾರಪ್ರಚೋದಕ ಗಾದೆಗಳನ್ನು ಅವರು ನಾನಾ ಗಾದೆಗಳೊಂದಿಗೆ ಹೋಲಿಸಿ ವಿವೇಚಿಸಿದ್ದಾರೆ.

ದಿ ಇಂಡಿಯನ್ ಓಡಿಪಸ್ ೧೯೮೩ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳ್ಳಿಯೊಂದರಲ್ಲಿ ಸಂಗ್ರಹ ಮಾಡಿದ ಕತೆಯಾಗಿದೆ. ನಂತರ ಅನದರ್ ಹಾರ್ಮೊನಿ(೧೯೮೬) ಕೃತಿಯಲ್ಲಿ ರಾಮಾನುಜನ್‌ರು

ಬರೆದ 'ಟು ರೆಲ್ಮ್‌ಆಫ್ ಕನ್ನಡ ಫೋಕ್ ಲೋರ್' ಎಂಬ ಲೇಖನವಿದೆ. ಈ ಲೇಖನವು ಜನಪದ ಕತೆ, ಪುರಾಣ, ಜನಪದ ಪುರಾಣ, ಮತ್ತು ಶಿಷ್ಟ ಪುರಾಣಗಳು, ಜನಪದ ಆಚರಣೆಗಳು ಮತ್ತು ಆಚರಣಾತ್ಮಕ ಪ್ರದರ್ಶನವನ್ನು ಕಾದಿರಿಸುವಂತೆ ಇವೆ. ಇದರಲ್ಲಿ "ಫೋಕ್ ಟೇಲ್ಸ್ ಫ್ರ ಇಂಡಿಯಾ"(೧೯೯೦) ಗ್ರಂಥದಲ್ಲಿ ಭಾರತದ ೩೨ ಭಾಷೆಗಳ ಜನಪದ ಕಥೆಗಳಿವೆ.

ಭಾರತೀಯ ಸಂಸ್ಕೃತಿಯನ್ನು ಗಾಢವಾಗಿ ಹಚ್ಚಿಕೊಂಡು, ಬರಹದಲ್ಲಿ ಕಾಣಸಿಗದ ಕತೆಗಳ, ಗಾದೆಗಳ, ಅನಿರ್ದಿಷ್ಟ ನಿಯಮಗಳ ಆಗರವೆಂದು ನೋಡುವ ರಾಮಾನುಜನ್‌ರ ಯೋಜನಾ ಕ್ರಮ ಸಂಸ್ಕೃತಿಯ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ನಿಟ್ಟಿನಲ್ಲಿ ವಿದೇಶಿ ವಿದ್ವಾಂಸರು ಭಾರತದ ಮಹಾ ಪರಂಪರೆಯ ಗ್ರಂಥಗಳನ್ನು ಮಾತ್ರವಲ್ಲದೆ, ಕನ್ನಡ, ತಮಿಳಿನಂಥ ಪ್ರಾದೇಶಿಕ ಭಾಷೆಗಳ ಕೃತಿಗಳನ್ನು ಜನಪದ ಸಾಹಿತ್ಯವನ್ನು ಗಮನಿಸುವಂತೆ ಮಾಡಿದ್ದು ರಾಮಾನುಜನ್‌ರ ಸಾಧನೆಗಳಲ್ಲೊಂದು.

ರಾಮಾನುಜನ್ ಕೇವಲ ಕವಿಗಳಾಗದೆ ಉತ್ತಮ ಭಾಷಾಂತರಕಾರರೂ ಹೌದು. ಹಳದಿಮೀನು (೧೯೬೬), 'ಸ್ಪೀಕಿಂಗ್ ಆಫ್ ಶಿವ"(೧೯೭೮), 'ಫೋಕ್ ಟೇಲ್ಸ್ ಫ್ರಂ ಇಡಿಯಾ'(೧೯೯೦), 'ದ ಇಂಟರಿಯರ್ ಲ್ಯಾಂಡ್ ಸ್ಕೇಪ್, 'ಹಿಮ್ಸ್ ಫಾರ್ ದ ಡ್ರೌವಿಂಗ್'(೧೯೮೧), 'ಪೊಯಮ್ಸ್ ಆಫ್ ಲವ್ ಅಂಡ್ ವಾರ್'(೧೯೮೫), ಸಂಸ್ಕಾರ(೧೯೭೬) ಮೊದಲಾದ ಅನುವಾದಗಳು ರಾಮಾನುಜನ್‌ರ ಸೃಜನಶೀಲ ಭಾಷಾಂತರಕ್ಕೆ ನಿದರ್ಶನಗಳು. ಹಳದಿ ಮೀನು ರಾಮಾನುಜನ್‌ರ(೧೯೬೬) ಪ್ರಸಿದ್ಧ ಅನುವಾದದಲ್ಲಿ ಒಂದು. ಹಳದಿ ಮೀನು ಕಾದಂಬರಿಯು ಪತ್ರಕರ್ತನೊಬ್ಬನ ದುರಂತ ಕಥೆಯನ್ನು ಚರ್ಚಿಸುತ್ತದೆ. ಶೌರಿಯರ ಇಂಗ್ಲಿಷ್ ಕಾದಂಬರಿ ಮೂಲದಲ್ಲಿ ಪ್ರಕಟವಾಗುವ ಮುಂಚೆಯೇ 'ಹಳದಿ ಮೀನು' ಅನುವಾದದಲ್ಲಿ ಪ್ರಸಿದ್ಧವಾಯಿತು. 'ಸ್ಪೀಕಿಂಗ್ ಆಫ್ ಶಿವ' (೧೯೭೩) ರಾಮಾನುಜನ್‌ರ ಇನ್ನೊಂದು ಶ್ರೇಷ್ಠ ಅನುವಾದ ಕೃತಿಯಾಗಿದೆ. ಇಲ್ಲಿ ನಾಲ್ಕು ಜನ ವಚನಕಾರರ ವಚನಗಳ ಆಯ್ದ ಭಾಗಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. "ಈ ಕೃತಿಯನ್ನು ಆಧರಿಸಿ ಬಿ.ಬಿ.ಸಿ.ಯು ಅಪೇರಾ ಕಾರ್ಯಕ್ರಮವನ್ನು ಪ್ರಸಾರ ಮಾಡಿತು."[೧೪] ಹೀಗೆ ರಾಮಾನುಜನ್‌ರ ಅನುವಾದಗಳಿಗೆ ಪಾಶ್ಚಾತ್ಯರಲ್ಲಿ ಅನಿರೀಕ್ಷಿತ ಬೆಂಬಲವೊಂದು ವ್ಯಕ್ತವಾಯಿತು.

ಎ.ಕೆ. ರಾಮಾನುಜನ್, ಎಂ.ಜಿ. ಕೃಷ್ಣಮೂರ್ತಿಯವರೊಡನೆ ಗೋಪಾಲಕೃಷ್ಣಅಡಿಗರ ಕೆಲವು ಕವನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ. ಇದರ ಹೆಸರು ಸಾಂಗ್ ಆಫ್ ಅರ್ಥ್ ಅ್ಯಂಡ್ ಅದರ್ ಪೊಯಮ್ಸ್ (೧೯೬೮) ಎಂಬುದಾಗಿ ಅನುವಾದಿಸಿದ್ದಾರೆ. ಯು.ಆರ್. ಅನಂತಮೂರ್ತಿಯವರ ಸುಪ್ರಸಿದ್ಧ ಕಾದಂಬರಿ ಸಂಸ್ಕಾರವನ್ನು ಅವರು ಇಂಗ್ಲಿಷ್‌ಗೆ 'A Rite for a dead man' ಭಾಷಾಂತರಿಸಿದ್ದಾರೆ. ಹೀಗೆ ಈಚಿನವರೆಗೂ ಭಾರತೀಯ ನಾಗರಿಕತೆ ಸಂಸ್ಕೃತಿಯನ್ನು ಕುರಿತಾದ ಅನೇಕ ವಿಷಯಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ಅಡಿಗರ ಕವಿತೆಗಳನ್ನು

ಅನುವಾದಿಸಿದ್ದಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೮೩ರಲ್ಲಿ ವಿಶೇಷ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು.

ಜುಲೈ ೧೩.೧೯೯೩ರಂದು ಚಿಕಾಗೋದಲ್ಲಿ ನಿಧನವಾಗುವ ಸಂದರ್ಭದಲ್ಲಿ ತಮ್ಮನ್ನು ತಾವು ಹಲವು ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದರು.

ಅಡಿಟಿಪ್ಪಣಿಗಳು

೧. ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxiv.

೨. ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxv.

೩. ಅದೇ ಪುಟ.

೪. ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxvi.

೫. ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxiv.

೬. ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxv.

೭ ಕಥೆ ಮತ್ತು ಹಾಡು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತಾವನೆ, ಪು.ಸಂ.xxiv.

೮. ಡಾ.ಎ.ಕೆ. ರಾಮಾನುಜನ್, ವಿಶ್ವನಾಥ ಬದಿಕಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ, ೧೯೯೫, ಪು.ಸಂ. ೩.

೮. ಡಾ.ಎ.ಕೆ. ರಾಮಾನುಜನ್, ವಿಶ್ವನಾಥ ಬದಿಕಾನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ, ೧೯೯೫, ಪು.ಸಂ. ೫.

೧೦. ಡಾ.ಎ.ಕೆ. ರಾಮಾನುಜನ್, ವಿಶ್ವನಾಥ ಬದಿಕಾನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ, ೧೯೯೫, ಪು.ಸಂ. ೯.

೧೧. ಡಾ.ಎ.ಕೆ. ರಾಮಾನುಜನ್, ವಿಶ್ವನಾಥ ಬದಿಕಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ, ೧೯೯೫, ಪು.ಸಂ. ೧೦.

* * *

ಅಧ್ಯಾಯ ೩

ಗದ್ಯ ಸಾಹಿತ್ಯದ ಬೆಳವಣಿಗೆ, ಪ್ರಬಂಧದ ಸ್ವರೂಪ, ವಿನ್ಯಾಸ

ಅಧ್ಯಾಯ ೩

ಗದ್ಯ ಸಾಹಿತ್ಯದ ಬೆಳವಣಿಗೆ, ಪ್ರಬಂಧದ ಸ್ವರೂಪ, ವಿನ್ಯಾಸ

ಕನ್ನಡ ಸಾಹಿತ್ಯದಲ್ಲಿ ಗದ್ಯ ಸಾಹಿತ್ಯದ ಆರಂಭವನ್ನೂ ಹಲ್ಮಿಡಿ ಶಾಸನದ ಕಾಲದಿಂದಲೇ ಗುರುತಿಸಲಾಗಿದೆ. ಸು.೫ನೇ ಶತಮಾನದಿಂದಲೂ ಗದ್ಯ ಶಾಸನಗಳು ಸಾಕಷ್ಟು ದೊರೆತಿವೆ. ವೀರಗಲ್ಲು, ಮಾಸ್ತಿಕಲ್ಲು, ದತ್ತಿಶಾಸನಗಳು ಆ ಕಾಲದ ಸಾಮಾಜಿಕ, ಐತಿಹಾಸಿಕ ವಿವರಗಳನ್ನೂ ನೀಡುವುದರ ಜೊತೆಗೆ ಭಾಷೆ ಬೆಳೆದು ಬಂದ ಬಗೆಯನ್ನು ತಿಳಿಸುತ್ತವೆ.

ಕ್ರಿ.ಶ.ಸು.೮೦೦ರಲ್ಲಿ ರಚಿಸಲಾಗಿರುವ ಮಾವಳ್ಳಿ ಶಾಸನವು ಖಚಿತವಾದ ಸಾಹಿತ್ಯಿಕ ಗುಣಗಳನ್ನು ಹೊಂದಿದೆ. ಈ ಕಾರಣದಿಂದಾಗಿ ಇದು ಹೆಚ್ಚಿನ ಮಹತ್ವವನ್ನೂ ಪಡೆದುಕೊಂಡಿದೆ. ಹಲ್ಮಿಡಿ ಶಾನಸಕ್ಕೂ ಈ ಶಾಸನಕ್ಕೂ ನಡುವೆ ಸು. ಮೂರುವರೆ ಶತಮಾನಗಳ ಅಂತರವಿದೆ. ಈ ಅವಧಿಯಲ್ಲಿ ಭಾಷೆಯಲ್ಲಿ ಉಂಟಾಗಿದ್ದ ಬೆಳವಣಿಗೆಗೆ ಈ ಶಾಸನ ಸಾಕ್ಷಿಯಾಗಿ ನಿಲ್ಲುತ್ತದೆ.

ಹೀಗೆ ಶಾಸನಗಳಿಂದ ಆರಂಭವಾದ ಗದ್ಯ ಸಾಹಿತ್ಯವು ಕನ್ನಡದ ಗದ್ಯ ಸಾಹಿತ್ಯಕ್ಕೆ ಒಂದು ಉತ್ತಮ ಕೊಡುಗೆಯನ್ನು ನೀಡಿದೆ. ಶಾಸನಗಳ ನಂತರದ ಮತ್ತೊಂದು ಮಹತ್ತರವಾದ ಬೆಳವಣಿಗೆ ಎಂದರೆ, ಶಿವಕೋಟ್ಯಾಚಾರ್ಯರು ರಚಿಸಿರುವ ವಡ್ಡಾರಾಧನೆ. ಇದು ಗದ್ಯ, ಮಾರ್ಗ ಮತ್ತು ದೇಶಿಗಳನ್ನೂ ಅಳವಡಿಸಿಕೊಂಡು ರಚನೆಯಾದ ಕೃತಿ. ಹತ್ತೊಂಬತ್ತು ಕಥೆಗಳನ್ನು ಒಳಗೊಂಡ ಗದ್ಯ ಕಥಾಕೋಶ ಕನ್ನಡದ ಮೊತ್ತಮೊದಲ ಕೃತಿಯೂ ಹೌದು. ಚಾವುಂಡರಾಯನಿಂದ ರಚಿತನಾದ ತ್ರಿಷಷ್ಠಿ ಲಕ್ಷಣ ಮಹಾಪುರಾಣ ಕನ್ನಡದ ಎರಡನೇ ಗದ್ಯ ಕೃತಿ, ಅರವತ್ತ ಮೂರು ಜನ ಪುರಾತನರ ಚರಿತ್ರೆಯನ್ನು ಹೇಳುತ್ತದೆ. ಈ ಕೃತಿಯು ಹಳಗನ್ನಡದಲ್ಲಿ ರಚನೆಯಾಗಿದ್ದು ಇದರ ಗದ್ಯ ಶೈಲಿಯ ವಿಶಿಷ್ಟವಾದುದೆನಿಸಿಕೊಂಡಿದೆ.

೧೦ನೇ ಶತಮಾನದಲ್ಲಿ ಗದ್ಯ ಪ್ರಕಾರಕ್ಕೆ ದೊರೆತ ಪ್ರಮುಖ ಕೊಡುಗೆ ಎಂದರೆ ಗದ್ಯ ಮತ್ತು ಪದ್ಯಗಳು ಮಿಶ್ರಿತವಾದ ಚಂಪೂ ಕೃತಿಗಳು. ಚಂಪೂವಿನಲ್ಲಿ ರಚಿಸಿದ ಪಂಪ, ರನ್ನ ಮುಂತಾದ

ತಮ್ಮ ಕೃತಿಗಳಲ್ಲಿ ಗದ್ಯವನ್ನೂ ಬಹಳ ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ದುರ್ಗಸಿಂಹನ ಪಂಚತಂತ್ರ, ನಯಸೇನನ ಧರ್ಮಾಮೃತಗಳಲ್ಲಿಯೂ ಗದ್ಯವೇ ಪ್ರಧಾನ ಸ್ಥಾನ ಪಡೆದುಕೊಂಡಿದೆ. ಹೀಗೆ ಹಳಗನ್ನಡದ ಹಲವಾರು ಕವಿಗಳು ತಮ್ಮ ಕೃತಿಗಳಲ್ಲಿ ಅಗತ್ಯಕ್ಕನುಗುಣವಾಗಿ ಗದ್ಯವನ್ನು ಬಳಸಿಕೊಂಡಿದ್ದಾರೆ.

೧೨ನೇ ಶತಮಾನದಲ್ಲಿ ಬಂದ ವಚನ ಸಾಹಿತ್ಯವು ಕನ್ನಡ ಗದ್ಯ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ತಿರುವನ್ನೂ ನೀಡಿತೆನ್ನಬಹುದು. ಜನ ಸಾಮಾನ್ಯರ ಸರಳ ಭಾಷೆಯನ್ನು, ವಿವಿಧ ಕಸುಬುಗಳಿಗೆ ಸೇರಿದ ಕಸುಬುದಾರರು ತಮ್ಮ ಕಸುಬಿನ ಪರಿಭಾಷೆಯನ್ನೇ ಬಳಸುವುದರ ಮೂಲಕ ಭಾಷೆಗೆ ಒಂದು ಹೊಸ ಚೈತನ್ಯವನ್ನು ನೀಡಿದರು. ಹಾಗೆಯೇ ಹರಿಹರನ ರಗಳೆಯಲ್ಲಿನ ಗದ್ಯವು ಕನ್ನಡ ಗದ್ಯ ಸಾಹಿತ್ಯಕ್ಕೆ ಮತ್ತೊಂದು ಪ್ರಮುಖವಾದ ಕೊಡುಗೆ ಎಂದು ಹೇಳಬಹುದು. ರಗಳೆಯು ವಚನಗಳ ಧೋರಣೆಯನ್ನು ತನ್ನಲ್ಲಿ ಅಳವಡಿಸಿಕೊಂಡು ಕನ್ನಡ ಗದ್ಯದ ಜೀವಂತಿಕೆಗೆ ಕಾರಣವಾಗಿದೆ.

೧೭ನೇ ಶತಮಾನದಲ್ಲಿ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಅದರಲ್ಲಿಯೂ ಚಿಕ್ಕದೇವರಾಜರ ಕಾಲದಲ್ಲಿ ಗದ್ಯವು ವಿಶೇಷವಾಗಿ ಬೆಳೆಯಿತು ಚಿಕ್ಕ ದೇವರಾಜ ಒಡೆಯರ **ಚಿಕ್ಕದೇವರಾಜ ಬಿನ್ನಪ** ತಿರುಮಲಾಂಬರ **ಚಿಕ್ಕದೇವರಾಜ ವಂಶಾವಳಿ** ಕನ್ನಡ ಗದ್ಯ ಸಾಹಿತ್ಯದ ಉತ್ತಮ ಮಾದರಿಗಳಾಗಿವೆ. ೧೯ನೇ ಶತಮಾನದಲ್ಲಿ ಗದ್ಯ ಪ್ರಕಾರವು ಹೊಸ ಚಿಂತನೆಗಳ ಮೂಲಕ ಜನಪ್ರಿಯತೆಯನ್ನೂ ಗಳಿಸಿತು. ಮುದ್ದಣನ 'ಅದ್ಬುತ ರಾಮಾಯಣ' 'ರಾಮಾಶ್ವಮೇಧ' ಮುಂತಾದ ಹತ್ತು ಕೃತಿಗಳಿಂದಾಗಿ ಈ ಯುಗವು ಗದ್ಯ ಸಾಹಿತ್ಯದ 'ಸುವರ್ಣಯುಗವೆನಿಸಿತು'. ಹೀಗೆ ಮುಂದುವರಿದ ಗದ್ಯವು ಸತ್ವಶಾಲಿಯಾಗಿ ಬೆಳೆದು ಹೊಸಗನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಿತು.

ಹೊಸಗನ್ನಡ ಸಾಹಿತ್ಯ ಹತ್ತು ಹಲವು ಪ್ರಕಾರಗಳಲ್ಲಿ ಹರಡಿಕೊಂಡಿದೆ. ಹಾಗೆಯೇ ಸಮೃದ್ಧವೂ, ಪ್ರಯೋಗಶೀಲವೂ ಆಗಿದೆ. ಕಾವ್ಯ, ಮಹಾಕಾವ್ಯ, ಕಾದಂಬರಿ, ಕತೆ, ವಿಮರ್ಶೆಗಳಲ್ಲಿ ಅದು ಇಂದಿನ ಭಾರತೀಯ ಭಾಷೆಯಲ್ಲಿಯೇ ಗಮನಾರ್ಹ ಸ್ಥಾನವನ್ನೂ ಅಲಂಕರಿಸಿದೆ. ಕನ್ನಡ ಭಾಷೆ ಸಾಹಿತ್ಯಗಳಿಗೆ ಸಾವಿರ ವರ್ಷಗಳಿಗೂ ಮಿಕ್ಕಿದ ಲಿಖಿತ ಇತಿಹಾಸ ಇದೆ. ಆದರೆ ಕನ್ನಡ ಭಾಷೆ ಸಾಹಿತ್ಯವು ಪಾಶ್ಚಿಮಾತ್ಯರ ಭಿನ್ನ, ಪ್ರೇರಣೆ, ಪ್ರಭಾವಗಳಿಂದಾಗಿ ಹೊಸ ಹೊಸ ರೂಪಗಳಲ್ಲಿ ಹೊರಬಂದಿತು. ಬ್ರಿಟಿಷರ ಅಧಿಕಾರ ದಬ್ಬಾಳಿಕೆ, ಹಿಂಸೆ ಅಸಮರ್ಪಕ ನೀತಿ, ಒಡೆದಾಳುವ ರೀತಿ ಮುಂತಾದ ಹಲವು ವಿಚಾರಗಳು ನಮ್ಮ ಭಾರತೀಯರಲ್ಲಿ ಸ್ವದೇಶಿಯ ಭಾವವು ಜಾಗೃತಗೊಳ್ಳುವಂತೆ ಮಾಡಿತು. ಮತ್ತೊಂದು ಬಗೆಯಲ್ಲಿ ಯೋಚಿಸುವುದಾದರೆ, ಇದೇ ವಿದೇಶಿಯರ ಮೂಲಕ ದೊರೆತ ಶಿಕ್ಷಣ, ಸಾರಿಗೆ, ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿಗಳ ಪರಿಚಯವಾಗುವಂತೆ ಮಾಡಿದವು. ಹತ್ತೊಂಬತ್ತನೆಯ ಶತಮಾನದ ಆಸುಪಾಸಿನ ಕನ್ನಡ ಸಾಹಿತಿಗಳು ಈ ಸಂದರ್ಭದಲ್ಲಿ ಭಿನ್ನವಾದ ಒಂದು ಮಾರ್ಗವನ್ನೂ ಕಂಡುಕೊಂಡರು. ಇದರ ಫಲವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ

ಭಾವಗೀತೆ, ಕಾದಂಬರಿ, ನಾಟಕ, ಸಣ್ಣಕತೆ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯಗಳಂಥ ಹತ್ತು ಹಲವು ಹೊಸ ಸಾಹಿತ್ಯ ರೂಪಗಳು ಬೆಳೆದು ಬಂದವು. ಸಾಂಪ್ರದಾಯಿಕ ಸಾಹಿತ್ಯಕ್ಕಿಂತ ಭಿನ್ನವಾದಂಥ ಸಾಹಿತ್ಯ ಇಲ್ಲಿ ಬೆಳೆದು ಬಂದಿತು. ಅಂತಹ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಪ್ರಬಂಧ ಸಾಹಿತ್ಯವೂ ಒಂದು.

'ಪ್ರಬಂಧ' ಎಂಬ ಪದ ಇಂಗ್ಲಿಷನ 'ESSAY' ಎಂಬುದಕ್ಕೆ ಸಂವಾದಿಯಾಗಿ ಬಳಸುವ ಕನ್ನಡ ಪದ. ಇದಕ್ಕೆ ಪ್ರಬಂಧ, ಲಘುಪ್ರಬಂಧ, ಭಾವ ಪ್ರಬಂಧ, ಆತ್ಮೀಯ ಹರಟೆ, ಗದ್ಯಚಿತ್ರ, ಭಾವಚಿತ್ರ ಎನ್ನುವ ಪರ್ಯಾಯ ಹೆಸರುಗಳನ್ನು ಬಳಸಲಾಗಿದೆ. ಆದರೆ ಹೆಚ್ಚು ಪ್ರಚಲಿತವಾಗಿರುವುದು 'ಲಲಿತ ಪ್ರಬಂಧ' ಎನ್ನುವ ಪದಸೂತ್ರವಾಗಿದೆ.

ಮೂಲತಃ ಫ್ರೆಂಚ್ ಭಾಷೆಯ 'ESSAY' ಪದವನ್ನೂ ಒಂದು ಪ್ರಯೋಗ, ಪ್ರಯತ್ನ ಉದ್ಯಮ ಎಂದು. ಈ ಪದವನ್ನು ಮೊದಲ ಬಾರಿಗೆ ನಾಮಕರಣ ಮಾಡಿದವನು 'ಫ್ರಾನ್ಸಿಸ್ ಮೈಕಲ್ ಮೂರಿಟೇನ್'[೧] ಈ ಪದವನ್ನು ಸರಿಯಾಗಿ ಸ್ಥಾನಾಂತರಿಸುವ ಸಮನಾರ್ಥ ಪದ ಕನ್ನಡದಲ್ಲಿ ಇಲ್ಲ. ಆದರೂ ಪ್ರಬಂಧ ಎಂಬ ಪದದಲ್ಲಿ ಆ ಅರ್ಥವನ್ನು ತುಂಬಿ ಬಳಸಲಾಗುತ್ತದೆ. ಪ್ರಬಂಧ ಎಂದರೆ ಕಟ್ಟು, ಸುಸಂಬದ್ಧವಾದ ರಚನೆ ಎಂದೂ ಅರ್ಥ. ಇದು ಆರಂಭದ ಸ್ವರೂಪವನ್ನೂ ಅರ್ಥಬದ್ಧವಾಗಿ ತಿಳಿಸಿಕೊಡುತ್ತದೆ. ಕನ್ನಡದಲ್ಲಿ ಪ್ರಥಮ ಪ್ರಬಂಧ ಸಂಕಲನ ೧೮೯೯ರಲ್ಲಿ 'ಲೋಕರಹಸ್ಯ' ಎಂಬ ಹೆಸರಿನಿಂದ ಪ್ರಕಟವಾಗಿದೆ. ಇದು ಅನುವಾದ ಮಾಡಿದ ಪ್ರಬಂಧ ಸಂಕಲನ. ಇದನ್ನು ಬಂಗಾಳದ ಲೇಖಕ ಬಂಕಿಮಚಂದ್ರರ ಕೃತಿಯಿಂದ ಕನ್ನಡಕ್ಕೆ ಅನುವಾದಿಸಲಾಯಿತು. ಕನ್ನಡ ಪ್ರಬಂಧದ ಪರಂಪರೆಯನ್ನೂ ನೋಡುವುದರ ಮೊದಲು ಇಂಗ್ಲಿಷ್ ಸಾಹಿತ್ಯದಲ್ಲಿ ಇದು ಬೆಳೆದು ಬಂದ ಮೆಟ್ಟಿಲುಗಳನ್ನೂ ನೋಡುವುದು ಉತ್ತಮ.

'ಎಸ್ಸೇಜ್ (essais) ಎಂದು ಮೊದಲನೇ ಬಾರಿ ತನ್ನ ಬರಹಗಳನ್ನು ಹೆಸರಿಸಿ ತನ್ನ ಚಿಂತನೆಗಳನ್ನು ಕತೆ ಉಪಕತೆಗಳೊಂದಿಗೆ ಮನೋಜ್ಞವಾಗಿ ಫ್ರೆಂಚ್ ಭಾಷೆಯಲ್ಲಿ ಬರೆದು ಪ್ರಕಟಿಸಿರುವ ಫ್ರೆಂಚ್ ಸಾಹಿತಿ ಮೈಕಲ್ ಮೊಂಟೇನ್. ಆತ ಬದುಕಿದ್ದು ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ. ಹೀಗೆ ಪ್ರಬಂಧ ಸಾಹಿತ್ಯದ ಆರಂಭ ೧೬ನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ಆಯಿತು. ಮೊಂಟೇನ್ ಅವರ ಬರವಣಿಗೆಯ ಶೈಲಿ ಅತ್ಯಂತ ಸಲಿಗೆ ಅಂತಃಕರಣ ಪೂರಿತವಾದ ಶೈಲಿ ಅವನು ತನ್ನ 'ಎಸ್ಸೇಜ್' ಎಂಬ ಪ್ರಬಂಧ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾನೆ. "ನನ್ನ ಈ ಪುಸ್ತಕ ಓದುತ್ತಿರುವ ರಸಿಕನೇ ನಿನಗೆ ನಾನು ಮೊದಲೇ ಎಚ್ಚರಿಕೆ ಕೊಡಬಯಸುತ್ತೇನೆ. ಈ ಪುಸ್ತಕ ಬರೆಯುವುದರಲ್ಲಿ ನನ್ನ ಅಭಿಲಾಷೆ ಕೇವಲ ವೈಯಕ್ತಿಕವಾದದ್ದು, ನಿನಗೆ ಉಪಕಾರ ಮಾಡಬೇಕು. ನಾನು ಇದರ ಮೂಲಕ ಕೀರ್ತಿಯನ್ನು ಗಳಿಸಬೇಕು. ಮುಂತಾದ ಯಾವ ಲವಲವಿಕೆಯೂ ನನ್ನಲ್ಲಿಲ್ಲ. ಈ ಬಗೆಯ ಆಶೋತ್ತರಗಳು ಯೋಗ್ಯತೆಗೆ ಮೀರಿದವು. ಇವುಗಳನ್ನೂ

ಬರೆದಿರುವುದು ನನ್ನ ಬಂಧುಗಳು ಹಾಗೂ ಮಿತ್ರರಿಗಾಗಿ. ನನ್ನ ಪ್ರಬಂಧಗಳಲ್ಲಿ ನೀವು ಗುರುತಿಸುವುದು ನನ್ನನ್ನೇ." ಹೀಗೆ ಮೂಂಟೇನನ ಪ್ರಬಂಧಗಳಲ್ಲಿ ನಾವು ಸ್ವಚ್ಛಂದ ಮನದ ವಿಹಾರವನ್ನೂ ಕಾಣುತ್ತೇವೆ. ಇವನು 'ವ್ಯಕ್ತಿಗತ ಪ್ರಬಂಧಗಳ ಜನಕ'ನೆಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಪ್ರಬಂಧ ಸಾಹಿತ್ಯದ ಆದಿ ಪುರುಷನೆಂದು ಹೇಳಲಾಗುತ್ತದೆ. ಈತನ ಪ್ರಬಂಧಗಳ ಇಂಗ್ಲಿಷ ಭಾಷಾಂತರಗಳು ಕ್ರಿ.ಶ. ೧೬೦೩ರಲ್ಲಿ ಪ್ರಕಟವಾದವು. ಈ ಸಂಕ್ಷಿಪ್ತ ಬರವಣಿಗೆಯ ಪ್ರಕಾರವನ್ನೂ ಆಯ್ದುಕೊಂಡು ಒಂದು ಬೇರೆ ತರಹ ಉದ್ದೇಶಕ್ಕಾಗಿ ಬಳಸಿಕೊಂಡವರು ಫ್ರಾನ್ಸಿಸ್ ಬೇಕನ್."

ಪ್ರಾನ್ಸಿಸ್ ಬೇಕನ್ (೧೫೬೧–೧೬೨೬) ಇಂಗ್ಲಿಷ್‌ನ ಪ್ರಥಮ ಪ್ರಬಂಧಕಾರ. ಇವನು ಶೇಕ್ಸಪಿಯರ್‌ನ ಸಮಕಾಲೀನನಾಗಿದ್ದನು. ವಿಜ್ಞಾನಿ ಮತ್ತು ತತ್ವಜ್ಞಾನಿಯೂ ಆಗಿದ್ದನು. ಈತನು ತನ್ನ ಜೀವಮಾನದಲ್ಲಿ ನೂರಾರು ಪ್ರಬಂಧಗಳನ್ನೂ ಬರೆದಿದ್ದು, ಅಲ್ಲಿ ಆತನ ಲೋಕಾನುಭವ, ಪಾಂಡಿತ್ಯ ಪ್ರಕಟಗೊಂಡಿದೆ. ಬೇಕನ್‌ನ ತರುವಾಯ ಪ್ರಬಂಧಗಳನ್ನು ಬರೆದ ಟೆಂಪ್ಲೆ ಇಂಗ್ಲಿಷ್ ಭಾಷೆಯ ಬಿಗಿಬಂಧವನ್ನು ಸಡಿಲಗೊಳಿಸಿ. ಅದನ್ನು ಸುಲಭಗ್ರಾಹ್ಯವಾಗುವಂತೆ ಮಾಡಿದನು. ಡ್ರೈಡನ್ ಪ್ರಬಂಧದ ಮಾಲೀಕತೆಯನ್ನು ಹೆಚ್ಚಿಸಿದನು. ಪ್ರಬಂಧ ಸಾಹಿತ್ಯಕ್ಕೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟವನು ಅಬ್ರಾಹ್ಮಕಾಲಿ; ಇವನು ಬರೆದಿದ್ದು ಸ್ವಲ್ಪವಾದರೂ ಅದು ಕಾವ್ಯಾತ್ಮಕವಾಗಿತ್ತು. ಯಾಕೆಂದರೆ ಆತನು ಕವಿಯೂ ಆಗಿದ್ದನು. ಫಲವಾಗಿ ಹದಿನಾಲ್ಕನೆಯ ಶತಮಾನದಲ್ಲಿ ಅನೇಕ ಸಾಹಿತಿಗಳು ಪ್ರಬಂಧ ರಚನೆಮಾಡಿದರು.

ಇವರಲ್ಲಿ ಹೆಸರಿಸಬಹುದಾದ ಪ್ರಬಂಧಕಾರರೆಂದರೆ, 'ಥಾಮಸ್ ಬ್ರೌನ್ ಪುಟರ್', ಡ್ರೈಡನ್, 'ಸರ್ ವಿಲಿಯಂ ಟೆಂಪಲ್' 'ಮಿಲ್ಟನ್' ಮತ್ತು 'ಡ್ಯಾನಿಯಲ್ ಡಿಫೈ' ಇವರುಗಳು. 'ರಾಬಿನ್ಸನ್ ಕ್ರುಸೊ'ದಂತಹ ಕಾಲ್ಪನಿಕ ಕತೆಯಿಂದ ಪ್ರಖ್ಯಾತನಾದ "ಡಿ ಪೋಲಿಟಲ್ ರಿವ್ಯೊ" ಎಂಬ ಮಾಲಿಕೆಯಲ್ಲಿ ಹಲವಾರು ಪ್ರಬಂಧಗಳನ್ನು ವೈಯಕ್ತಿಕ ಸುಂದರ, ಸಂಭಾಷಣೆಯ ಶೈಲಿಯಲ್ಲಿ ಬರೆದ ಡ್ರೈಡನ್‌ನ ಸತ್ವಪೂರ್ಣವಾದ ಪ್ರಬಂಧಗಳು ೧೮ನೇ ಶತಮಾನದಲ್ಲಿ ಅನುಸರಿಸಬಹುದಾದ ಮಾದರಿಗಳನ್ನೂ ಒದಗಿಸಿದವು. ೧೮ನೇ ಶತಮಾನದಲ್ಲಿ ಇಂಗ್ಲಿಷ್‌ನಲ್ಲಿ ಪ್ರಬಂಧ ಸಾಹಿತ್ಯ ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. ಕಾಫೀ ಹೌಸುಗಳ ಪ್ರಾಬಲ್ಯ ಆ ಕಾಲದಲ್ಲಿ ಹೆಚ್ಚಾಯಿತು. ಈ ಕಾಫೀ ಹೌಸುಗಳಲ್ಲಿ ಮಧ್ಯಮ ಹಾಗೂ ಉಚ್ಚವರ್ಗದ ಜನತೆ, ಅಂದಿನ ರಾಜಕಾರಣ ವಿಷಯಗಳನ್ನೂ ಚರ್ಚಿಸಲು ನೆರೆಯುತ್ತಿದ್ದರು. ಎಡಿಸನ್, ಸ್ಟೀಲ್, ಗೋಲ್ಡಸ್ಮಿತ್, ಜಾನ್ಸನ್ ಇನ್ನು ಹಲವಾರು ಲೇಖಕರಿಂದ ಈ ಸಾಹಿತ್ಯ ಲೋಕವು ಸಮೃದ್ಧವಾಗಿ ಬೆಳೆಯುವಂತಾಯಿತು. ಹೀಗೆ ಆರಂಭವಾದ ಅವರ ಪರಸ್ಪರ ಅವಲಂಬನೆ ಹತ್ತೊಂಬತ್ತು ಹಾಗೂ ಇಪ್ಪತ್ತನೆ ಶತಮಾನಗಳಲ್ಲಿಯೂ ಮುಂದುವರಿಯಿತು.

ಎಡಿಸನ್ ಹಾಗೂ ಸ್ಟೀಲ್ ಹಾಕಿದ ಪರಂಪರೆಯನ್ನು ಐವತ್ತು ವರ್ಷಗಳ ನಂತರ ಮತ್ತೆ ಅನುಸರಿಸಿದ ಬರಹಗಾರ "ಅಲಿವ್ಹರ ಗೋಲ್ಡಸ್ಮಿತ್" ಅವನು ದಿ ಪಬ್ಲಿಕ ಲೇಜರ್ (The Public

ledfer) ಮತ್ತು "ದಿ ಬೀ (The Bee) ಪತ್ರಿಕೆಗಳಲ್ಲಿ 'ಜೈನೀಜ ಲೆಟರ್ಸ್' ಎಂಬ ರಸಣಿಯಲ್ಲಿ ಪ್ರಬಂಧಗಳನ್ನು ಪ್ರಕಟಿಸಿದ. ಇವು ನಂತರ 'ವಿಶ್ವ ಪ್ರಪಂಚದ ನಾಗರಿಕ' (The citizan of ward) ಎಂಬ ಗ್ರಂಥರೂಪದಲ್ಲಿ ಪ್ರಕಟವಾದವು. ಗೋಲ್ಡಸ್ಮಿತ್‌ನು ತುಂಬಾ ಪ್ರಸಿದ್ಧಿಯನ್ನು ಪಡೆದ ಮಹತ್ವದ ಪ್ರಬಂಧಕಾರ. ಇವನು ಸಾತ್ವಿಕ ಉದಾರ ದೈವಿ ಆಗಿದ್ದನು. ಬಡವರಲ್ಲಿ ತುಂಬಾ ಅನುಕಂಪವುಳ್ಳವನಾಗಿದ್ದನು. ತಿಳಿ ಹಾಸ್ಯದ ಸರಳ ಶೈಲಿಯ ಈತನ ಪ್ರಬಂಧಗಳು ಹೆಚ್ಚು ಜನಪ್ರಿಯವಾಗಿವೆ. 'ಪಟ್ಟಣದಲ್ಲಿ ಒಂದು ರಾತ್ರಿ' ಎಂಬ ಪ್ರಬಂಧದಲ್ಲಿ ಈತನ ಅಂತಃಕರಣ ಶ್ರೇಷ್ಠ ಉದಾಹರಣೆಯೊಂದನ್ನು ನಾವು ಕಾಣಬಹುದು. ಮನೆಯಿಲ್ಲದ ಭಿಕ್ಷುಕರ ನಡುರಾತ್ರಿಯ ಚಳಿಯಲ್ಲಿ ಲಂಡನ್ನಿನ ಬೀದಿಯಲ್ಲಿ ಮಲಗಿ ನರಳುತ್ತಿರುವುದನ್ನು ನೋಡಿ ಮಾನವ ಜನ್ಮದ ಹುಟ್ಟಿನ ಬಗೆಗೆ ದೇವರನ್ನು ಪ್ರಶ್ನಿಸುವಂತೆ ಅಂತಃಕರಣ ಮುಖಿ ಈ ಲೇಖಕ. ಈತನ ಇನ್ನೊಂದು ಪ್ರಮುಖ ಪ್ರಬಂಧ 'ಕರಿ ಉಡುಪಿನವರು' ಎಂಬುವುದು ಅತ್ಯಂತ ಮಹತ್ವದ ಪ್ರಬಂಧಗಳಲ್ಲಿ ಒಂದಾಗಿದೆ. ಹೀಗೆ ಇನ್ನೂ ಮುಂತಾದವುಗಳಲ್ಲಿ ಸೊಗಸಾದ ಚಿತ್ರಣವಿರುವುದನ್ನೂ ಕಾಣಬಹುದು.

ಇದೇ ಕಾಲದಲ್ಲಿ ಜಾನ್ಸನ್ ಎಂಬ ಮೇಧಾವಿ ಅವರ ರ್‍ಯಾಂಬ್ಲರ್ ಮತ್ತು ಐಡ್ಲರ್ ಪತ್ರಿಕೆಗಳ ಮುಖಾಂತರ ಹಲವಾರು ಪ್ರಬಂಧಗಳನ್ನೂ ಬರೆದು ಪ್ರಕಟಿಸಿದ ಪ್ರಪಂಚದ ಅನೇಕ ವಿಷಯಗಳ ತಮ್ಮ ವಿಚಾರಗಳನ್ನೂ ಅವ್ಯಕ್ತಪಡಿಸಿದ. ಅವನದು ಗಡಚಾದ ಗಂಭೀರ ಶೈಲಿ. ಇದೇ ಗುಂಪಿಗೆ ಸೇರಿ 'ಲೇಹಂಟ' ಎಂಬುವನು 'ಎಕ್ಜಾಮಿನರ್' ಎಂಬ ಪತ್ರಿಕೆಯಲ್ಲಿ ಅನೇಕ ಪ್ರಬಂಧಗಳನ್ನೂ ಪ್ರಕಟಿಸಿ ಪ್ರಬಂಧ ಸಾಹಿತ್ಯಕ್ಕೆ ತಮ್ಮ ಸೇವೆಯನ್ನೂ ಸಲ್ಲಿಸಿದರು. ಈ ಪರಂಪರೆಯನ್ನು ಮುಂಬೈಯಲ್ಲಿ ಲಂಡನ್ನಿನ ಹಲವು ಪತ್ರಿಕೆಗಳು ನಡೆಸಿಕೊಂಡು ಬಂದವು. ಉದಾ: 'ದಿ ಲಂಡನ್ ಮ್ಯಾಗ್ ಝೀನ್', 'ದಿ ಎಡಿನ್ ಬರ್ಗ್‌ಂವ್ಯೂ', 'ದಿ ಮೆಂಚಸ್ಟರ್ ಗಾರ್ಡಿಯನ್', 'ದಿ ಪಾಲ್‌ಮಾಲ್‌ಗೆ ಝುಟ್', 'ದಿ ಮಿನಿಸ್ಯರ್ ಗೆಜೆಟ್' ಮುಂತಾದವು ಗೋಲ್ಡಸ್ಮಿತ್‌ನ ತರುವಾಯ ೧೯ನೇ ಶತಮಾನದಲ್ಲಿ ಪ್ರಬಂಧ ಸಾಹಿತ್ಯ ಒಂದು ನಿಖಿತ ಸಾಹಿತ್ಯ ಪ್ರಕಾರವಾಗಿ ರೂಪಗೊಂಡಿತು. ಹಲವಾರು ಬಗೆಯ ಪ್ರಬಂಧಗಳು ಮೂಡಿ ಬಂದವು. ಈ ಶತಮಾನವನ್ನು ಪ್ರಬಂಧ ಸಾಹಿತ್ಯ ಪ್ರಕಾರದ "ಸುವರ್ಣಯುಗವೆಂದೇ" ಹೇಳಬಹುದಾಗಿದೆ. ಈ ಯುಗದ ಪ್ರಮುಖ ಪ್ರಬಂಧಕಾರರೆಂದರೆ 'ಮಿಲಿಯಂ ಹ್ಯಾಜಲಿಲ್' ಓದುಗರ ಮನಸ್ಸಿನಲ್ಲಿ ಗೋಡೆಯಲ್ಲಿ ಹರಳಿಟ್ಟಂತೆ ಸ್ಪುಟವಾಗಿ ಮನಸ್ಸಿನಲ್ಲಿ ನೆಲಸುವಂತೆ ಬರಣಿಗೆಯ ಶೈಲಿ ಚಾಣಾಕ್ಷತನ. ಅವನದು ತನ್ನ ಚಿಂತನೆಗಳನ್ನೂ ಕಾವ್ಯಮಯವಾಗಿ ನಿರೂಪಿಸುವುದರಲ್ಲಿ ಎತ್ತಿದ ಕೈ. ಈ ಯುಗದ ಹರಿಕಾರರೆಂದರೆ, 'ಥಾಮಸ್ಸ್ ಡಿಕ್ವಿನ್ಸಿ' 'ಚಾರ್ಲ್ಸ್ ರ್‍ಯಾಂಬ' ಇನ್ನೂ ಮೊದಲಾದವರು. ಈ ಲ್ಯಾಂಬ ಹಲವು ಅತ್ಯಂತ ಸುಂದರ ಪ್ರಬಂಧಗಳ ಬರಹಗಾರ. ಅವನು 'ಲಂಡನ್ ಮೆಗಝೀನ್' ಪತ್ರಿಕೆಯಲ್ಲಿ ತನ್ನ ಪ್ರಬಂಧಗಳನ್ನು ಪ್ರಕಟಿಸಿದ. ಅವನೊಬ್ಬ 'ಶೈಲಿಯ ರಾಜ' ಅವನು ಮೃದು ಸ್ವಭಾವದವನು ವಾತ್ಸಲ್ಯ ಪೂರ್ಣಮಯ ಆದ

ಲ್ಯಾಂಬ ಹೃದಯ ಕರಗುವಂತೆ ಪ್ರಬಂಧಗಳಲ್ಲಿ ಹೆಚ್ಚಾಗಿ ತನ್ನ ಬಗ್ಗೆಯೇ ಬರೆದ. ಅವನಿಗೆ ಪ್ರಬಂಧಕಾರರ ರಾಜ ಎಂದು ಕರೆಯುತ್ತಿದ್ದರು. 'ಪ್ರಾಚೀನ ಪಿಂಗಾಣಿ ವಸ್ತುಗಳು' ಈತನ ಪ್ರಮುಖ ಪ್ರಬಂಧ. ಇವು 'ಇಲಿಯಾನ' ಪ್ರಬಂಧಗಳೆಂದು ಹೆಸರಾದವು.

ಈ ಇಲಿಯಾನ ಪ್ರಬಂಧ ಸಂಕಲನದಲ್ಲಿ '೩೨' ಪ್ರಬಂಧಗಳು ಹೊರಬಂದವು "ನನ್ನ ಒಂದು ವರ್ಗ; ನನ್ನ ಮೊದಲ ನಾಟಕ; ಕನಸಿನ ಮಕ್ಕಳು; ಬಡ ನಂಟರು; ಅಖಿಲ ಮೂರ್ಖರ ಜಯಂತಿ ಇಂತಹ ಹಲವು ಪ್ರಬಂಧಗಳು ಇಂಗ್ಲಿಷ್ ಪ್ರಬಂಧ ಸಾಹಿತ್ಯದಲ್ಲಿಯೇ ಒಂದು ಅಮರನಾದ ಶ್ರೇಷ್ಠ ದರ್ಜೆಯ ಸುಂದರ ಕೃತಿ.

ಇಪ್ಪತ್ತನೆ ಶತಮಾನದಲ್ಲಿ ಬೆಸ್ಟರಟನ್, ಲಿಂಚ್ ಮ್ಯಾಕ್ಸಬೀರ್ ಬ್ಲಾಮ್, ಎ.ಜಿ. ಗಾರ್ಡಿನರ್, ಇ.ವಿ. ಲ್ಯೂಕಾಸ್ ಮೊದಲಾದವರು ನೀಡಿದ ಪ್ರಬಂಧಗಳು ಈ ಸಾಹಿತ್ಯ ಪ್ರಕಾರ ಫಲವಿತವಾಗಿ ಬೆಳೆದು ಬರುವಲ್ಲಿ ಅತ್ಯಂತ ಸಂಗಮಕಾರಿಯಾಗಿದೆ. ಜಿ.ಕೆ. ಚೆಸ್ಟರಟನ್ ಒಬ್ಬ ವಿದ್ವಾಂಸ, ಈತನ ತಾರ್ಕಿಕ ಶಕ್ತಿ ಅಗಾಧವಾದುದು. ಅವನ ಬರವಣಿಗೆಯ ರೀತಿ ವಿಶಿಷ್ಟವಾದುದು ಅನೇಕ ಕಡೆಗಳಲ್ಲಿ ವಿರೋಧಾಭಾಸದ ಹೇಳಿಕೆಗಳನ್ನೂ ನೀಡುತ್ತಾ ಪ್ರಬಂಧ ಬೆಳೆಸುವುದು ಈತನ ಜಾಯಮಾನ. ಈತನ ಪ್ರಬಂಧಗಳ ಶೀರ್ಷಿಕೆಗಳು ಕುತೂಹಲವೂ ಆಕರ್ಷಕವೂ ಆಗಿದ್ದವು. ಉದಾ:'ಕೋಪಗೊಂಡ ರಸ್ತೆ' 'ದೆವ್ವಗಳ ಅಂಗಡಿ' 'ವೈದಿಕನಾದ ಹಜಾಮ' ಇತ್ಯಾದಿ ಶೀರ್ಷಿಕೆಗಳನ್ನು ನೋಡಿದಾಗ ಇವುಗಳ ಮಹತ್ವ ಅರಿಯುತ್ತದೆ. ಇಷ್ಟೇ ಪ್ರಖ್ಯಾತನಾದ ಇನ್ನೋರ್ವ ಪ್ರಬಂಧಕಾರ. 'ಇ.ವಿ. ಲ್ಯೂಕಾಸ್'. ಈತನ ಪ್ರಬಂಧಗಳು ಸಣ್ಣಕತೆಗಳಂತೆ ವರ್ಣನಾತ್ಮಕ ಶೈಲಿಯಲ್ಲಿ ಹಾಸ್ಯಮಯವಾಗಿ ಸ್ವಾರಸ್ಯಮಯವಾಗಿವೆ. 'ಸಮಿತಿ ಸದಸ್ಯರು', 'ಪಟ್ಟಣಗಳ ಸ್ನೇಹಿತ', 'ಅಸಫಲವಾದ ತತ್ತ್ವಜ್ಞಾನಿ' ಇವು ಜನಪ್ರಿಯವಾದವು. ಒಟ್ಟಾರೆ ಇವರ ಅಲಂಕಾರಿಕ ಭಾಷೆ. ಓದುಗರಿಗೆ ರಂಜನಿಯವಾದದ್ದು. ಓದುಗರಿಗೆ ಖುಷಿಕೊಡುತ್ತದೆ. ಪ್ರಬಂಧ ಸಾಹಿತ್ಯದ ಉನ್ನತ ದರ್ಜೆಯ ಸಾಹಿತಿ ಎಂದರೆ ಎ.ಜಿ. ಗಾರ್ಡಿನರ್. ಈತನ ಪ್ರಬಂಧ ಸಾಹಿತ್ಯದ ನಿರೂಪಣಾ ಶೈಲಿಯನ್ನು ಮೆಚ್ಚಿಕೊಂಡಿರದ ಓದುಗರೇ ಇಲ್ಲವೆನ್ನುವಷ್ಟು ಅದ್ಭುತವಾದ ನಿರೂಪಣೆ ಈತನ ಪ್ರಬಂಧ ಸಂಕಲನದಲ್ಲಿ ಇದೆ.

ಈತನ ಪ್ರಸಿದ್ಧ ಸಂಕಲನವೆಂದರೆ 'ಲೀವ್ಸ್ ಇನ್ ದಿ ವಿಂಡ್', 'ಪೇಬಲ್ಸ್ ಆನ್ ದಿ ಶೋರ್' ಪ್ರಬಂಧಗಳಲ್ಲಿ ತಿಳಿಹಾಸ್ಯ, ವಿಚಾರ ಪ್ರಚೋದನೆಯೂ ಇದೆ. ಇವುಗಳ ಜೊತೆಗೆ ಈತನ ಅವಿಸ್ಮರಣೀಯ ಪ್ರಬಂಧ ಸಂಕಲನ 'ಒಂದು ನಾಯಿಯನ್ನು ಕುರಿತು' (All about a dog). ಇದು ಒಂದು ಶ್ರೇಷ್ಠ ಉದಾಹರಣೆ ಕಣ್ಮುಂದೆ ಕಟ್ಟುವಂಥ ವರ್ಣನೆಗಳನ್ನು ನೀಡುವ ಅವನ ಚಾತುರ್ಯಕ್ಕೆ 'ಜಾಮ ಸಾಹೇಬ ಆಫ್ ನವರಂಗ' ಸಾಕ್ಷಿ ಗಾರ್ಡಿನರನಂತೆಯೇ 'ಬೇಲಾರ್' ಒಬ್ಬ ಚಿತ್ರಕ ಶಕ್ತಿಯ ಪ್ರಬಂಧಕಾರ ಇವನ ಸಮಕಾಲೀನನಾದ ರಾಬರ್ಟ್ ಲಿಂಡ್ ಒಬ್ಬ ಮೇಧಾವಿ ಲೇಖಕ, ಇವನ ಕಥನ ಕಲೆ ವಿಶೇಷವಾದುದು, ಸಾಮರ್ಥ್ಯ ಗಮನಾರ್ಹವಾದುದು.

'ಬೆಕ್ಕುಗಳು', ಮೊಟ್ಟೆಗಳು 'ಒಳ್ಳೆಯ ಸಂಕಲ್ಪಗಳು' 'ಅಜ್ಞಾನದ ಸಂತೋಷಗಳು' ಇವುಗಳು ಓದಲು ತೊಡಗಿಸುವಂತಹ ಪ್ರಬಂಧಗಳಾಗಿವೆ.

ಫ್ರೆಂಚ್ ಸಾಹಿತಿ ಮೈಕಲ್ ಮೂಂಟೇನ್ ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ 'ಎಸ್ಸೆಜ್' ಎಂಬ ಮೊದಲಬಾರಿ ತನ್ನ ಬರಹಗಳನ್ನು ಪ್ರಾರಂಭನ ಇಂಗ್ಲಿಷ ಪ್ರಬಂಧ ಸಾಹಿತ್ಯದ ಧನಾತ್ಮಕವಾದ ಹುಟ್ಟಿಗೆ ಕಾರಣವಾಗಿ ನಂತರ ಈ ಪ್ರಬಂಧ ಸಾಹಿತ್ಯವು ಮೇಲೆ ತಿಳಿಸಿದ ಹಾಗೆ ಅನೇಕ ವಿಶ್ವವಿಖ್ಯಾತ ಪ್ರಬಂಧ ಸಾಹಿತಿಗಳನ್ನು ಪರಿಚಯಿಸುವುದರ ಜೊತೆಗೆ ಇದನ್ನು ಪ್ರಪಂಚದ ಒಂದು ಪ್ರಮುಖ ಸಾಹಿತ್ಯ ಮಾಡುವಲ್ಲಿ ಮೂಂಟೇನನಿಂದ ಲ್ಯೂಕಾಸ್‌ನವರೆಗಿನ ಇಂಗ್ಲಿಷ್ ಪ್ರಬಂಧಗಳ ವೈವಿಧ್ಯತೆಯ ಕಾರಣನೆಂದು ಹೇಳಬಹುದು. ಅಷ್ಟೇ ಅಲ್ಲದೆ ಈ ಸಾಹಿತ್ಯ ಪ್ರಕಾರವನ್ನು ಅಷ್ಟೆ ಲವಲವಿಕೆಯಿಂದಲೇ ಬಳಸಿದ್ದು ಇಂಗ್ಲಿಷ್ ಪ್ರಬಂಧ ಸಾಹಿತ್ಯದ ಒಂದು ವೈಶಿಷ್ಟವಾಗಿದೆ.

ಕನ್ನಡ ಪ್ರಬಂಧ ಸಾಹಿತ್ಯವು ಬೆಳೆದು ಬಂದ ದಾರಿಯನ್ನು ನಾವು ಗಮನಿಸಿದಾಗ ಕನ್ನಡ ಪ್ರಬಂಧ ಪ್ರಾರಂಭವಾದದ್ದು ನವೋದಯ ಸಾಹಿತ್ಯದೊಂದಿಗೆ. ನವೋದಯಕ್ಕೆ ಒಂದು ಪೂರ್ವಸಿದ್ಧತೆ ಈ ಪ್ರಬಂಧ ಬರವಣಿಗೆಯಲ್ಲಿ ಒಂದಿಷ್ಟು ಪೂರ್ವಸಿದ್ಧತೆ ಇರುವುದನ್ನೂ ಸಾಹಿತ್ಯ ಇತಿಹಾಸಕಾರರು ಗುರುತಿಸಿದ್ದಾರೆ. "೧೮೯೮ರಲ್ಲಿ 'ಲೋಕರಹಸ್ಯ' ಎಂಬ ಪ್ರಪ್ರಥಮ ಅನುವಾದಿತ ಪ್ರಬಂಧ ಸಂಕಲನವಾಗಿದ್ದು ಇದು ಕನ್ನಡದ ಮೊದಲ ಪ್ರಬಂಧ ಸಂಕಲನವಾಗಿದೆ. 'ಲೋಕರಹಸ್ಯ' ಸಂಕಲನವು ಮೂಲತಃ ಬಂಗಾಳಿ ಸಾಹಿತಿ ಬಂಕಿಮಚಂದ್ರರ ಕೃತಿಯಿಂದ ಕನ್ನಡಕ್ಕೆ ಜಿ. ವೆಂಕಟಾರ್ಯರು ಅನುವಾದಿಸಿದರು."[೩] ೧೮೯೮ರಲ್ಲಿ 'ಗ.ಹು. ಹೊನ್ನಾಪುರಮಠ' ಅವರು 'ನೀತಿ ಮಂಜರಿ' ಎಂಬ ಹೆಸರಿನಲ್ಲಿ ಮೂವತ್ತನಾಲ್ಕು ಲಲಿತ ಪ್ರಬಂಧಗಳ ಸಂಕಲನವನ್ನೂ ಪ್ರಕಟಿಸಿದರು. ೧೯೧೩ರಲ್ಲಿ ಬಿ. ವೆಂಕಟಾಚಾರ್ಯರ ದಾಡಿಯ ಹೇಳಿಕೆ ಕನ್ನಡ ಲಲಿತ ಪ್ರಬಂಧದ ಪ್ರಪ್ರಥಮ ಸ್ವತಂತ್ರ ಪ್ರಬಂಧ ಸಂಕಲನವಾಗಿ ಪ್ರಕಟವಾಯಿತು. ೧೯೧೪ರಲ್ಲಿ ಇವರ ಮತ್ತೊಂದು "ಚಿತ್ರ ವಿಚಿತ್ರವಾಳಿ" ಸ್ವತಂತ್ರ ಲಲಿತ ಪ್ರಬಂಧವನ್ನು ಪ್ರಕಟಮಾಡಿದರು. ಇದು ಕನ್ನಡದ ಪ್ರಬಂಧ ಸಾಹಿತ್ಯದ ಪ್ರಾರಂಭಿಕ ಹೆಜ್ಜೆಗಳನ್ನೂ ಗಟ್ಟಿಯಾಗಿ ಊರುವಂತೆ ಮಾಡಿದೆ.

ಒಟ್ಟಾರೆ ೧೯೩೧ರಲ್ಲಿ ಲಲಿತ ಪ್ರಬಂಧ ಚರಿತ್ರೆಯಲ್ಲಿ ಗಮನಾರ್ಹ ವರ್ಷ. ಆ ವರ್ಷದಲ್ಲಿ ಕನ್ನಡ ಪ್ರಸಿದ್ಧ ಲೇಖಕರು ಕೆಲವು ಪ್ರಬಂಧ ಸಂಕಲನಗಳನ್ನು ಹೊರತಂದರು. ಅಂಥವರಲ್ಲಿ ಪ್ರಮುಖರೆಂದರೆ, ಎಂ.ಜಿ. ವೆಂಕಟೇಶಯ್ಯನವರ ಹೆಸರು ಮೊದಲಿಗೆ ಬರುತ್ತದೆ. ಅವರು ತಮ್ಮ ಪ್ರಬಂಧಗಳನ್ನು 'ಪುಲ್ಲಯ್ಯನ ಪ್ರಬಂಧಗಳು' ಎಂಬ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಎರಡನೆಯ ಭಾಗ ೩೩ ಪುಟಗಳಲ್ಲಿ ನಾಲ್ಕು ಪ್ರಬಂಧಗಳನ್ನು ಒಳಗೊಂಡಿವೆ.[೪] ಜೈಲಿ ದರ್ಶನ, ಶೈಲಿ, ಮೀಸೆ, ಮುಖಸ್ತುತಿ ಇವೆ ಆ ನಾಲ್ಕು ಪ್ರಬಂಧಗಳನ್ನು ಪ್ರಬಂಧಕಾರರು ಒಮ್ಮೆ ಜೈಲನ್ನು ನೋಡಲು

ಹೋದ ಬಗ್ಗೆ ಬರೆಯುತ್ತ ಅಷ್ಟೇನು ಮಧುರವಲ್ಲದ ಅನುಭಗಳನ್ನು ಸಹ ತಮ್ಮ ವಿಶಿಷ್ಟ ವಿಷಯ ನಿರೂಪಣೆಯಿಂದ ಸೊಗಸಾಗಿ ಚಿತ್ರಿಸಿದ್ದಾರೆ. ಪ್ರಬಂಧದ ಮಧ್ಯ ತೋರುವ ಹಾಸ್ಯದ ಲೇಪದಿಂದಾಗಿ ಅವರು ಓದುಗರ ಮನಸ್ಸನ್ನು ಹಗುರಗೊಳಿಸುತ್ತಾರೆ. ಒಟ್ಟಿನಲ್ಲಿ ಪ್ರಬಂಧದ ಲಕ್ಷಣ ಹಾಗೂ ಬರವಣಿಗೆಯ ಶೈಲಿಗಳನ್ನು ಚೆನ್ನಾಗಿ ಮನಗಂಡಿದ್ದ ಎಂ.ಜಿ. ವೆಂಕಟೇಶಯ್ಯನವರು ಆಡುಮಾತಿನೊಂದಿಗೆ ವಸ್ತು ವೈವಿಧ್ಯದಿಂದ ಏನನ್ನು ಮಿತಿ ಮೀರಿ ಬೆಳೆಸದೆ ಕನ್ನಡಕ್ಕೂ ಒಳ್ಳೆಯ ಪ್ರಬಂಧಗಳನ್ನು ನೀಡಿದ್ದಾರೆ.

ದ.ರಾ. ಬೇಂದ್ರೆ, ವಿ.ಕೃ. ಗೋಕಾಕ, ರಂ.ಶ್ರೀ.ಮುಗಳಿ, ಹಲಸಂಗಿ ಚನ್ನಮಲ್ಲಪ್ಪ ಮುಂತಾದವರ ಉತ್ತಮ ಪ್ರಬಂಧಗಳು ಇದರಲ್ಲಿ ಸೇರಿವೆ. ಹಾಗೆ ಇದೆ ಅವಧಿಯಲ್ಲಿ ಪು.ತಿ. ನರಸಿಂಹಾಚಾರ್ ಅವರು 'ರಾಮಾಚಾರಿಯ ನೆನಪುಗಳು' ಎಂಬ ಮೊದಲ ಭಾವನಾಂಶ ಚಿತ್ರಗಳಿಗೆ ಪ್ರಧಾನವಾಗಿರುವಂತೆ ಒಂದು ಪ್ರಬುದ್ಧ ಪ್ರಬಂಧ ಸಂಕಲನವನ್ನು ಪ್ರಕಟಿಸಿದ್ದಾರೆ. ಇವುಗಳು ಹೆಚ್ಚಾಗಿ ರಚನಾ ಶೈಲಿಯಲ್ಲಿ ಕಥನಾತ್ಮಕ ಅಂಶಗಳನ್ನು ಒಳಗೊಂಡಿವೆ. ಈ ಲೇಖನಗಳು ಪ್ರಬಂಧದ ಬರವಣಿಗೆಗೆ ಬಹಳ ಹತ್ತಿರವಾಗಿದ್ದವು. ಪುತಿನ ಅವರೇ ಅವುಗಳನ್ನು ಭಾವನಾ ಚಿತ್ರಗಳೆಂದು ಕರೆದಿದ್ದಾರೆ.

ಒಟ್ಟಾರೆ ೧೯೩೫ರ ನಂತರ ಪ್ರಬಂಧ ಎಂಬ ಪ್ರಕಾರ ಸಾಹಿತ್ಯವು ಈ ಘಟ್ಟದಲ್ಲಿ ಅತ್ಯಂತ ಫಲಪ್ರದವಾಗಿ ಹಾಗೂ ಸ್ಪಷ್ಟವಾಗಿ ಇದುವೇ ಪ್ರಬಂಧ ಎನ್ನುವಷ್ಟರ ಮಟ್ಟಿಗೆ ಅದರ ಲಕ್ಷಣಗಳುಳ್ಳ ಸಂಕಲನಗಳು ಬಹಳವಾಗಿ ಪ್ರಕಟಗೊಂಡವು. ವಸ್ತುವಿನಲ್ಲೂ ನಿರೂಪಣೆಯಲ್ಲೂ ತುಸು ವೈವಿಧ್ಯಮಯ ಪ್ರಬಂಧಗಳು ಮೂಡಿ ಬಂದವು. ಈ ದಿಶೆಯಲ್ಲಿ ಅನೇಕ ಲೇಖಕರ ಶ್ರಮವು ಫಲಪ್ರದವಾಯಿತು. ಕನ್ನಡ ಪ್ರಬಂಧ ತನ್ನ ಮೊದಲ ಘಟ್ಟದಲ್ಲಿ ಅಂದರೆ ೧೯೩೫ರಿಂದ ೧೯೬೦ರ ಅವಧಿಯಲ್ಲಿಯೇ ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ೧೯೩೬ರಲ್ಲಿ ಮಂಗಳೂರಿನ ಮಿತ್ರಮಂಡಲಿ ಪ್ರಕಟಿಸಿದ 'ತರಂಗ' ಎಂಬ ಸಂಕಲನವನ್ನೂ ಇಲ್ಲಿ ಹೆಸರಿಸಬೇಕಾಗುತ್ತದೆ. ಇದರಲ್ಲಿ ಎಂ.ಎನ್. ಕಾಮತ್‌ರ ಸುಪ್ರಸಿದ್ಧ ಪ್ರಬಂಧ 'ನನ್ನ ಕೊಡೆ' ಸೇರ್ಪಡೆಯಾಗಿದೆ. ಈ ಪ್ರಬಂಧದ ಪೀಠಿಕೆಯ ಕೆಲವು ಸಾಲು ಹೀಗಿದೆ. "ಎರಡು ಮಳೆ ಸುರಿಯಿಪೋ ನಾಯಿ ಕೊಡೆ, ಕಪ್ಪೆಕೊಡೆ, ಕಾಗೆಕೊಡೆ ಮೊದಲಾದ ಅಳಿಂಚೆಗಳು ತಲೆಯೆತ್ತುವುವು. ಮತ್ತೇನು ಮನುಷ್ಯ ಕಡಿಮೆಯಾದವನೇ? ಅವಸರವಸರವಾಗಿ ತನ್ನ ಕೊಡೆ ಎಲ್ಲಿದೆ ಎಂದು ಹುಡುಕುತ್ತಾ ಮನೆಯನ್ನೆಲ್ಲ ತಲೆಕೆಳಗಾಗುವಂತೆ ಮುಗುಚುವನು. ಎಂಟು ತಿಂಗಳು ವಿರಹ ಜ್ವರ ಹಿಡಿದು ಮೂಲೆಪಾಲಾದ ಕೊಡೆಯು, ಜೀರ್ಣವಾಗಿ ಇದೇ ಮಳೆಗಾಲದ ನಾಲ್ಕು ತಿಂಗಳ ವಿರಹಕ್ಕಾಗಿ ನಮ್ಮ ಪ್ರಾಣಿ ಗ್ರಹಣ ಮಾಡುತ್ತದೆ. ಪರಂತು ಎಲ್ಲ ವಧುಗಳಂತೆ ವಿರಹಿಯಾದ ಕೊಡೆಯು ಕೈ ಹಿಡಿದವನ ತಲೆಯ ಮೇಲೂ ಕೆಲವು ಕಣ್ಣೀರು ಪಟುಕುಗಳನ್ನು..... ಸುರಿಸಿದ್ದೇ ಇಲ್ಲ. ಇಷ್ಟುದಿನ ದೊರೆತ ಅಲ್ಪ ಮರ್ಯಾದೆಗಾಗಿ ಪ್ರವೇಶಕಾರ

ಮಾಡಲು ಕೈಹಿಡಿದಾತನನ್ನು ಬಿಟ್ಟು, ಎತ್ತಲೋ ಹಾರಿ, ಮುದಿಡಿ ಬೀಳುವುದೂ ಉಂಟು; ಅಥವಾ ಯಾವನೊಬ್ಬ ನವವಧು ನಿರೀಕ್ಷಕನ ಕೈಸೇರುವುದು ಉಂಟೆನ್ನುವ; ಆಗ ಅದೊಂದು ಪುನರ್ವಿವಾಹವಾಗುವುದು."[೫]

ಕನ್ನಡ ಪ್ರಬಂಧ ಸಾಹಿತ್ಯ ಬೆಳೆದು ಬಂದಿದ್ದನ್ನು ಸ್ಪಷ್ಟವಾಗಿ ಅರಿಯಲು ಸಾಧ್ಯವಾಗುತ್ತದೆ. ಆ ಉದ್ದೇಶದಿಂದ ಇಲ್ಲಿ ಆಯ್ದ ಕೆಲವು ಲೇಖಕರ ಪ್ರಬಂಧಗಳು ಹಾಗೂ ಅವರ ವಿಶಿಷ್ಟ ರಚನಾ ಶೈಲಿಯ ನಿರೂಪಣೆ ಕುರಿತು ಚರ್ಚಿಸಲಾಗಿದೆ.

'ಬೇಂದ್ರೆ'

ಬೇಂದ್ರೆಯವರ ಪ್ರಬಂಧಗಳು ಸಾಹಿತ್ಯದ ವಿರಾಟಸ್ವರೂಪವಾಗಿ ನಮ್ಮದುರಿಗೆ ಬಂದು ನಿಲ್ಲುತ್ತವೆ. ಅವರ ಪ್ರಬಂಧ ರಚನಾಶೈಲಿಯು ಹಾಸ್ಯ ಮಿಶ್ರಿತ ಚಿಂತನ ಶೀಲತೆಯನ್ನು ಮೈಗೂಡಿಸಿಕೊಂಡು ಬರುವಂಥ ಪ್ರಬಂಧಗಳನ್ನು ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಬೆಂದ್ರೆಯವರು ನೀಡಿದ್ದಾರೆ. ಸಾಹಿತ್ಯವನ್ನೂ ಬದುಕಿನಲ್ಲಿ ಬೇಂದ್ರೆಯವರು ಕನ್ನಡಿಗರಿಗೆ ಬಿಟ್ಟುಹೋದ ಆಸ್ತಿ ಅನನ್ಯವಾದುದು. ಅವರ ಕಾವ್ಯ ಕನ್ನಡದಲ್ಲಿ ಹೇಗೆ ಅನರ್ಘ್ಯವೋ ಅವರ ಗದ್ಯ ಕೂಡಾ ಅದರಲ್ಲಿಯ ಹರಟೆಯಲ್ಲಿರುವ ಇವರ ಪ್ರಬಂಧಗಳು ಅಷ್ಟೇ ಮಹತ್ವಯುತವಾದವು. ಇವರ ಹಾಸ್ಯ ಹುಚ್ಚು ನಗೆಯನ್ನು ತರುವಂಥದು. ಅವರ 'ಕಸಬರಿಗೆ' 'ಉಗಳು' ಪುರಾಣದಲ್ಲಿ ಉಲ್ಲಾಸದ ನಗೆಯನ್ನು ತೋರಿಸಿದರು. ಜೊತೆಯಲ್ಲಿ ಸಾವಿನೊಡನೆ ಸರಸ, ಸೋಮಾರಿತನವೆಂಬ ಸದ್ಗುಣ ಇತ್ಯಾದಿ ಪ್ರಬಂಧಗಳನ್ನು ಈ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ನೀಡಿದರು.

'ಕುವೆಂಪು'

ನವೋದಯ ತಲೆಮಾರಿನ ಮಹತ್ವದ ಕವಿಗಳಲ್ಲಿ ಒಬ್ಬರಾದ ಕುವೆಂಪು ಅವರ ಕವಿಯಿತ್ರಿ ಪ್ರತಿಭೆ ಕಾವ್ಯಧ್ಯಾನದಲ್ಲಿಗೆ ಸೀಮಿತವಾಗದೆ ಪ್ರತಿಭಾ ಶಕ್ತಿ ಗದ್ಯ ಮಾಧ್ಯಮದ ಮೂಲಕವು ತನ್ನ ಲೀಲಾ ವಿಲಾಸದ ವೈವಿಧ್ಯ ವೈಚಿತ್ರಗಳನ್ನು ಮೆರೆದು, ಕನ್ನಡಿಗರಿಗೆ ಮೌಲಿಕಗದ್ಯ ಕೃತಿಗಳನ್ನು ಇತ್ತುದನ್ನು ಮರೆಯಲಾಗದು.

ವಿವಿಧ ವಿಷಯಗಳನ್ನು ಕುರಿತು ರಚನೆಗೊಂಡ ಆ ಪ್ರಬಂಧಗಳು ವೈಚಾರಿಕತೆ, ಸೋಪಜ್ಞತೆ ಮತ್ತು ಚಿಂತನಶೀಲತೆಯ ದೃಷ್ಟಿಯಿಂದ ಪ್ರಶಂಸನಾರ್ಹವಾಗಿದೆ. ಕನ್ನಡಕ್ಕಿರುವ ಪ್ರಬಂಧ ಸಾಹಿತ್ಯದ ಕೊರತೆಯನ್ನು ತುಂಬಿಕೊಡುವಲ್ಲಿ ಹಾಗೂ ಅದರ ಶ್ರೀಮಂತಿಕೆಯನ್ನೂ ಹೆಚ್ಚಿಸುವಲ್ಲಿ ಸಮರ್ಥವಾಗಿದೆ. ಆದುದರಿಂದ ಪ್ರಬಂಧ ಸಾಹಿತ್ಯದ ಮೂಲಕವೂ ಪುಟ್ಟಪ್ಪನವರಿಂದ ಕನ್ನಡ ಸಾಹಿತ್ಯಕ್ಕೆ ಸಂದ ಸೇವೆ ಗಮನಾರ್ಹ. ಇವರ ಪ್ರಬಂಧಗಳು ಎಷ್ಟೊಂದು ವಿಶಿಷ್ಟವೆಂದರೆ ಇವುಗಳನ್ನು ಒಟ್ಟಾರೆಯಾಗಿ ಅಧ್ಯಯನ ಮಾಡಬೇಕೆಂದರೆ ಇವರ ಪ್ರಬಂಧಗಳ ಬಿತ್ತರಿಸುವ ವಿಚಾರ ದೃಷ್ಟಿಯಿಂದ ಇವುಗಳನ್ನು

ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. "ಮಲೆನಾಡಿನ ಚಿತ್ರಗಳು" ಮಹಾಕವಿ ಕುವೆಂಪು ಅವರ ಪೂರ್ವಾಶ್ರಮದ ಅನುಭವಗಳಂತಿವೆ. ಮಹೋಪಮೆ, ಭೂಮಾನುಭೂತಿ, ದಿವ್ಯ ನಿರ್ಲಕ್ಷ ಇವೆಲ್ಲ ಉತ್ತರಾಶ್ರಮದ ಕಲ್ಪನೆಗಳು. ನವಿಲುಕಲ್ಲು, ಸಿಬ್ಬಲುಗುಡ್ಡೆ, ಸಾರಿಕೆಬೇಟೆ, ಮರುಸುಬೇಟೆ, ಬೆಳ್ದಿಂಗಳ ಬೇಟೆ ಇತ್ಯಾದಿಗಳು ಬಾಲ್ಯದಿಂದ ಕಂಡುಕೊಂಡ, ಯೌವನದಲ್ಲಿ ಕುತೂಹಲದಿಂದ ಅನುಭವಿಸಿದ ಮಲೆನಾಡಿನ ಸ್ಥಳಗಳು ಮತ್ತು ಕ್ರಿಯೆಗಳು. ಕುವೆಂಪು ಅವರ ಚಿತ್ರೀಕರಣ ಕಲೆ ಅದ್ಭುತವಾದುದು. ನಾಯಿ ಹಾವಿನ ಹೆಡೆಯ ಚಲನೆಗೆ ಹೊಂದಿಕೊಂಡು ಹಾರಾಡುತ್ತಿತ್ತು. ನಾಗರಹಾವು ಹೆಡೆಯನ್ನೂ ಹಿಂದಕೆಸೆಯಲು ಅದು ಮುಂದೆ ಮುಂದೆ ಹಾರುವುದು. ಈ ದೃಶ್ಯ ರುದ್ರ ಮನೋಹರವಾಗಿತ್ತು. ನನ್ನ ಬಳಿ ಕ್ಯಾಮರಾ ಇದ್ದಿದ್ದರೆ, ಎಂತಹ ನೋಟವನ್ನು ಹಿಡಿಯಬಹುದಾಗಿತ್ತು; ಆದರೆ "ರೈಫಲ್ ಇತ್ತು!". ಕ್ಯಾಮರಾಬದಲು ರೈಫಲ್ ಇತ್ತು ಎಂಬ ಮುಕ್ತಾಯದಲ್ಲಿ ಹಾಸ್ಯ ಪ್ರಬಂಧದ ವ್ಯಂಜಕ ಗುಣವಿರುವುದನ್ನು ಕಾಣಬಹುದಾಗಿದೆ. ಇಲ್ಲಿಯ ಶಬ್ದ ಚಿತ್ರವೇ ಒಂದು ಫೋಟೋಗ್ರಫಿಯಂತಿದೆ. ಕುವೆಂಪು ಶೈಲಿಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ."[೬]

'ಮಾಸ್ತಿ ವೆಂಕಟೇಶ ಅಯ್ಯಂಗಾರ್'

ಸಣ್ಣ ಕಥೆಗಳ ಜನಕರೆಂದೆ ಖ್ಯಾತರಾದ ಇವರು ಕಾವ್ಯ, ಕಾದಂಬರಿ, ಜೀವನ ಚರಿತ್ರೆ ಪ್ರಬಂಧ ಮೊದಲಾದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಅನುಪಮವಾದ ಕೊಡುಗೆ ನೀಡಿದ್ದಾರೆ. ವಿವಿಧ ವಿಷಯಗಳನ್ನು ಕುರಿತು ಅನುಭವಪೂರ್ಣ ಪ್ರಬಂಧಗಳನ್ನು ಬರೆದಿರುವುದು ಕಂಡುಬರುತ್ತದೆ. ಅವರ ಪ್ರಬಂಧ ಲೇಖನಗಳಿಗೆ ಸಾಮೂಹಿಕ ಮಹತ್ವವಿದೆ. ತಾತ್ಕಾಲಿಕ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸಂಗತಿಗಳು ಮಾಸ್ತಿಯವರ ಬರವಣಿಗೆಗೆ ವಸ್ತುವಾಗಿದೆ. 'ವಿಮರ್ಶೆ' ಎಂಬ ಹೆಸರಿನ ಬೇರೆ ಬೇರೆ ಸಂಪುಟಗಳಲ್ಲಿ ಬಂದ ವಿಮರ್ಶಾತ್ಮಕ ಪ್ರಬಂಧಗಳೂ ಸಮಕಾಲೀನ ಸಾಹಿತ್ಯ ಸಂದರ್ಭ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ತಮ್ಮ ಆಲೋಚನಾ ಲಹರಿಯನ್ನೂ ಸ್ಪಂದಿಸಿದ 'ಪ್ರಸಂಗ' ಹೆಸರಿನ ವಿವಿಧ ಸಂಪುಟಗಳಲ್ಲಿ ಬಂದ ವಿವಿಧ ವಿಷಯಗಳ ಪ್ರಬಂಧಗಳೂ ಮಾಸ್ತಿಯವರ ವಿಚಾರ ಸಂಪತ್ತಿಗೆ ಸಾಕ್ಷಿಯಾಗಿದೆ.

'ಸಾಹಿತ್ಯದಲ್ಲಿ ರಸದ ಉದ್ದೇಶ' 'ಸಾಹಿತ್ಯದಲ್ಲಿ ವಿಮರ್ಶಾಕಾರ್ಯ. ಮೊದಲಾದ ಪ್ರಬಂಧಗಳಲ್ಲಿ ವಿಮರ್ಶೆಯನ್ನು ವಸ್ತುವನ್ನಾಗಿಸಿಕೊಂಡು ಪ್ರಬಂಧ ರಚಿಸಿದ್ದಾರೆ. ಜೀವನ ಪತ್ರಿಕೆಯಲ್ಲಿ ಎರಡು ದಶಕಗಳಷ್ಟು ಕಾಲ ಪ್ರಕಟವಾದ ಅವರ ವಿಚಾರಾತ್ಮಕ ಪ್ರಬಂಧಗಳೇ ಇದಕ್ಕೆ ಸಾಕ್ಷಿಯಾಗಿದೆ. ಹೀಗೆ ವಿಮರ್ಶಾರ್ಥಕ ಪ್ರಬಂಧ, ವಿಚಾರಾತ್ಮಕ ಪ್ರಬಂಧ, ಲಲಿತಪ್ರಬಂಧ ಹಾಗೂ ಚಿಂತನಾತ್ಮಕ ಪ್ರಬಂಧಗಳ ಮೂಲಕ ಮಾಸ್ತಿಯವರು ಕನ್ನಡ ಹಾಗೂ ಭಾರತೀಯ ಸಂಸ್ಕೃತಿಯ ಆದರ್ಶ ಮೌಲ್ಯಗಳನ್ನು ಕನ್ನಡ ಪ್ರಬಂಧಗಳಲ್ಲಿ ತಂದಿರುವುದನ್ನು ಕಾಣಬಹುದಾಗಿದೆ.

ಪು.ತಿ. ನರಸಿಂಹಾಚಾರ್

ಪ್ರಬಂಧ ಸಾಹಿತ್ಯದಲ್ಲಿ ಪು.ತಿ.ನ ಅವರದು ಒಂದು ಅನನ್ಯವಾದ ಹೆಸರು ಅವರ ಗದ್ಯ ಕಾವ್ಯಮೀಮಾಂಸೆಯಾಗಿ, ವಿಶ್ಲೇಷಣಾತ್ಮಕವಾದ ಸಹೃದಯ ವಿಮರ್ಶೆಯಾಗಿ ಮತ್ತು ಕಲ್ಪನೆ ಚಿಂತನೆಗಳನ್ನು ಸಮ್ಮಿಳಿತಗೊಳಿಸಿಕೊಂಡ ಪ್ರಬಂಧವಾಗಿ ರೂಪಗೊಂಡಿದೆ.

ಅವರ ಪ್ರಬಂಧಗಳು ಈ ಕೆಳಗಿನಂತಿವೆ.

೧. **ರಾಮಾಚಾರಿ ನೆನಪು:** ಈ ಪ್ರಬಂಧ ಸಂಕಲನದಲ್ಲಿ ೮ ಪ್ರಬಂಧಗಳಿವೆ. ಅವುಗಳಲ್ಲಿ ಒಂದೊಂದು ಪು.ತಿ.ನ ಅವರ ವ್ಯಕ್ತಿತ್ವದ ಮತ್ತು ಅಭಿವ್ಯಕ್ತಿ ಶಕ್ತಿಯ ಒಂದೊಂದು ಮುಖವನ್ನು ಅನಾವರಣ ಮಾಡುತ್ತದೆ. ರಾಮಾಚಾರಿಯ ನೆನಪು ಕವಿಗಳ ಬಾಲ್ಯದ ಒಂದು ನೆನಪಿನ ಬುತ್ತಿಯನ್ನು ಹೃದಯಂಗಮವಾಗಿ ಬಿಚ್ಚುತ್ತದೆ.

೨. **ರಥಸಪ್ತಮಿ ಮತ್ತು ಇತರ ಚಿತ್ರಗಳು:** ಈ ಪ್ರಬಂಧ ಸಂಕಲನದಲ್ಲಿಯೂ ೮ ಪ್ರಬಂಧಗಳಿದ್ದು ನಿಸರ್ಗಪ್ರಿಯ ಹಾಗೂ ಧಾರ್ಮಿಕ ವಿಚಾರಣೆ ಕುರಿತು ಪ್ರಬಂಧಗಳಿವೆ.

೩. **'ಈಚಲು ಮರದ ಕೆಳಗೆ':** ಇದು ಹದಿನಾಲ್ಕು ಪ್ರಬಂಧಗಳನ್ನು ಒಳಗೊಂಡ ಸಂಕಲನವಾಗಿದ್ದು ಪುತಿನರ ಶ್ರೇಷ್ಠ ಪ್ರಬಂಧ ಕಲೆಯ ಸಾಕ್ಷಿಯಾಗಿ ಕೂಡ ಈ ಕೃತಿ ನಿಲ್ಲುತ್ತದೆ. ಲೇಖಕರ ವಿಚಾರದಂತೆ ವ್ಯಾಪಕತೆ, ಜೀವನಾನುಭವ ಮತ್ತು ಕಲ್ಪನಾಶೀಲತೆಗಳು ಈ ಕೃತಿಯಲ್ಲಿ ತುಂಬಾ ದಟ್ಟವಾಗಿ ಪ್ರವಹಿಸಿದೆ.

ಇವು ಅವರ ಪ್ರಬಂಧ ಸಂಕಲನಗಳು ಹಾಗೂ ಅವರೆ ಹೇಳಿದಂತೆ ಕೆಲವು ಭಾವನಾಚಿತ್ರಗಳಿವೆ. ಇನ್ನೂ ಕೆಲವು ಕಥನಾತ್ಮಕವಾಗಿವೆ. ಈಚಲುಮರದ ಕೆಳಗೆ ಮತ್ತು ಧೇನುಕ ಪುರಾಣಗಳು, ತಾತ್ವಿಕ ಚಿಂತನೆಯಲ್ಲಿಯೇ ಹೊಸ ದಾರಿಯನ್ನು ಹುಡುಕಿಕೊಳ್ಳುತ್ತವೆ.

ಕನ್ನಡ ಪ್ರಬಂಧ ಸಾಹಿತ್ಯವನ್ನು ಕನ್ನಡದಲ್ಲಿ ಅದರಲ್ಲಿಯೂ ಆಧುನಿಕ ಕನ್ನಡ ಪ್ರಮುಖ ಘಟ್ಟಗಳಾದ ನವೋದಯ, ನವ್ಯ ಘಟ್ಟಗಳಲ್ಲಿ ಪ್ರಬಂಧವು ಹೇಗೆ ಫಸಲಾಯಿತು ಯಾವ ಘಟ್ಟದಲ್ಲಿ ಇದು ತನ್ನ ಬೆಳವಣಿಗೆಯನ್ನು, ಕುಂಠಿತಗೊಳಿಸಿತು. ಅದಕ್ಕೆ ಕಾರಣಗಳನ್ನು ಈ ಕೆಳಗೆ ವಿವೇಚಿಸಲಾಗುವುದು. ಕನ್ನಡಕ್ಕೆ ಆಧುನಿಕ ಸಾಹಿತ್ಯದ ಪ್ರಕಾರಗಳೆಲ್ಲವೂ ಮೊದಲ ತನ್ನನ್ನೂ ಪ್ರಯೋಗಕ್ಕೆ ಒಳಪಡಿಸಿಕೊಳ್ಳುವ ಒಂದು ಮಹತ್ತರ ಘಟ್ಟವೆಂದರೆ ಅದು ನವೋದಯ ಸಾಹಿತ್ಯಘಟ್ಟ. ಈ ಘಟ್ಟದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳೆಲ್ಲವೂ ತಮ್ಮ ಒಂದು ಕಾರ್ಯವನ್ನು ಅಥವಾ ಕೃತಿಯನ್ನೂ ಈ ಘಟ್ಟದಲ್ಲಿ ಮಾಡಿವೆ. ಎಲ್ಲಾ ಪ್ರಕಾರಗಳು ಇಲ್ಲಿ ಸಮೃದ್ಧವಾಗಿ ಬೆಳೆದು ತಮ್ಮದೇ ಸ್ಥಾನವನ್ನು ಗುರುತಿಸಕೊಂಡಿವೆ. ಹಾಗೆ ಪ್ರಬಂಧವು ಕೂಡ ಈ ಘಟ್ಟದಲ್ಲಿ ಅತ್ಯಂತ ಸಮೃದ್ಧವಾಗಿ ಬೆಳೆದುಬಂದಿದೆ. ನವೋದಯದ ಲಿರಿಕ್ ಮನೋಧರ್ಮಕ್ಕೆ ಪ್ರೇರಕ ಶಕ್ತಿಯಾಗಿ ಕೆಲಸಮಾಡಿದ್ದು

ರಾಷ್ಟ್ರೀಯತೆ, ಒಟ್ಟಾಗಿ ಹಂಚಿಕೊಳ್ಳುವ ಮಂದ ಕೃತಿಯ ಭಾವಗೀತೆಗೆ ಒಂದು ಚೌಕಟ್ಟು ಹಾಕಿದಂತಾಯಿತು. ಇಲ್ಲಿ ವಸ್ತುವಿನ ಆಯ್ಕೆಯು ಸಂಕುಚಿತವಾಯಿತು. ಇನ್ನೂ ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಬಂಧಗಳೂ ವಸಾಹತೀಕರಣಕ್ಕೆ ಒಳಗಾಗಿದ್ದವು. ಆಗಿನ ಬಹುಮುಖ್ಯ ಸಾಹಿತ್ಯ ಉದ್ದೇಶಗಳಾದ ಹಳ್ಳಿಗಳ ಬಗೆಗೆ, ದೇಶಾಭಿಮಾನಿಗಳ ಬಗೆಗೆ, ಹಳ್ಳಿಯ ಜನರ ಮುಗ್ಧ ಸ್ವಭಾವದ ಹುಡುಕಾಟ, ವ್ಯಕ್ತಿಚಿತ್ರ ಸ್ವಾತಂತ್ರ್ಯಕ್ಕಾಗಿ ಪ್ರೇರಣೆ ಮಾಡುವ ಗದ್ಯರೂಪದ ಸಾಹಿತ್ಯ ಇವುಗಳೆಲ್ಲವು ಕನ್ನಡ ಪ್ರಬಂಧಕ್ಕೆ ನವೋದಯದಲ್ಲಿ ಸಾಹಿತ್ಯ ವಸ್ತುವಾದವು. ಇಲ್ಲಿ ಭಾಷೆಯು ವರ್ಣರಂಜಿತವಾಗಿ ಬಳಸಲಾಗುವುದು. ಅಂದರೆ ಇಲ್ಲಿ ವಸ್ತುಗಳನ್ನು ಸನ್ನಿವೇಶಗಳನ್ನು ಹೆಚ್ಚು ಹೆಚ್ಚು ವೈಭವೀಕರಿಸಲ್ಪಡುತ್ತದೆ. ಏಕೆಂದರೆ ಮೊದಲೇ ಈ ಸಾಹಿತ್ಯಯುಗ ಭಾವ ಪ್ರಾಧಾನ್ಯತೆಗೆ ಒಳಗಾಗುವಂತಹ ಸಾಹಿತ್ಯಯುಗವಾಗಿದೆ.

ಬೇಂದ್ರೆ, ಗೋಕಾಕ, ಶ್ರೀರಂಗ, ಕಾರಂತ, ಕುವೆಂಪು, ವಿ.ಸೀ., ಮೂರ್ತಿರಾಯ, ತೀನಂಶ್ರೀ ಮೊದಲಾದವರು ಶ್ರೇಷ್ಠ ಪ್ರಬಂಧಕಾರರು. ಈ ಪ್ರಬಂಧ ಯುಗಕ್ಕೆ ಸಾಕ್ಷಿಯಾಗಿದ್ದಾರೆ. ಏಕೆಂದರೆ ಮೇಲಿನ ಪ್ರಬಂಧಕಾರರ ಯಾವುದೇ ಒಂದು ಪ್ರಬಂಧ ಕೂಡಾ ನಮ್ಮ ಸಂಸ್ಕೃತಿಯನ್ನು ಎಲ್ಲಿಯೂ ನಿರ್ಲಕ್ಷ ಮಾಡದೆ, ಬದಲಾಗಿ ನಮ್ಮ ಸಂಸ್ಕೃತಿಯನ್ನು ತಮ್ಮ ಪ್ರಬಂಧಗಳಲ್ಲಿ ಹೆಚ್ಚು ವೈಭವೀಕರಿಸುವುದರ ಜೊತೆಯಲ್ಲಿ ಅದರ ಬಗ್ಗೆ ಅಪಾರ ಗೌರವ ಸೂಚಕ ಹಾಗೂ ಉನ್ನತ ಸ್ಥಾನವನ್ನು ಅವರ ಪ್ರಬಂಧಗಳಲ್ಲಿ ಕೊಟ್ಟಿದ್ದಾರೆ.

ನವೋದಯದಲ್ಲಿ ಯಾವುದು ಪ್ರಬಂಧಗಳನ್ನು ಬೆಳೆಸಿತೋ ಅದು ನವ್ಯಕಾಲದಲ್ಲಿ ಮಾಯವಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಐವತ್ತರ ದಶಕದಲ್ಲಿ ನವ್ಯವು ಅಬ್ಬರಣೆ ಮಾಡುತ್ತಲೇ ಪ್ರವೇಶಿಸಿತು. ವಿನಾಯಕರು ಅದಕ್ಕೆ ಚಾಲನೆಕೊಟ್ಟರು. ಅಡಿಗರು ಕಮಿಟೆಡ್ ಆಗಿ ಅದಕ್ಕೆ ಒಂದು ಔನ್ನತ್ಯವನ್ನು ತಂದುಕೊಟ್ಟರು. ಕಾವ್ಯದ ಮೂಲಕ ನಮ್ಮಲ್ಲಿ ತನ್ನ ಕಸರತ್ತು ನಡೆಸಿದ ಕ್ಲಿಷ್ಟಕರವಾಗಿದ್ದ ನವ್ಯ ಕತೆ, ಕಾದಂಬರಿ ಕ್ಷೇತ್ರದಲ್ಲಿ ತನ್ನ ವರಸೆಗಳನ್ನು ತೋರಿಸಿತು. ಮಣ್ಣಿನ ವಾಸನೆ ಸಂಕೀರ್ಣತೆ, ಪ್ರತಿಮೆ, ಸಂಕೇತ, ಒಳರಚನೆಯು ಅನಾವರಣ ಇತ್ಯಾದಿ ಸಂಗತಿಗಳನ್ನು ಬಳಸಿತು. ಆದರೆ ನವ್ಯದ ತಾತ್ವಿಕತೆಯು ಪ್ರಬಂಧ ಸ್ವರೂಪಕ್ಕೆ ಒಡಿಸುವಂಥದ್ದಲ್ಲ. 'ಮಂದ ಕೃತಿಯ ಭಾವಗೀತೆ' ನವ್ಯದಲ್ಲಿ ಇಡಿಯಾಗಿ ತಿರಸ್ಕಾರಕ್ಕೆ ಗುರಿಯಾಯಿತು. ನವ್ಯದಲ್ಲಿ 'ಹರಡಿಕೊಳ್ಳುವ' ಮನೋಭಾವ ಬೆಳೆಯಲಿಲ್ಲ. ನಾಗರಿಕತೆಯ ಪುರುಷವಲಯದ ಅಹಂಕಾರವನ್ನು ಮೈಗೂಢಿಸಿಕೊಂಡ ಅದು ತಾಯ್ತನದ ವಾತ್ಸಲ್ಯವನ್ನು ಬಿಟ್ಟುಕೊಟ್ಟಿತು. ಆತ್ಮೀಯತೆ ಇಲ್ಲವಾಯಿತು. ಅಲ್ಲಿ ವ್ಯಕ್ತಿ ಮತ್ತು ಸಮಾಜವನ್ನು ಪ್ರತ್ಯೇಕ ಪರಿಭಾಷೆಯಲ್ಲಿ ಕಾಣಲಾಯಿತು. ನವೋದಯದಲ್ಲಿ ವ್ಯಕ್ತಿಯ ಬಗ್ಗೆ ಮಾತಾಡುತ್ತಿದ್ದರೂ ಸಮಾಜದ ಬಗ್ಗೆ ಮಾತಾಡುತ್ತಿದ್ದಂತೆ ಅನ್ನಿಸುತ್ತಿದ್ದುದರಿಂದ ಪ್ರಬಂಧ ಅಲ್ಲಿ ಸಹಜವಾಗಿ ಹುಟ್ಟಿಬೆಳೆಯಿತು.

ನವ್ಯದ ನಾಯಕರು ಸಮಾಜದ ಜೊತೆ ಹೊಂದಾಣಿಕೆಯಾಗಲಿಲ್ಲ. ಅದು ಜಗತ್ತನ್ನು ಕಂಡ ಪರಿಭಾಷೆ, ಪೂರ್ಣವಾಗಿ ವ್ಯಕ್ತಿ ಕೇಂದ್ರಿತವಾಗಿದ್ದು ಹರಟೆ ಗುಣವನ್ನು ಕಳಕೊಂಡ ಸಮಾಜದಲ್ಲಿ ಪ್ರಬಂಧ ಹುಟ್ಟಲಾರದು. ಆದರೆ ವಿಮರ್ಶಾತ್ಮಕ ಪ್ರಬಂಧಗಳು ನವೋದಯಕ್ಕಿಂತ ನವ್ಯದಲ್ಲಿ ವಿಮರ್ಶೆ ಹೆಚ್ಚು ಶಕ್ತಿ ಸಂಪನ್ನವಾಯಿತು.

ನವ್ಯದ ಸಂದರ್ಭದಲ್ಲಿ 'ಪ್ರಬಂಧವು' ಸೊರಗಿತೆಂದು ಹೇಳಲೇಬೇಕು ಹಿಂದೆ ಬರೆದವರು ತಮ್ಮ ರೀತಿಯಲ್ಲಿ ಮುಂದುವರಿದರು. ಅವರನ್ನೂ ಅನುಕರಿಸಲು ಹೋದ ಹೊಸಬರು ಗಂಭೀರ ಚಿಂತನಗಿಂತ ಹಾಸ್ಯಕ್ಕೆ ಅಥವಾ ಹರಟೆಗೆ ಮಹತ್ವ ಕೊಟ್ಟರು. ಈ ಕಾರಣಕ್ಕೆ "ಇಡೀ ನವ್ಯ ಒಬ್ಬನೇ ಒಬ್ಬ ಪ್ರಬಂಧಕಾರನನ್ನು ಸೃಜಿಸಲಿಲ್ಲ."[೬] ನವ್ಯಕಾಲ ಘಟ್ಟದಲ್ಲಿ ಪ್ರಬಂಧಗಳನ್ನು ಬರೆಯುತ್ತಿದ್ದ ದೇಜಗೌ, ಎನ್ಕೆ, ರಾಶಿ, ಸಿ.ಸಿ.ಕೆ., ಹಾ.ಮಾ.ನಾಯಕ ಮೊದಲಾದವರು ಮೂಲತಃ ನವೋದಯದಿಂದ ಪ್ರೇರಣೆ ಪಡೆದವರು. ಇವರು ತಾತ್ವಿಕವಾಗಿ ನವೋದಯಕ್ಕೆ ಬದ್ಧರಾದವರು.

ಅಡಿಟಿಪ್ಪಣಿಗಳು

೧. ಶತಮಾನದ ಲಿಖಿತ ಪ್ರಬಂಧ ಪ್ರಸ್ತಾವನೆ ಸಂಪಾದಕ ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. xvi.

೨. ಆಂಗ್ಲ ಪ್ರಬಂಧಗಳು ಇತಿಹಾಸದ ನೋಟ, ಸದಾಶಿವ ಒಡೆಯರ ಪ್ರಬಂಧ ಪ್ರಪಂಚ, ಸಂಪಾದಕರು, ಎಚ್.ವಿ. ನಾಗೇಶ್, ಪು.೨೧.

೩. ಶತಮಾನದ ಲಲಿತ ಪ್ರಬಂಧ, ಪ್ರಸ್ತಾವನೆ ಸಂಪಾದಕ ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. xxi.

೪. ಕನ್ನಡ ಪ್ರಬಂಧದ ಮೊದಲ ಹೆಜ್ಜೆಗಳು : ಹೇಮಾ ಪಟ್ಟಣಶೆಟ್ಟಿ, ಪ್ರಬಂಧ ಪ್ರಪಂಚ ಸಂಪಾದಕೀಯ, ಹೆಚ್.ವಿ. ನಾಗೇಶ್, ಪು. ೭೯.

೫. ಅದೇ, ಪು. ೮೧.

೬. ಪ್ರಬಂಧ ೧೯೮೮ : ಸಂಪಾದಕ, ಡಾ. ಪುರುಷೋತ್ತಮ ಬಿಳಿಮಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು. ೦೪.

* * *

ಅಧ್ಯಾಯ ೪

ಪ್ರಬಂಧಗಳ ಪ್ರಮುಖ ಚಿಂತನೆಗಳು

ಅಧ್ಯಾಯ ೪

ಪ್ರಬಂಧಗಳ ಪ್ರಮುಖ ಚಿಂತನೆಗಳು

ಕನ್ನಡ ಪ್ರಬಂಧಕಾರರು ವೈವಿಧ್ಯಮಯ ವಿಚಾರಗಳನ್ನು ತಮ್ಮ ಪ್ರಬಂಧದ ವಿಷಯಗಳಿಗಾಗಿ ಆಯ್ಕೆಮಾಡಿಕೊಂಡಿದ್ದಾರೆ. ಈ ಮಹತ್ವಕ್ಕೂ ಕನ್ನಡ ಗದ್ಯಕ್ಕೂ ಹೊಸ ಆಯಾಮಗಳನ್ನು ತರುವಲ್ಲಿ ಸಹಾಯಕವಾಗಿದೆ. ಚಿಂತನೆಗಳು ಏಕತಾನತೆಯನ್ನು ಹೋಗಲಾಡಿಸಿ ಓದುಗರಲ್ಲಿ ಲವಲವಿಕೆಯನ್ನು ಉಂಟುಮಾಡುವಲ್ಲಿಯೂ ಸಹಾಯಕವಾಗಿದೆ.

ಎ.ಕೆ. ರಾಮಾನುಜನ್ ತಮ್ಮ ಪ್ರಬಂಧಗಳಲ್ಲಿ ಪ್ರಮುಖವಾದ ಚಿಂತನೆಯ ವಸ್ತುಗಳನ್ನು ಬಳಸಿಕೊಂಡಿರುವುದು ಸಹಜವಾದರೂ ಆ ಎಲ್ಲ ವಸ್ತುಗಳು ಗ್ರಾಮೀಣ ಸೊಗಡಿನಿಂದ ಹೊರತಾದವುಗಳಲ್ಲ ಎಂಬುದು ಅಷ್ಟೇ ಸತ್ಯವಾದ ಮಾತಾಗಿದೆ. ಎ.ಕೆ. ರಾಮಾನುಜನ್‌ರ ಪ್ರಬಂಧಗಳ ಪ್ರಮುಖ ವಿಷಯಗಳಲ್ಲಿ ಕೆಲವನ್ನಾದರೂ ಇಲ್ಲಿ ಪರಿಶೀಲಿಸಬಹುದಾಗಿದೆ. ಇವುಗಳಲ್ಲಿ ಭಾರತೀಯರ ಸಂಸ್ಕೃತಿಯ ಬಗ್ಗೆ ಮತ್ತು ಕಥೆಗಳ ಬಗ್ಗೆ ವಿವರಿಸಿದ್ದಾರೆ. ಅದು ಮುಖ್ಯವಾಗಿ ಜಾನಪದ ಕಥೆಗಳ ಮೂಲಕ ತಮ್ಮ ಚಿಂತನೆಯ ಮೂಲಕ ಪ್ರಸ್ತುತಪಡಿಸಿದ್ದಾರೆ. ರಾಜ, ರಾಜ್ಯ, ಅಜ್ಜಿ ಕಥೆಗಳು, ಶ್ರೀಮಂತ ಬಡವ ಮುಂತಾದವುಗಳೆಲ್ಲವೂ ಇವರ ಪ್ರಬಂಧದಲ್ಲಿ ಸ್ಥಾನ ಪಡೆದಿವೆ.

ಎ.ಕೆ. ರಾಮಾನುಜನ್‌ರ ಬಹುಪಾಲು ಕೃತಿಗಳಿಗೆ ಭಾರತೀಯ ಸಂಸ್ಕೃತಿಯೇ ಮೂಲ ಚಿಂತನೆಯಾಗಿದೆ. ಅವರ ಪ್ರಬಂಧಗಳ ರಚನೆಗೆ ಭಾರತೀಯ ಸಂಸ್ಕೃತಿ ಪ್ರೇರಕಶಕ್ತಿಯಾಗಿದೆ. ಅವರ ಪ್ರಬಂಧದಲ್ಲಿ ೩೦೦ ರಾಮಾಯಣಗಳು, ಮಹಾಭಾರತದಲ್ಲಿ ಅನುರುಕ್ತಿ. ಇವುಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಚಿಂತಿಸಿದ್ದಾರೆ. ಹಾಗೆಯೇ ಅವರ ಇತರ ಪ್ರಬಂಧಗಳಲ್ಲಿ ಸಹ ಸವಿಸ್ತಾರವಾಗಿ ಚಿಂತನೆ ಮಾಡಿದ್ದಾರೆ.

ಎ.ಕೆ. ರಾಮಾನುಜನ್‌ರಿಗೆ ಭಾರತೀಯ ಸಂಸ್ಕೃತಿಯ ಬಗೆಗೆ ಇದ್ದ ಪ್ರೀತಿಯು ಅವರ, ೩೦೦ ರಾಮಾಯಣದ ಪ್ರಬಂಧದಲ್ಲಿ ಈ ರೀತಿ ವ್ಯಕ್ತವಾಗಿದೆ. "ನಾವು ಜೈನ ಕಥನಗಳ ಲೋಕವನ್ನು

ಹೊಕ್ಕರೆ ಅಲ್ಲಿನ ರಾಮ ಕಥೆಯಲ್ಲಿ ಹಿಂದೂ ಮೌಲ್ಯಗಳು ಕಾಣುವುದಿಲ್ಲ. ಹಿಂದೂಗಳು, ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರು, ರಾವಣನನ್ನೂ ಖಳನಾಯಕನನ್ನಾಗಿಸಿ ಅನ್ಯಾಯ ಮಾಡಿದ್ದಾರೆ ಎಂಬುದು ಜೈನ ಪಠ್ಯಗಳು ತೋರ್ಪಡಿಸುವ ಭಾವನೆ. ಜೈನ ಪಠ್ಯವೊಂದು ಕೇಳುವ ಪ್ರಶ್ನೆಗಳು ಹೀಗಿವೆ: 'ರಾವಣನಂಥ ಪ್ರಬಲ ರಾಕ್ಷಸರನ್ನೂ ಕೋತಿಗಳು ಅದು ಹೇಗೆ ಸೋಲಿಸಬಲ್ಲವು? ಉದಾತ್ತರೂ ಯೋಗ್ಯರೂ ಆದ ರಾವಣನಂಥವರು ಅದು ಹೇಗೆ ಮಾಂಸ ತಿಂದು ರಕ್ತ ಕುಡಿಯಬಲ್ಲರು? ಕುಂಭಕರ್ಣ ಅದು ಹೇಗೆ ವರ್ಷದ ಆರು ತಿಂಗಳು ನಿದ್ರೆ ಮಾಡಬಲ್ಲ? ಅವನ ಕಿವಿಗೆ ಕಾದ ಎಣ್ಣೆ ಸುರಿದರೂ, ಆನೆಗಳು ಅವನ ಮೇಲೆ ಹತ್ತಿ ತುಳಿದರೂ ಅವನ ಸುತ್ತಲೂ ಕೊಂಬು, ಕಹಳೆ ಶಂಖನಾದಗಳನ್ನು ಮಾಡಿದರೂ ಅದು ಹೇಗೆ ಎಚ್ಚರಗೊಳ್ಳದೆ ನಿದ್ರೆ ಮಾಡುತ್ತಲೇ ಇರಬಲ್ಲ? ಹಾಗೆಯೇ ರಾವಣ ಇಂದ್ರನನ್ನು ಸೆರೆ ಹಿಡಿದು ಲಂಕೆಗೆ ಎಳೆದುಕೊಂಡು ಬಂದ ಅನ್ನುತ್ತಾರೆ. ಯಾರು ತಾನೇ ಇಂದ್ರನನ್ನು ಗೆಲ್ಲಬಲ್ಲರು? ಇವೆಲ್ಲವೂ ಅತಿಶಯೋಕ್ತಿಯಾಗಿ, ಭ್ರಾಮಕ ಕಲ್ಪನೆಗಳಾಗಿ, ವಿಚಾರಕ್ಕೆ ವಿರುದ್ಧವಾದ ಸುಳ್ಳುಗಳಾಗಿ ಕಾಣುತ್ತವೆ ಇಂಥ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದೊರೆ ಶ್ರೇಣಿಕ ಗೌತಮ ಮುನಿಯ ಬಳಿಗೆ ಹೋಗಿ, ಸಸ್ಯವಾದ ಕಥೆಯನ್ನು ಹೇಳು, ಸಂಶಯವನ್ನು ಪರಿಹರಿಸು ಎಂದು ಕೋರುತ್ತಾನೆ. ಜೈನ ವಿವೇಕಿಗಳು ಹೇಳಿರುವ ಕಥೆಯನ್ನು ಹೇಳುತ್ತೇನೆ. ರಾವಣನು ರಾಕ್ಷಸನಲ್ಲಿ, ನರಭಕ್ಷಕನೂ ಮಾಂಸ ಭಕ್ಷಕನೂ ಅಲ್ಲ. ತಪ್ಪು ಆಲೋಚನೆಯ ಕವಿಗಳು ಮತ್ತು ಮೂರ್ಖರು ಇಂಥ ಸುಳ್ಳುಗಳನ್ನು ಹೇಳುತ್ತಾರೆ ಎನ್ನುತ್ತ ಗೌತಮನು ತನ್ನದೇ ಕಥನವನ್ನು ಆರಂಭಿಸುತ್ತಾನೆ. ವಿಮಲ ಸೂರಿಯ ಪ್ರಾಕೃತ ಕೃತಿ ಪಉಮಚರಿಉ ಎಂಬ ಹೆಸರಿನ ಜೈನ ರಾಮಾಯಣಕ್ಕೆ ವಾಲ್ಮೀಕಿಯ ರಾಮಾಯಣ ಚೆನ್ನಾಗಿಯೇ ಗೊತ್ತಿದೆ ಎಂಬುದು ಸ್ಪಷ್ಟವಾಗಿದೆ. ವಾಲ್ಮೀಕಿಯ ದೋಷಗಳನ್ನು ಹಿಂದೂ ಅತಿರೇಕಗಳನ್ನು ಅದು ತಿದ್ದುವುದಕ್ಕೆ ತೊಡಗುತ್ತದೆ. ಇತರ ಜೈನ ಪುರಾಣಗಳಂತೆ ಇದೂ ಒಂದು 'ಪ್ರತಿ ಪುರಾಣ'. 'ಪ್ರತಿ' ಎಂಬುದು ಜೈನರಿಗೆ ಪ್ರಿಯನಾದ ಅವನ ಪ್ರತ್ಯಯ. ಅದು 'ವಿರುದ್ಧ' ಅಥವಾ 'ಪರ್ಯಾಯ' ಎಂಬ ಅರ್ಥಗಳನ್ನು ಹೊಂದಿದೆ."[೧]

ಎ.ಕೆ. ರಾಮಾನುಜನ್‌ರು ಜಾನಪದ ಕಥೆಯಲ್ಲಿ ಬರುವ ಗ್ರಾಮ ಜೀವನವನ್ನು ಪ್ರಮುಖ ಚಿಂತನೆಗೆ ಬಳಸಿಕೊಳ್ಳುತ್ತಾರೆ. ಕಾಯಕನಿಷ್ಠೆ ಬದುಕಿನ ಪ್ರಮುಖ ವೈಶಿಷ್ಟ್ಯವಾಗಿದೆ. ಈ ಕಾಯಕ ನಿಷ್ಠಗೆ 'ಹೂ ಬಿಡುವಮರ: ಒಬ್ಬ ಹೆಂಗಸಿನ ಕಥೆ ಹಾಗೂ ಪ್ರತಿವ್ಯವಸ್ಥೆಯತ್ತ: ಹೆಂಗಸರ ಕಥೆಗಳು' ಈ ಪ್ರಬಂಧಗಳಲ್ಲಿ ಪಾತ್ರಗಳನ್ನು ಗಮನಿಸಬಹುದು. "ನೋಡಿ ನಾನು ರಾಕ್ಷಸಿಯಲ್ಲಿ ದೇವತೆಯೂ ಅಲ್ಲ. ಎಲ್ಲರ ಹಾಗೆ ಮನುಷ್ಯಳು. ಮನುಷ್ಯರು ಎಲ್ಲಿಯಾದರೂ ಮರವಾಗುವುದು ಉಂಟೇ? ಅಂತ ವಿನಯವಾಗಿ ಹೇಳಿದಳು.

'ಹೀಗೆಲ್ಲ ಸುಳ್ಳ ಹೇಳಿ ಮೋಸ ಮಾಡಬೇಡ. ಅವತ್ತು ನಾನು ಮರವಾಗಿದ್ದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ನನಗೋಸ್ಕರ ಮರವಾಗದಿದ್ದರೆ. ಇನ್ನು ಯಾರಿಗಾಗಿ ಆಗುತ್ತೀಯ?' ಅಂದ ರಾಜಕುಮಾರ.

ಮದುವೆ ಹೆಣ್ಣಿನ ಕಣ್ಣಲ್ಲಿ ನೀರು ತುಳುಕಿತು. ಸೆರಗಿನಲ್ಲಿ ಒರೆಸಿಕೊಂಡಳು. ಕೋಪ 'ಮಾಡಿಕೊಳ್ಳಬೇಡಿ ನೀವು ಅಷ್ಟೊಂದು ಬಲವಂತ ಮಾಡಿದರೆ ಮರವಾಗುತ್ತೇನೆ. ಎರಡು ಬಿಂದಿಗೆ ನೀರು ತನ್ನಿ ಅಂದಳು''[೨] ಹಾಗೆಯೇ 'ಪ್ರತಿವ್ಯವಸ್ಥೆಯತ್ತ: ಹೆಂಗಸರ ಕತೆಗಳು' ಅಲ್ಲಿಯೂ ಸಹ ಕೆಲ ಪಾತ್ರಗಳೂ ನೋಡಬಹುದು. "ಆಕಾಶ ಮತ್ತು ಭೂಮಿ ಅಕ್ಕ ತಂಗಿಯರು. ಆಕಾಶ ತನ್ನ ಮಕ್ಕಳು ಸೂರ್ಯ ಚಂದ್ರರನ್ನೂ ಹಬ್ಬಕ್ಕೆಂದು ಭೂಮಿಗೆ ಕಳಿಸಿದ್ದಳು. ಸೂರ್ಯ ಹೊಟ್ಟೆಬಾಕ, ಆತುರಗಾರ, ಬಡಸಿದ ಅಡುಗೆಯನ್ನೆಲ್ಲ ಅವನೇ ತಿಂದು ಮುಗಿಸಿದ. ಅವನಿಗೆ ಅಮ್ಮನ ನೆನಪೇ ಬರಲಿಲ್ಲ. ಚಿಕ್ಕಪ್ಪನು ಚಂದ್ರ ಊಟಕ್ಕೆ ಕೂತಾಗ ಹಸಿದಿರುವ ಅಮ್ಮನ ನೆನಪು ಬಂತು. ಊಟ ರುಚಿಸಲಿಲ್ಲ. ಬಡಿಸಿದ್ದರಲ್ಲೆಲ್ಲ ಒಂದೊಂದು ಸ್ವಲ್ಪ ಭಾಗ ಗುಟ್ಟಾಗಿ ಬಚ್ಚಿಟ್ಟುಕೊಂಡ ಆಕಾಶಮ್ಮ ಕಾಯುತ್ತಿದ್ದಳು. 'ಮಕ್ಕಳೇ ನನಗೆ ಏನು ತಂದಿದ್ದೀರಿ? ಅಂತ ಕೇಳಿದಳು. ಮುಂಗೋಪಿ ಸೂರ್ಯ ದಬಾಯಿಸಿದ 'ಏನು ಅನ್ನುತಾ ಇದೀಯಮ್ಮ? ನಿನಗೂ ತಂದಿದ್ದರೆ ಎಂಥಾ ಹುಡುಗರು. ಉಂಡು ಹೋದರು ಕೊಂಡೂ ಹೋದರು ಅಂದುಕೊಳ್ಳಲ್ಲವಾ ಅವರು? ದುರಾಸೆ ಪಡಬಾರದು' ಅಂದ''[೩] ಪಾತ್ರಗಳ ಬಗ್ಗೆ ರಾಮಾನುಜನ್‌ರು ಸವಿಸ್ತಾರವಾಗಿ ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ಪಾತ್ರಗಳನ್ನು ಸೃಷ್ಟಿಸಿದ್ದಾರೆ.

ಎ.ಕೆ. ರಾಮಾನುಜನ್‌ರು ಗಂಭೀರ ಪ್ರಬಂಧಗಳನ್ನು ಬರೆದು ಅಂಥ ವಿಷಯಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಕೊಡಬಲ್ಲರು. ಈ ಹೇಳಿಕೆಗೆ ಅವರ ಪ್ರಬಂಧಗಳಲ್ಲಿ ಸಾಕಷ್ಟು ನಿದರ್ಶನಗಳನ್ನು ಕಾಣಬಹುದು. ಪ್ರಬಂಧದಲ್ಲಿ ಗಂಭೀರ ಚಿಂತನೆಯೂ ಹೇಗೆ ಸ್ಥಾನಪಡೆಯುತ್ತವೆ ಎಂಬುದಕ್ಕೆ ಪ್ರತಿ–ವ್ಯವಸ್ಥೆಯತ್ತ : ಹೆಂಗಸರ ಕಥೆಗಳು. ಈ ಪ್ರಬಂಧದಲ್ಲಿ ಬರುವ "ನಾಗ–ಪ್ರೇಮಿ" ತೆಗೆದುಕೊಳ್ಳಬಹುದು. ರಕ್ತದಷ್ಟು ಕೆಂಪಗಿದ್ದ ಪಾಯಸವನ್ನು ಹಿತ್ತಲಲ್ಲಿದ್ದ ಹುತ್ತಕ್ಕೆ ಹಾಕಿದಳು. ಆ ಹುತ್ತದಲ್ಲಿ ಅದು ಪಾಯಸವನ್ನು ಕುಡಿದುಬಿಟ್ಟಿತು. ಪ್ರೀತಿಯ ಮದ್ದು ಕೆಲಸಮಾಡಿತು. ಹಾವಿಗೆ ಆ ಹೆಂಗಸಿನ ಬಗ್ಗೆ ಹುಚ್ಚು ಪ್ರೀತಿ ಹುಟ್ಟಿತು. ಅವತ್ತು ರಾತ್ರಿ ಅದು ಅವಳ ಗಂಡನ ರೂಪವನ್ನು ತಾಳಿ ಮನೆಯ ಕದತಟ್ಟಿತು. ಎಂದಿನಂತೆ ಗಂಡ ಮನೆಯಲ್ಲಿರಲಿಲ್ಲ. ಬಾಗಿಲು ತಟ್ಟಿದ ಸದ್ದು ಕೇಳಿ ಅವಳಿಗೆ ಹೆದರಿಕೆಯಾಯಿತು. ಯಾರಿರಬಹುದು? ಬಾಗಿಲು ತೆಗೆಯುವುದೇ ಬೇಡವೇ? ಅಂದುಕೊಳ್ಳುತ್ತ ಬಾಗಿಲ ಸಂದಿನಿಂದ ಇಣುಕಿ ನೋಡಿದಳು. ಹೊರಗೆ ಇದ್ದವನು ಗಂಡನ ಹಾಗೇ ಕಾಣಿಸಿದ. ಏನೇನೋ ಪ್ರಶ್ನೆ ಕೇಳದೆ ಅವನನ್ನು ಒಳಕ್ಕೆ ಬಿಟ್ಟುಕೊಂಡಳು ಅವನಿಗೆ ಸಂತೋಷ ಕೊಟ್ಟಳು. ದಿನವೂ ರಾತ್ರಿ ಬರುವುದಕ್ಕೆ ಶುರು ಮಾಡಿದ. ಕೆಲವೇ ದಿನದಲ್ಲಿ ಅವಳು ಬಸುರಿಯಾದಳು.

ಹಾವಿಗೆ ವಿಷಯ ತಿಳಿದಾಗ, ಅವಳಿಗೆ ನಿಜ ತಿಳಿಸಬೇಕು ಅಂದುಕೊಂಡಿತು. ಕಾಮಾಕ್ಷೀ, ನಾನು ಯಾರು ಗೊತ್ತೇ? ನಿನ್ನ ಗಂಡ ಅಂದುಕೊಂಡಿದ್ದೀಯಾ? ಅಲ್ಲ ನಾನು ನಾಗರಾಜ ನಿನ್ನ ಮೇಲೆ ಪ್ರೀತಿ ಹುಟ್ಟಿ ನಿನ್ನ ಗಂಡನ ರೂಪದಲ್ಲಿ ಬಂದೆ 'ಅಂದಿತು".[೪] ಹೀಗೆ ರಾಮಾನುಜನ್‌ರು ಭಾರತೀಯ ಸಂಸ್ಕೃತಿಯ ಜಾನಪದ ಹಿನ್ನೆಲೆಯಲ್ಲಿ ನಡೆಯುವ ಸಂಪ್ರದಾಯ ಒತ್ತಾಸೆಯಿಂದ ಕೂಡಿರುವ ಅಂಶವನ್ನು ಗುರ್ತಿಸಿಕೊಂಡಿದ್ದಾರೆ. ಅಂದರೆ ಕಥೆಗಳು ಸಂಪ್ರದಾಯ ನೆಪನಾಗಿ ಕಟ್ಟುಕತೆಗಳ ಮೂಲಕ ಮಾಡಿರುವ ಅಂಶವನ್ನು ತಿಳಿಯಬಹುದಾಗಿದೆ.

ಎ.ಕೆ. ರಾಮಾನುಜನ್‌ರ ಪ್ರಬಂಧಗಳಲ್ಲಿ ಸ್ಥಾನ ಪಡೆದುಕೊಂಡಂತಹ ವಿಷಯಗಳಲ್ಲಿ ಕಾಗೆ, ಗುಬ್ಬಿ, ಎಮ್ಮೆ, ಕೋತಿ, ಮುಂತಾದ ಪ್ರಶ್ನೆಗಳನ್ನು ಬಳಸಿಕೊಂಡಿರುವುದು ತಿಳಿಯುತ್ತದೆ. "ಕತೆ ಹೇಳುವುದು" ಈ ಪ್ರಬಂಧದಲ್ಲಿ ಬರುವ ಚಿಕ್ಕಮಕ್ಕಳಿಗಾಗಿ ಕತೆಗಳು ಅಲ್ಲ ಉದಾಹರಣೆಯಾಗಿ ಕಾಗಕ್ಕ ಇಡೀ ರಾತ್ರಿ ಕಾಳು ತಿನ್ನುತ್ತಿದ್ದಳು. ಕುಟುಂ ಕುಟುಂ ಸದ್ದು ಬರುತ್ತಿತ್ತು. ಏನದು ಎಂದು ಗುಬ್ಬಕ್ಕ ಕೇಳಿದರೆ ಏನಿಲ್ಲ 'ನೀ ನೊಂದು ಅಡಕೆ ಕೊಟ್ಟಿದ್ದೆಯಲ್ಲ ಅದನ್ನು ಕಡಿಯುತ್ತಿದ್ದೇನೆ ಅಂದಳು ಕಾಗಕ್ಕ. ಬೆಳಗಾಗುವ ಹೊತ್ತಿಗೆ ಅವಳು ಚೀಲದಲ್ಲಿದ್ದ ಕಾಳೆಲ್ಲ ಮುಗಿಸಿದ್ದಳು. ಹೊಟ್ಟೆ ಕೆಟ್ಟು ತಡೆಯಲಾರದೆ ಬೆಳಗಾಗುವ ಹೊತ್ತಿಗೆ ಚೀಲದ ತುಂಬ ಕಕ್ಕ ಮಾಡಿ ಹೋಗಿದ್ದಳು.

ಬೆಳಗ್ಗೆ ಎದ್ದು ಗುಬ್ಬಕ್ಕನ ಮರಿಗಳು ಕಾಳು ತಿನ್ನಲು ಹೋಗಿ ಚೀಲಕ್ಕೆ ಕೈ ಹಾಕಿದರೆ ಕೈಯಲ್ಲಾ ಗಲೀಜಾಯಿತು."

ಈ ಪ್ರಬಂಧದಲ್ಲಿ ಮಕ್ಕಳಿಗೆ ನೀತಿ ಕಥೆಯಾಗಿ ಮತ್ತು ಹಾಸ್ಯ ಮೂಡಿಬಂದಿರುವುದನ್ನು ಗುರ್ತಿಸಬಹುದಾಗಿದೆ. ಅಂದರೆ ಈ ಕಥೆಗಳು ಅಜ್ಜಿ ಹೇಳುವ ಕಥೆಗಳಿಗಿಂತ ಭಿನ್ನವಾಗಿರುತ್ತವೆ ಎಂದು ಹೇಳಬಹುದು.

ಎ.ಕೆ. ರಾಮಾನುಜನ್‌ರು ಮುಖ್ಯವಾಗಿ ಭಾರತೀಯ ಸಂಸ್ಕೃತಿಯನ್ನು, ಪರಂಪರೆಯನ್ನು, ಚಿಂತಿಸುವ ಮತ್ತೊಂದು ಪ್ರಬಂಧವೆಂದರೆ ಮಹಾಭಾರತದಲ್ಲಿ ಪುನರುಕ್ತಿಯ ಬಗ್ಗೆ ಚಿಂತಿಸಿರುವುದು. ಪ್ರೀತಿ ಕತೆಯಲ್ಲಿ ಉಪಕತೆಯನ್ನು ಒಳಗೊಂಡಿರುವ ಸನ್ನಿವೇಶವನ್ನು ಎ.ಕೆ. ರಾಮಾನುಜನ್‌ರು ಪ್ರಮುಖವಾಗಿ ಚಿಂತಿಸಿದ್ದಾರೆ. "ನಾಯಕ-ಪ್ರತಿನಾಯಕರಾದ ಭೀಮ ಮತ್ತು ದುರ್ಯೋಧನ, ಅರ್ಜುನ ಮತ್ತು ಕರ್ಣ ಇವರ ದ್ವೇಷ ಈ ದೃಶ್ಯದಿಂದ ಆರಂಭಗೊಂಡು ಬದುಕಿನುದ್ದಕ್ಕೂ ಮುಂದುವರೆಯುತ್ತದೆ. ಅವರ ಅದೃಷ್ಟ ಸದಾ ಹೊಯ್ದಾಡುತ್ತಲೇ ಇರುತ್ತದೆ. ಈ ಒಂದು ದೃಶ್ಯದಲ್ಲೇ ಕರ್ಣನ ಅದೃಷ್ಟದ ಹೊಯ್ದಾಟ ಅತ್ಯಂತ ನಾಟಕೀಯವಾಗಿದೆ. ಅವನ ಇಡೀ ಬದುಕಿನಲ್ಲಿ ನಡೆಯುವ ಹೊಯ್ದಾಟದ ಒಂದು ಮಾದರಿಯಾಗಿದೆ. ಈ ಹೊಯ್ದಾಟದ ಪ್ರತಿಧ್ವನಿ ಪ್ರೇಕ್ಷಕರ ಕಿರುಚಾಟದಲ್ಲಿ ಮಾತ್ರವಲ್ಲ ಕರ್ಣನ ನಿಜವನ್ನು ಬಲ್ಲ ಒಬ್ಬಳೇ ವ್ಯಕ್ತಿಯಾದ ಕುಂತಿಯ

ಹೃದಯದಲ್ಲೂ ಮಾರ್ದನಿಸುತ್ತದೆ". ಇದರಿಂದ ಎ.ಕೆ. ರಾಮಾನುಜನ್‌ರು ಮಹಾಭಾರತದ ಪುನರುಕ್ತಿ ಪಡೆಯುವ ಅಂಶಗಳನ್ನು ಚಿಂತಿಸಿರುವುದು ತಿಳಿಯುತ್ತದೆ.

ಎ.ಕೆ. ರಾಮಾನುಜನ್‌ರು ಜಾನಪದ ಕಥೆಗಳ ಮೂಲಕ ಹಾಸ್ಯವನ್ನು ಸಹ ಸೃಷ್ಟಿಸಿರುವುದು. ಮತ್ತು ಚಿಂತಿಸಿರುವುದು ತಿಳಿಯುತ್ತದೆ. ಈ ಹಾಸ್ಯ ನಕ್ಕು ಹೊಟ್ಟೆ ಹುಣ್ಣಾಗಿಸುವಂತಹದ್ದಲ್ಲ. ನಯವಾದ ತಿಳಿಹಾಸ್ಯ. ಸಮಾಜದ ಎಷ್ಟು ಅರೆ–ಕೊರೆಗಳನ್ನು, ಸಂಪ್ರದಾಯ ಆಚರಣೆಗಳನ್ನು ಹಾಸ್ಯದ ಮೂಲಕವೇ ವಿವರಿಸುತ್ತಾರೆ. ಇವರ "ಹೂ ಬಿಡುವ ಮರ"ಮುಂತಾದ ಪ್ರಬಂಧಗಳಲ್ಲಿ ಹಾಸ್ಯವು ಮೂಡಿಬಂದಿರುವುದನ್ನು ಕಾಣಬಹುದಾಗಿದೆ.

ಹೀಗೆ ಎಲ್ಲ ವಿಧದ ವಸ್ತುಗಳನ್ನು ಸಂಸ್ಕೃತಿಯನ್ನು ತಮ್ಮ ಸಾಹಿತ್ಯದಲ್ಲಿ ಬಳಸಿಕೊಳ್ಳುವುದರ ಮೂಲಕ ತಮ್ಮ ಚಿಂತನೆಗಳನ್ನು ಮೆರೆದಿದ್ದಾರೆ. ಆ ಮೂಲಕ ಕನ್ನಡ ಪ್ರಬಂಧಗಳ ಪ್ರಮುಖ ಚಿಂತಕರರಲ್ಲಿ ಒಬ್ಬರಾಗಿದ್ದಾರೆ.

ಅಡಿ ಟಿಪ್ಪಣಿಗಳು

೧. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ. ೮೦,೮೧

೨. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ. ೧೬೩

೩. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ. ೨೬೬

೪. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ. ೨೦೦,೨೦೧.

೫. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ.೨೩೦

೬. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ ಪುಟ.೧೧೬

* * *

ಅಧ್ಯಾಯ ೫

ಅಭಿವ್ಯಕ್ತಿ ಭಾಷಾ ಶೈಲಿ

ಅಧ್ಯಾಯ ೫

ಅಭಿವ್ಯಕ್ತಿ ಭಾಷಾ ಶೈಲಿ

ಯಾವುದೇ ಒಬ್ಬ ಲೇಖಕನ ಬರಹ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುವಲ್ಲಿ ಭಾಷಾ ಶೈಲಿ, ಅಭಿವ್ಯಕ್ತಿಗಳು ನಿರ್ಣಾಯಕ ಅಂಶಗಳಾಗಿರುತ್ತವೆ. ಇವುಗಳು ಉತ್ತಮವಾಗಿ ಬರಹದೊಡನೆ ಹೆಣೆದು ಕೊಂಡಿದ್ದಾಗ ಆ ಸಾಹಿತ್ಯಕ್ಕೆ ತನ್ನದೇ ಆದ ವೈಶಿಷ್ಟ್ಯತೆ ಕೂಡಿರುತ್ತದೆ.

ರಾಮಾನುಜನ್‌ರ ಮೂಲತಃ ಈ ಪ್ರಬಂಧಗಳು ಇಂಗ್ಲಿಷ್ ಭಾಷೆಯಲ್ಲಿ ಇದ್ದು, ಕನ್ನಡಕ್ಕೆ ಅನುವಾದ ಮಾಡಿದ, ಓ.ಎಲ್ ನಾಗಭೂಷಣಸ್ವಾಮಿಯವರು ಕನ್ನಡಕ್ಕೆ ಅನುವಾದ ಮಾಡಿದ, ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳ, ಭಾಷೆಯ ಬಗೆಗೆ ವಿಶೇಷವಾದ ಅಭಿಮಾನವಿದೆ. ಇವರ ಪ್ರಬಂಧದಲ್ಲಿ ಭಾಷೆ ಎಂಬುದೇ ಅದ್ಭುತ ವಸ್ತು ಅದರಲ್ಲಿಯೂ ಕನ್ನಡ ಅದ್ಭುತ ಇಂತಹ ಅದ್ಭುತವಾದ ಭಾಷೆ ಸರಳ ಸುಂದರವಾಗಿ ಬಳಸಿಕೊಂಡರು ಜನರ ಬದುಕಿನ ಹುಳುಕುಗಳನ್ನು ಜನ ಭಾಷೆಯ ಮೂಲಕವೇ ಇದ್ದುದನ್ನು ಇದ್ದ ಹಾಗೆಯೇ ಬಿಚ್ಚಿ ತೋರಿಸುವ ಹೇಳುವ ವೈಶಿಷ್ಟ್ಯತೆಗಳನ್ನೂ ಮೈಗೂಡಿಸಿಕೊಂಡಿದ್ದರು.

ಅವರ ಬಹುಪಾಲು ಪ್ರಬಂಧಗಳು ಸರಳ ಭಾಷೆಯನ್ನು ಸಮರ್ಥವಾಗಿ ಮೈಗೂಡಿಸಿಕೊಂಡಿವೆ. ಸರಳ ಭಾಷೆಯ ಮೂಲಕವೇ ಸಂದರ್ಭೋಚಿತವಾದ ಪರಿಸರವನ್ನು ಕಟ್ಟಿಕೊಡುತ್ತವೆ. ನೇರ ನುಡಿಯಲ್ಲಿ ಅವರಲ್ಲಿದ್ದಂತಹ ಸಾಮಾಜಿಕ ಕಳಕಳಿ ಮಾನವೀಯ ಮೌಲ್ಯಗಳು ಎದ್ದು ಕಾಣುತ್ತವೆ.

ರಾಮಾನುಜನ್‌ರ ಪ್ರಬಂಧಗಳಲ್ಲಿ ಕಂಡುಬರುವ ಗ್ರಾಮೀಣ ಜೀವನದ ಅನುಭವಗಳು ಸಹಜವಾದ ಶೈಲಿಯಲ್ಲಿ ಅಭಿವ್ಯಕ್ತಿಗೊಂಡಿವೆ. ನೇರವಾದ ಅಭಿವ್ಯಕ್ತಿಯೇ ರಾಮಾನುಜನ್‌ರ ಬರಹದ ಶೈಲಿಯಾಗಿದೆ. ಪ್ರತಿವ್ಯವಸ್ಥೆಯತ್ತ: ಹೆಂಗಸರ ಕತೆಗಳು, ಕತೆ ಹೇಳುವುದು, ಹೂಬಿಡುವ ಮರ ಒಬ್ಬ ಹೆಂಗಸಿನ ಕತೆ, ಭಾರತೀಯ ವಿಚಾರಧಾರೆ ಎಂಬುದಿದೆಯೇ? ಕನ್ನಡ ಜಾನಪದ ಎರಡು ವರ್ತುಲಗಳು. ಮುಂತಾದ ಪ್ರಬಂಧಗಳನ್ನು ಗಮನಿಸಬಹುದಾಗಿದೆ. ಉದಾ: ಅವರ ಒಂದು ಪ್ರಬಂಧದಲ್ಲಿ

'ಪ್ರತಿ ವ್ಯವಸ್ಥೆಯತ್ತ: ಹೆಂಗಸರ ಕಥೆಗಳು' ಅದು ಒಂದು ಕಥೆ, ಒಂದು ಹಾಡು.. ವಲ್ಲಿ ಈ ಮಾತುಗಳನ್ನು ಗಮನಿಸಬಹುದು. ಒಬ್ಬ ಹೆಂಗಸಿದ್ದಳು ಅವಳಿಗೆ ಒಂದು ಕಥೆ ಗೊತ್ತಿತ್ತು, ಒಂದು ಹಾಡು ಗೊತ್ತಿತ್ತು. ಕಥೆಯನ್ನು ಯಾರಿಗೂ ಹೇಳದೆ, ಹಾಡನ್ನೂ ಯಾರಿಗೂ ಕೇಳಿಸದೆ ತನ್ನೊಳಗೇ ಬಚ್ಚಿಟ್ಟುಕೊಂಡಿದ್ದಳು.

ಕಥೆ, ಹಾಡು ಎರಡಕ್ಕೂ ಬಿಡುಗಡೆ ಬೇಕಾಗಿತ್ತು. ಒಂದು ದಿನ ಅವಳು ಬಾಯಿ ತೆರೆದುಕೊಂಡೇ ನಿದ್ದೆ ಹೋಗಿದ್ದಾಗ ಕಥೆ ಹೊರಕ್ಕೆ ಹಾರಿತು. ಚಪ್ಪಲಿಯ ರೂಪ ತಳೆದು ಮನೆಯ ಹೊರಗೆ ಹೋಗಿ ಕೂತಿತ್ತು. ಹಾಡು ಹೊರಕ್ಕೆ ಹಾರಿತು ಗಂಡಸಿನ ಅಂಗಿಯ ರೂಪ ತಾಳಿ ಗೂಟಕ್ಕೆ ನೇತಾಡಿಕೊಂಡಿತು. ಅವಳ ಗಂಡ ಮನೆಗೆ ಬಂದ, ಚಪ್ಪಲಿ, ಅಂಗಿ ನೋಡಿದ ಯಾರು ಬಂದಿದ್ದಾರೆ ಅಂತ ಕೇಳಿದ

'ಯಾರೂ ಇಲ್ಲ ಅಂದಳು

'ಈ ಅಂಗಿ, ಈ ಚಪ್ಪಲಿ ಯಾರದುಲ?'

'ನನಗೆ ಗೊತ್ತಿಲ್ಲ' ಅಂದು ಅವನಿಗೆ ಸಮಾಧಾನವಾಗಲಿಲ್ಲ. ಸಂಶಯ ಹುಟ್ಟಿತು. ಸಿಟ್ಟು ಮಾಡಿಕೊಂಡ. ಜಗಳವಾಯಿತು. ಗಂಡನಿಗೆ ಕೋಪ ಬಂದು ಕಂಬಳಿ ಎತ್ತಿಕೊಂಡು ಹನುಮಂತ ದೇವಸ್ಥಾನಕ್ಕೆ ಹೋಗಿ ಮಲಗಿಕೊಂಡ.?

ಹೀಗೆ ಕಂಡುದನ್ನೂ ಕಂಡ ಹಾಗೆಯೇ ವಿವರಿಸುವ ದಿಟ್ಟ ಬರಹಗಾರರಾಗಿದ್ದರು. ಎ.ಕೆ. ರಾಮಾನುಜನ್‌ರ ಶೈಲಿ ಅತ್ಯಂತ ಸೂಕ್ಷ್ಮವಾದದ್ದು. ಸೊಗಸಾದದ್ದು ಮನುಷ್ಯ ಸ್ವಭಾವದ ಏರು ಪೇರುಗಳನ್ನು ಹಾಸ್ಯ ತುಂಬಿದ ದಾಟಿಯಲ್ಲಿ ಕಾಣುವ ಗುಣ ಇವರದ್ದು ರಸಿಕ ಮನಸ್ಸಿನ ಲವಲವಿಕೆಯಿಂದ ಕೂಡಿದ ಶೈಲಿಯನ್ನು ಇವರ ಪ್ರಬಂಧದಲ್ಲಿ ಕಾಣಬಹುದಾಗಿದೆ. ಇದಕ್ಕೆ "ಕತೆ ಹೇಳುವುದು" ಇವರಲ್ಲಿ ಹೆಂಗಸರ ಮೌಖಿಕ ಕಥೆಗಳು ಈ ಪ್ರಬಂಧ ಉತ್ತಮ ನಿದರ್ಶನವಾಗಿದೆ. "ರಾಜಕುಮಾರಿ ಒಂಟಿಯಾಗಿದ್ದಳು ಮತ್ತೊಂದು ಮನುಷ್ಯ ಮುಖ ಕಂಡಿತೆ ಎಂದು ಹಾತೊರೆಯುತ್ತಿದ್ದಳು. 'ಗೋಡೆಯಲ್ಲಿ ಬಿರುಕಾದರೂ ಇದ್ದಿದ್ದರೆ ಕೊನೆಯ ಪಕ್ಷ ಒಂದು ಮಗನನ್ನಾದರೂ ಹೊರಗಿನಿಂದ ಒಳಕ್ಕೆ ಎಳಕೊಳ್ಳಬಹುದಾಗಿತ್ತು. ಒಬ್ಬ ಹುಡುಗಿಯಾದರೂ ಜೊತೆಗೆ ಇದ್ದಿದ್ದರೆ ಅಂದುಕೊಳ್ಳುತ್ತಿದ್ದಳು. ಸರಿಯಾಗಿ ಅದೇ ಹೊತ್ತಿಗೆ ಕಿಟಕಿಯಿಂದ ಇಣುಕುತಿದ್ದ ಯುವತಿಯನ್ನು ಕಂಡಳು.

'ಏಯ್ ಹುಡುಗೀ, ಒಳಕ್ಕೆ ಬರತೀಯಾ?

'ಹೂಂ, ಅಂದು ದೊಂಬರ ಹುಡುಗಿ

'ನಿನಗೆ ಅಪ್ಪ ಅಮ್ಮ ಇದಾರಾ? ಇದ್ದಾರೆ ಒಳಗೆ ಬರಬೇಡ, ಆ ಮೇಲೆ ಹೊರಗೆ ಹೋಗಲು ಆಗುವುದಿಲ್ಲ. ಅಪ್ಪ ಅಮ್ಮ ಇರದಿದ್ದರೆ ಒಳಗೆ ಬಾ'

ಇಲ್ಲಿ ನನಗೆ ಯಾರು ಇಲ್ಲ'

ರಾಜಕುಮಾರಿ ಹುಡುಗಿಯನ್ನು ಕಿಟಕಿಯ ಮೂಲಕ ಎಳೆದು ಕೊಂಡಳು. ದೊಂಬರ ಹುಡುಗಿ ಚುರುಕಾಗಿದ್ದಳು. ಮೈ ತಿರುಚಿ, ಕುಗ್ಗಿಸಿ, ಕಿಟಕಿಯಿಂದ ಒಳಕ್ಕೆ ಬಂದಳು. ರಾಜಕುಮಾರಿಗೆ ಸಂತೋಷವಾಗಿತ್ತು. ಅವಳಿಗೀಗ ಜೊತೆ ಸಿಕ್ಕಿತ್ತು. ಕಾಲ ವೇಗವಾಗಿ ಸರಿಯಿತು. ಇನ್ನೂ ಎರಡು ವರ್ಷ ಉರುಳಿದವು.

ರಾಜಕುಮಾರನ ಹನ್ನೆರಡು ವರ್ಷಗಳು ಮುಗಿಯುವುದರಲ್ಲಿತ್ತು. ಅವನ ಮೈಯಲ್ಲಿ ಮತ್ತೆ ಜೀವ ಸಂಚಾರವಾಗುವ ಕಾಲ ಹತ್ತಿರದಲ್ಲಿತ್ತು. ಒಂದು ದಿನ ರಾಜಕುಮಾರಿ ಸ್ನಾನಕ್ಕೆ ಇಳಿದಿದ್ದಳು. ಕಿಟಕಿಯ ಹತ್ತಿರ ಕೊಂಬೆಯ ಮೇಲೆ ಕೂತಿದ್ದ ಶಕುನದ ಹಕ್ಕಿ ನುಡಿಯಿತು. 'ಹನ್ನೆರಡು ವರ್ಷ ಮುಗಿಯುತ್ತಿದೆ. ಯಾರಾದರೂ ಈ ಮರದ ಎಲೆ ಕಿತ್ತು ಜಜ್ಜಿ, ಬೆಳ್ಳಿಯ ಲೋಟದಲ್ಲಿ ರಸ ಹಿಂಡಿಕೊಂಡು, ಅವನ ಬಾಯಿಗೆ ಹಾಕಿದರೆ ಮತ್ತೆ ಜೀವಂತನಾಗುತ್ತಾನೆ ಅಂದಿತು.'

ಈ ಮೇಲಿನ ಸಾಲುಗಳನ್ನೂ ಗಮನಿಸಿದಾಗ ಅವರಲ್ಲಿದ್ದ ಸೂಕ್ಷ್ಮ ಸಂವೇದನೆ ಮನದಟ್ಟಾಗುತ್ತದೆ ತಂತ್ರದ ದೃಷ್ಟಿಯಿಂದ ಎ.ಕೆ. ರಾಮಾನಜನ್‌ರು ಯಾವಾಗಲು ಸಡಿಲವಾಗಿಯೇ ಬರೆಯುತ್ತಾರೆ. ಹಾಗಾಗಿಯೇ ಇವರ ಪ್ರಬಂಧಗಳು ಮತ್ತು ಕಥೆಗಳಲ್ಲಿ ಅಂತಹ ವ್ಯತ್ಯಾಸವೇನು ಕಂಡುಬರದೆ ಕಥೆಗಳು ಮತ್ತು ಪ್ರಬಂಧಗಳನ್ನು ಗೆರೆ ಎಳೆದು ತೋರಿಸುವುದು ಕಷ್ಟವಾಗಿಸುತ್ತದೆ. ಈ ಕೊರತೆಯನ್ನು ಅವರ ಸುಗಮವಾದ ಕಥನ ಶೈಲಿ ಬಹುಬೇಗ ತುಂಬಿಕೊಡುತ್ತದೆ. ಅವರ 'ಹೂ ಬಿಡುವ ಮರ ಒಬ್ಬ ಹೆಂಗಸಿನ ಕಥೆ' ಎಂಬ ಪ್ರಬಂಧದಲ್ಲಿಯ ಈ ಸಾಲುಗಳನ್ನು ಗಮನಿಸಹದು. ಅವರ ಮನೆಯ ಮುಂದೆ ಒಂದು ಎತ್ತರವಾದ ಮರ ಇತ್ತು. ಮರದ ಕೆಳಗಿನ ನೆಲವನ್ನು ಗುಡಿಸಿ ಸ್ವಚ್ಚಮಾಡಿದಳು. ಇಬ್ಬರೂ ಹುಡುಗಿಯರು ಮರದ ಹತ್ತಿರ ಬಂದರು. 'ಅಕ್ಕ ನಾನು ಮರದ ಕೆಳಗೆ ಕೂತು ಧ್ಯಾನ ಮಾಡುತ್ತೇನೆ. ಆಮೇಲೆ ನೀನು ಬಿಂದಿಗೆಯ ನೀರು ನನ್ನ ತಲೆಯ ಮೇಲೆ ಸುರಿ. ನಾನು ಹೂ ಬಿಡುವ ಮರವಾಗುತ್ತೇನೆ. ನಿನಗೆ ಎಷ್ಟು ಬೇಕೋ ಅಷ್ಟು ಹೂ ಬಿಡಿಸಿಕೊ ಆದರೆ ಹುಷಾರು, ಮೊಳಕೆ ಚಿವುಟಬೇಡ, ಎಲೆ ಹರಿಯ ಬೇಡ, ಆಮೇಲೆ ಇನ್ನೊಂದು ಬಿಂದಿಗೆಯ ನೀರು ನನ್ನ ಮೇಲೆ ಸುರಿ ನಾನು ಮತ್ತೆ ಮನುಷ್ಯಳಾಗುತ್ತೇನೆ' ಅಂದಳು ತಂಗಿ.

ಚಿಕ್ಕವಳು ಮರದ ಕೆಳಗೆ ಕೂತು ದೇವರ ಪ್ರಾರ್ಥನೆ ಮಾಡಿದಳು. ದೊಡ್ಡವಳು ತಂಗಿಯ ತಲೆಯ ಮೇಲೆ ಮೊದಲ ಬಿಂದಿಗೆಯ ನೀರು ಸುರಿದಳು. ತಕ್ಷಣ ಚಿಕ್ಕ ಹುಡುಗಿ ದೊಡ್ಡ ಮರವಾಗಿಬಿಟ್ಟಳು. ಭೂಮಿಯಿಂದ ಹಿಡಿದು ಆಕಾಶದವರೆಗೂ ಬೆಳೆದಿದೆ ಮರ ಅನ್ನಿಸುತಿತ್ತು. ಅಕ್ಕ ಹುಷಾರಾಗಿ ಹೂ ಬಿಡಿಸಿಕೊಂಡಳು. ಮೊಳಕೆ, ಚಿಗುರು, ಎಲೆಗಳಿಗೆ ಘಾಸಿ ಮಾಡಲಿಲ್ಲ, ಹಾಗೆ ಒಂದೆರಡು ಬುಟ್ಟಿ ಹೂ ಬಿಡಿಸಿಕೊಂಡ ಮೇಲೆ ಇನ್ನೊಂದು ಬಿಂದಿಗೆಯಲ್ಲಿದ್ದ ನೀರು ಮರದ ಮೇಲೆ ಸುರಿದಳು. ಮರಕ್ಕೆ ಮನುಷ್ಯ ರೂಪ ಬಂದಿತು. ಮರ ಇದ್ದ ಜಾಗದಲ್ಲಿ ತಂಗಿ ನಿಂತಿದ್ದಳು. ತಲೆಯ ಮೇಲೆ ಬಿದ್ದಿದ್ದ ನೀರು ಕೊಡವಿಕೊಳ್ಳುತ್ತ ಎದ್ದು ನಿಂತಳು ಇಬ್ಬರೂ

ಬುಟ್ಟಿಯಲ್ಲಿದ್ದ ಹೂವು ಮನೆಗೆ ತಂದರು ಹೂವಿಗೆ ಅಪರೂಪದ ಪರಿಮಳ ಇತ್ತು. ಹೂಗಳನ್ನು ಸೇರಿಸಿ ಮಾಲೆ ಕಟ್ಟಿದರು.'[೩]

ಹೀಗೆ ಸರಳವಾಗಿ ಕಥೆ ಹೇಳುವ ಶೈಲಿ, ತಂತ್ರದ ಕೊರತೆಯನ್ನು ಮರೆಸುತ್ತದೆ. ಆದರೆ ಅಮೃತ ವಾಕ್ಯದಂತಹ ಕಥೆಗಳು ಆಸೆ ಹುಟ್ಟಿಸುತ್ತಿವೆಯೇ ಹೊರತು ತಣಿಸುವುದಿಲ್ಲ. ಎ.ಕೆ. ರಾಮಾನುಜನ್‌ರದ್ದು ಹಾಸ್ಯ ಪ್ರಧಾನವಾದ ಶೈಲಿ. ಈ ಹಾಸ್ಯ ಪ್ರವಾಹ ಕೆಲವೊಮ್ಮೆ ಹೊನಲಾಗಿ ಹರಿಯುತ್ತದೆ. ಈ ಹಾಸ್ಯದ ಜೊತೆಜೊತೆಯಲ್ಲಿಯೇ ಬೇರೆ ಧರ್ಮಗಳಲ್ಲಿ, ಜಾತಿಗಳಲ್ಲಿ ಇರುವಂತೆ ನಮ್ಮ ಮನದಲ್ಲಿ ಬೇರು ಬಿಟ್ಟಿದಂತಹ ಮಡಿವಂತಿಯ ಪ್ರತಿಷ್ಠೆ, ಸಂಪ್ರದಾಯ ಆಚಾರ ವಿಚಾರ ಮುಂತಾದವುಗಳಿಂದ ಉಂಟಾಗುವ ಅನರ್ಥಗಳನ್ನು' ಹುಳುಕುಗಳನ್ನು ಮುಚ್ಚಿ ಮರೆಯಿಲ್ಲದೆ ತೋರಿಸುತ್ತಾರೆ. 'ಸ್ಪೀಕಿಂಗ್ ಆಫ್ ಶಿವ' ದೇಗುಲ ಮತ್ತು ದೇಹ ಈ ಪ್ರಬಂಧದಲ್ಲಿ, 'ದೇಗಲಕ್ಕೂ ಉಳ್ಳವರಿಗೂ ಸಂಬಂಧ ಕಲ್ಪಿಸುವ ಮೂಲಕ ಕವಿತೆ ಆರಂಭವಾಗುತ್ತದೆ. ದಕ್ಷಿಣ ಭಾರತದ ಮಧ್ಯಕಾಲೀನ ದೇಗುಲಗಳ ಕೋಟೆಕೊತ್ತಲಗಳಿಂದ ಕೂಡಿದ ಅರಮನೆಗಳಂತೆಯೇ ಕಾಣುತ್ತಿದ್ದವು. ಉಳ್ಳವರು ಮತ್ತು ಅಧಿಕಾರಸ್ಥರು ಆಭರಣ ಭೂಷಿತ ದೇವರುಗಳ ವಾಸ ಸ್ಥಾನವಾದ, ಸ್ತಂಭಗಳನ್ನುಳ್ಳ ಬೃಹತ್ ರಚನೆಗಳ ನಿರ್ಮಾಣ ಸಾಧ್ಯವೇ ಇರಲಿಲ್ಲ. ವೀರಶೈವ ಚಳುವಳಿಯ ಬಡವರು, ಕೆಳಜಾತಿಯವರು ಮತ್ತು ಅಸ್ಪೃಶ್ಯರ ಸಲುವಾಗಿ ಅವರಿಂದಲೇ ಉಳ್ಳವರ ಮತ್ತು ಸವಲತ್ತುಗಳನ್ನುಳ್ಳವರ ವಿರುದ್ಧ ತೊಡಗಿದ ಒಂದು ಸಾಮಾಜಿಕ ಪಲ್ಲಟ. ಅಕ್ಷರಸ್ಥ ಪಂಡಿತರ ವಿರುದ್ಧ ಅನಕ್ಷರಸ್ಥರ, ಶಿಲೆಯ ವಿರುದ್ಧ ರಕ್ತಮಾಂಸಗಳದಂಗೆ.

ಈ ಸಂಘರ್ಷವನ್ನೂ ಕವಿತೆ ಅಭಿನಯಿಸುತ್ತದೆ. ಕವಿತೆಯ ಮೊದಲ ಐದು ಸಾಲುಗಳು ದೇವಾಲಯವನ್ನು ಮಾಡುವುದರ ಬಗ್ಗೆ ಹೇಳುತ್ತವೆ. 'ಅವರು (ಉಳ್ಳವರು) ಏನು ಮಾಡಲಾಗದ 'ನಾನು' ಎಂಬ ಬಡತನ ವಿರುದ್ಧವಾಗಿರುವವರು. ಆದರಿಂದ ಒಂಬತ್ತನೆಯ ಸಾಲಿನವರೆಗೆ ದೇಹಕ್ಕೂ ದೇಗುಲಕ್ಕೂ ಇರುವ ಸಮಾನ ಅಂಶಗಳನ್ನು ಒತ್ತಿಹೇಳುವ ಮೂಲಕ ಕವಿ ತನ್ನ ವಿಶೇಷತೆಯಿಂದ ಚೇತರಿಸಿಕೊಳ್ಳುತ್ತಾನೆ. ಕಾಲು–ಕಂಬ, ದೇಹ–ದೇಗುಲ, ಶಿರ–ಕಳಸ, ಅಷ್ಟೇ ಅಲ್ಲ, ಹೊನ್ನ ಕಳಸ. 'ಮಾಡು'ವುದರಿಂದ 'ಆಗು'ವತ್ತ ಚಲಿಸುತ್ತದೆ ಕವಿತೆ. ಹತ್ತಿರದಿಂದ ಹನ್ನೆರಡನೆಯ ಸಾಲಿನವರೆಗೆ ಕವಿತೆ ವೈರುಧ್ಯಗಳನ್ನೆಲ್ಲ ಸಾರಾಂಶವಾಗಿ ಹೇಳಿ ವಿಶಿಷ್ಟವಾದುದನ್ನು ಸಾರುತ್ತದೆ ಮೂಡಿದ್ದು ತಿಳಿಯುತ್ತದೆ. ಇದ್ದುದು ಜೀವಂತವಾದದ್ದು, ಚಲಿಸುವುದು ಅಳಿವಿಲ್ಲದ್ದು. ಕವಿತೆಯ ಮೊದಲ ಸಾಲಿನಲ್ಲಿ ಕಾಲದ ಸೂಚನೆ ಸ್ಪಷ್ಟವಾಗಿದೆ. ದೇವಾಲಯವನ್ನೂ ಮಾಡುವುದು ಕಾಲದಲ್ಲಿ, ದೇಶದಲ್ಲಿ ಸ್ಥಾಪಿಸುತ್ತದೆ. ಅದರಿಂದ ಒಂಬತ್ತನೆಯ ಸಾಲಿನವರೆಗೆ ಎರಡನೆಯ ಚಲನೆಯಲ್ಲಿ ಸಮಾನ ಅಂಶಗಳನ್ನು ಇಂಗ್ಲಿಷ್‌ನಲ್ಲಿ ಹೇಳುವಾಗ 'ಟು ಬಿ' 'ಇರು' ಅನುವಾದಿಸುವ ಬಳಕೆ ಮಾಡಬೇಕಾಗುತ್ತದೆ ಕವಿತೆ ಈ ವಿರುದ್ಧ ಧೃತಿಗಳನ್ನು ಸೂಚಿಸಿ ನಿರ್ಣಯಕ್ಕೆ ತಲುಪುತ್ತವೆ.

ಉಳ್ಳವರು : ಬಡವ

ದೇವಾಲಯ : ದೇಹ

ಮೂಡು : ಇರು

ಸ್ಥಾವರ : ಜಂಗಮ

ಸ್ಥಾವರ/ಜಂಗಮ ವೈರುಧ್ಯ ಕೇವಲ ವಸ್ತು ಮತ್ತು ವ್ಯಕ್ತಿ ಎಂಬಂಥ ವಿರೋಧವಲ್ಲ. ವೀರಶೈವ ತ್ರಿವಿಧದಲ್ಲಿ ಗುರು ಅಧ್ಯಾತ್ಮಿಕ ಶಿಕ್ಷಕ, ಲಿಂಗವು ಶಿವನ ಸಂಕೇತ. ಜಂಗಮವು ಶಿವನ ಚಲನಶೀಲ ಪ್ರತಿನಿಧಿ. ಇವು ಮೂರಾದರೂ ನಿಜವಾಗಿ ಒಂದೇ. ಬಸವಣ್ಣ ತನ್ನ ಇನ್ನೊಂದು ಕವಿತೆಯಲ್ಲಿ ನಿಜವಾದ ಭಕ್ತನಿಗೆ 'ಸ್ಥಾವರ ಜಂಗಮ ಒಂದೇ' ಎನ್ನಿಸುತ್ತವೆ. ಆದರೂ ಭಕ್ತನು ಮನುಷ್ಯ ಜಂಗಮದ ಸೇವೆಗಿಂತ ಶಿಲೆಯ ಸ್ಥಾವರ ಲಿಂಗವನ್ನು ಪೂಜಿಸಲು ಬಯಸಿದರೆ ಅದು ತಿರಸ್ಕಾರ ಯೋಗ್ಯವಾಗಿಸುತ್ತದೆ."[೭]

ಹೀಗೆ ಹಲವಾರು ನಿದರ್ಶನಗಳನ್ನು ಕೊಡುವುದು ಗ್ರಾಮ ಜೀವನದ ಸೌಂದರ್ಯವನ್ನು ಅಂತರಂಗದಿಂದ ಸೂಕ್ಷ್ಮವಾಗಿ ಗಮನಿಸಿ ತದ್ರೂಪವಾಗಿ ಚಿತ್ರಿಸುತ್ತಾರೆ. ಅವರ ಈ ಚಿತ್ರವಾದಲ್ಲಿ ಕಲ್ಪನೆಗಳಿಗೆ ಸ್ಥಳವೇ ಇರುವುದಿಲ್ಲ. ವೈಚಾರಿಕ ವಿಚಾರಗಳೂ ಮಹತ್ವವಾದ ಸ್ಥಾನವನ್ನು ಪಡೆದು ಕೊಳ್ಳುವುದಿಲ್ಲ. ಗ್ರಾಮೀಣ ಬದುಕಿನ ಮಧ್ಯಮವರ್ಗದ ಜೀವನ ವಿಧಾನವನ್ನು ತನ್ನ ಸಾಹಿತ್ಯಕ್ಕೆ ಆಯ್ಕೆ ಮಾಡಿಕೊಂಡಿರುವುದರಿಂದ ಇವರ ಪ್ರಬಂಧದಲ್ಲಿ ಒಂದಕ್ಕೂ ಮತ್ತೊಂದಕ್ಕೂ ಹೆಚ್ಚಿನ ಅಂತರ ಕಂಡುಬರುವುದಿಲ್ಲ. 'ಪ್ರಯತ್ನ ಪೂರ್ವಕವಾದ ಕಲೆಗಾರಿಕೆಯಿಂದಾಗಿ ಸಹೃದಯದ ಮನಸ್ಸನ್ನು ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಅವರ ಪ್ರಬಂಧಗಳ ಒಳಗೆ ಒಂದು ಉದಾರವಾದ ಮನಸ್ಸು ಮಾತಾಡುವಂತೆ ತೋರುತ್ತದೆ.

ಎ.ಕೆ. ರಾಮಾನಜನ್‌ರ ಬರವಣಿಗೆಯ ಸಿನಿಕತೆಯನ್ನು ಸುಧಾಸಂಪಾದಕೀಯ.. ಈ ರೀತಿ ಗುರ್ತಿಸಿದ್ದಾರೆ "ಬರವಣಿಗೆ ಯಾವುದೇ ಪ್ರಕಾರದಲ್ಲಿರಲಿ ರಾಮಾನುಜನ್ ಪ್ರಯೋಗಶೀಲರಾಗಿದ್ದರು. ಹೊಸತನ ತಾಜಾತನ, ಅವರ ಬರವಣಿಗೆಯ ದಿವ್ಯ ತೇಜವಾಹಿತ್ತು. ಅನುಭವದ್ರವ್ಯ ಹಾಗೂ ಅಭಿವ್ಯಕ್ತಿಯಲ್ಲಿ ಹೊಸತನವನ್ನು ಧಾರಾಳವಾಗಿ ಮೆರೆಸುವ ಅವರ ಬರವಣಿಗೆಯ ಮತ್ತೊಂದು ವೈಶಿಷ್ಟ್ಯವೆಂದರೆ ಹಾಸ್ಯ ಹಾಗೂ ಹರಿತವಾದ ಒಳನೋಟ. ತರುಣ ಕವಿಗಳು ಗೋಪಾಲಕೃಷ್ಣ ಅಡಿಗರ ದಟ್ಟ ಪ್ರಭಾವ ಅರಗಿಸಿಕೊಂಡು ತಮ್ಮ ಸ್ವಂತಿಕೆ ಛಾಪಿಸಲು ಸಹಕರಿಸುತ್ತಿದ್ದ ಆದಿನದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲದ' ರಾಮಾನುಜನ್ ಕಾವ್ಯ ಈ ಗುಣಗಳಿಂದಾಗಿಯೇ 'ನನ್ನ'ವಾದವೂ ನನ್ನ ಮಾರ್ಗದ ಕಾವ್ಯಕ್ಕಿಂತ ವಿಭಿನ್ನ ಸಾಹಿತ್ಯ ಪ್ರಿಯರ ಗಮನ ಸೆಳೆಯಿತು."[೮]

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಎ.ಕೆ. ರಾಮಾನುಜನ್‌ರ ಅಭಿವ್ಯಕ್ತಿ ಶೈಲಿಗಳ ಬಗೆಗಿನ ಸೂಕ್ಷ್ಮ ನೋಟ ದೊರೆತಂತಾಗುತ್ತದೆ. ವ್ಯಕ್ತಿ ಸಂದರ್ಭ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಸಾಹಿತ್ಯದಲ್ಲಿ ಭಾಷೆಯನ್ನು ಬಳಸುವುದರಿಂದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುವ ಭಾಷಾ ವೈವಿಧ್ಯಕ್ಕೂ ದೈನಂದಿನ ವ್ಯವಹಾರದಲ್ಲಿ ಬಳಕೆಯಾಗುವ ಭಾಷಾ ವೈವಿಧ್ಯಕ್ಕೂ ವ್ಯತ್ಯಾಸ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಸಾಹಿತಿ ಮತ್ತು ಭಾಷೆ ಅನುಭವ ಮತ್ತು ಭಾಷೆ ಇವುಗಳ ಪರಸ್ಪರ ಹೊಂದಾಣಿಕೆಯಿಂದ ವಿಶಿಷವಿಪರಗಳ ಜೊಡಣೆಯಾಗಿರುವುದು ರಾಮಾನುಜನ್‌ರ ಸಾಹಿತ್ಯದ ವೈಶಿಷ್ಟ್ಯ.

ಅಡಿ ಟಿಪ್ಪಣಿಗಳು

೧. ಎ.ಕೆ ರಾಮಾನುಜನ್ ಆಯ್ದ ಪ್ರಬಂಧಗಳು ಅನುವಾದ ಓ.ಎಲ್. ನಾಗಭೂಷಣಸ್ವಾಮಿ. ಮನೋಹರ ಗ್ರಂಥಮಾಲಾ, ಧಾರವಾಡ ೨೦೧೩

೨. ...." .... ಪು.ಸಂ. ೨೧೮

೩. ...." .... ಪು.ಸಂ. ೧೫೯

೪. ...." .... ಪು.ಸಂ. ೨೭೯ ಮತ್ತು ೨೮೦

೫. ಎ.ಕೆ ರಾಮಾನುಜನ್ ನೆನಪಿನ ಸಂಪುಟ ಸಂ. ಟಿ.ಪಿ. ಅಶೋಕ್ ಬಹುಮುಖಿ ಪ್ರಿತಭೆ ಧೀಮಂತ ಸುಧಾ ಸಂಪಾದಕೀಯ ಪು. ಸಂ. ೩೨.

* * *

ಅಧ್ಯಾಯ ೬

"ಹಾಸ್ಯ ಪ್ರಸಂಗಗಳು"

ಅಧ್ಯಾಯ ೬

"ಹಾಸ್ಯ ಪ್ರಸಂಗಗಳು"

ಸಾಹಿತ್ಯದಲ್ಲಿ ಹಾಸ್ಯದ ಜೀವಂತಿಕೆಯನ್ನು ತುಂಬಬೇಕಾದರೆ ಕವಿ ಸ್ವತಃ ಹಾಸ್ಯಗಾರರಾಗಿರಬೇಕು. ತಾವೂ ನಕ್ಕು, ಓದುಗರನ್ನು ನಗಿಸುವ ಕಲೆಯನ್ನು ಬಲ್ಲವರಾಗಿರಬೇಕು. ಇದಕ್ಕೆ ಕವಿಯಲ್ಲಿ ಸಹಜಶಕ್ತಿ ಇರಬೇಕು ಕವಿಯಲ್ಲಿರುವ ಇಂತಹ ಶಕ್ತಿಯನ್ನು ಹಾಸ್ಯ ಪ್ರದರ್ಶನಶಕ್ತಿ ಎಂಬುದಾಗಿ ಕರೆಯುತ್ತಾರೆ. ಎ.ಕೆ. ರಾಮಾನುಜನ್‌ರಲ್ಲಿ ಇಂತಹ ಕುಶಲತೆಯನ್ನು ಕಾಣಬಹುದಾಗಿದೆ. ದುಃಖದಲ್ಲೂ ಸಹಜವಾಗಿಯೇ ಹಾಸ್ಯ ಪ್ರಿಯರು, ಆದ್ದರಿಂದಲೇ ಅವರ ಸಾಹಿತ್ಯದಲ್ಲಿ ನಿರಂತರವಾದ ಹಾಸ್ಯ, ಹಾಸ್ಯೋಕ್ತಿಗಳು ವರ್ಣನೆಗಳ ಘಟನೆಗಳು ಪ್ರಕಟವಾಗಿವೆ. ತಾವು ಹೋದಲ್ಲೆಲ್ಲಾ ಹಾಸ್ಯದ ಹೊನಲನ್ನೇ ಹರಿಸಿದವರು. ಎ.ಕೆ. ರಾಮಾನುಜನ್‌ರು.

ಹಾಸ್ಯ ಹಾಗೂ ವಿನೋದಗಳು ಮಾನವನ ಬದುಕಿನ ಅವಿಭಾಜ್ಯವಾದ ಅಂಗಗಳ ಹಾಗೆ ಇವು ಜೀವನ ಲವಲವಿಕೆಯಿಂದ ಇರುವುದಕ್ಕೆ ಸಹಾಯಕವಾಗುತ್ತವೆ. ಶ್ರೀ ಅರವಿಂದರು ಹಾಸ್ಯವೆಂದರೆ ''ಕಂಬನಿಯನ್ನು ನಗೆಯನ್ನಾಗಿ ಪರಿವರ್ತಿಸುವ ಕರ್ಮಕೌಶಲ ''ಎಂದಿದ್ದಾರೆ. ಹಾಸ್ಯವೇ ಇಲ್ಲದ ಬಾಳು ಬಾಳಲ್ಲಿ ಹಾಸ್ಯ ಜೀವನವನ್ನು ಉಲ್ಲಾಸಮಯವನ್ನಾಗಿಸುತ್ತದೆ. ಹಾಸ್ಯದಿಂದ ಕೂಡಿದ ಬದುಕು ಸಂತೋಷವನ್ನು, ನೆಮ್ಮದಿಯನ್ನು ನೀಡುತ್ತದೆ. ಉತ್ತಮ ಹಾಸ್ಯವು ಆನಂದದ ಒಂದು ಸ್ವರೂಪ, ಜ್ಞಾನಕ್ಕೆ ಒಂದು ಬಾಗಿಲು ಇಂದು ನಾಗರೀಕರಣ ಬದುಕು ಯಾಂತ್ರಿಕವಾಗಿದೆ. ಇಂತಹ ಯಾಂತ್ರಿಕ ಬದುಕಿನ ನಡುವೆ ನರಳುತ್ತಿರುವ ಜನರಿಗೆ, ಹಾಸ್ಯ ಕನಸಿನ ಇಂತಹ ಬದುಕಿನ ಜಂಜಡಗಳಿಂದಾಗಿ ಜನಗಳ ಮುಖದಲ್ಲಿ ನಗು ಮಾಯವಾಗುತ್ತದೆ.

ಕಥೆಗಳಲ್ಲಿ ಹಾಸ್ಯವನ್ನು ಪ್ರಮುಖವಾಗಿ ತಂದವರಲ್ಲಿ ರಾಮಾನುಜನ್ ಪ್ರಧಾನರಾಗಿದ್ದಾರೆ. ಅವರ ಹಾಸ್ಯ ಪ್ರಮುಖವಾದ ಬರಹದಲ್ಲಿಯ ಜೀವನದ ಗಾಂಭೀರ್ಯವನ್ನೂ ಗುರ್ತಿಸಬಹುದಾಗಿದೆ. ಅವರ ಒಂದೊಂದು ಪಾತ್ರಗಳು ಹಾಸ್ಯದ ಹೊನಲನ್ನೇ ಹರಿಸುತ್ತವೆ. ಇಂತಹ ಪ್ರಸಂಗಗಳಲ್ಲಿ

ಅತಿಶಯೋಕ್ತಿಯೆ ಹೆಚ್ಚಾಗಿ ಕಂಡುಬಂದರೂ ಅದು ಹಾಸ್ಯಕ್ಕೆ ಮೆರಗನ್ನು ತಂದು ಕೊಡುತ್ತದೆ. ಅನಕೃ ತಮ್ಮ 'ಸಾಹಿತ್ಯ ಮತ್ತು ಜೀವನ' ಕೃತಿಯಲ್ಲಿ, ಹಾಸ್ಯವಿಲ್ಲದ ಬಾಳು ದೇವರಿಲ್ಲದ ದೇಗುಲದಂತೆ ದೀಪ್ತಿಯಿಲ್ಲದ ದೀವಿಗೆಯಂತೆ, ಕಪ್ಪು ಮೋಡ ತುಂಬಿದ ಜೀವನಕಾಶದಲ್ಲಿ ಹಾಸ್ಯವು ಒಳ್ಳೆಯ ಬದುಕು ಬೆಳಗಿದಂತೆ'' ಎಂದಿದ್ದಾರೆ. ರಾಮಾನುಜನ್ ಹಾಸ್ಯಪ್ರಜ್ಞೆಯ ಬಗೆಗೆ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು ರಾಮಾನುಜನ್ ಹೇಳಿರುವ ಜೋಕೊಂದನ್ನು ನೆನಪಿಸುತ್ತಾರೆ. ಅವರಿಂದ ಪದ್ಯದ ಸಾಲುಗಳನ್ನು 'ಕೋಟ್' ಮಾಡುತ್ತಾ ಎಲ್ಲರನ್ನು ಪೆಚ್ಚು ಮಾಡುತ್ತಿದ್ದ ಕವಿ ಸುಮತೀಂದ್ರ ನಾಡಿಗರು ಒಮ್ಮೆ ರಾಮಾನಜನ್ ಅದುರು ತಮ್ಮ ಶಕ್ತಿ ವಿಶೇಷತೆಯನ್ನು ಮೆರೆದರು. ರಾಮಾನುಜನ್ ಕೂಡಲೇ ಆಹಾ.... ಈ ನಾಡಿಗರನ್ನು ನೋಡಿ, ಹೊಸ ಜನ್ಮದಲ್ಲಿ ಟೈಲರ್ ಆಗಿದ್ದರೂಂತ ಕಾಣಿಸುತ್ತೆ. ಎಷ್ಟೊಂದೂ 'ಕೋಟ್' ಮಾಡುತ್ತಾರಂತೆ, ಅಂತ ಹೇಳಿ ಊದಿದ ಬಲೂನಿಗೆ ಸೂಜಿ ತಾಗಿನ ಬಿಟ್ಟರು."[೧] ರಾಮಾನುಜನ್‌ರು ಮಾತುಗಾರಿಕೆಯಿಂದಲೇ ಹಾಸ್ಯ ಮಾಡುತ್ತಿದ್ದರು. ಹಾಗೂ ಕೆಲಪದಗಳ ಮೂಲಕವಾಗಿ ಹಾಸ್ಯವನ್ನು ಮೂಡಿಸುತ್ತಿದ್ದರು. ಹಾಗೂ'' ಎಚ್.ಕೆ. ರಾಮಚಂದ್ರಮೂರ್ತಿಯವರು ರಾಮಾನುಜನ್ನರ ಹಾಸ್ಯಯೊಂದನ್ನು ಹೀಗೆ ಹೇಳುತ್ತಾರೆ. ''ಒಮ್ಮೆ ೧೯೫೭ರ ಬೇಸಿಗೆಯಲ್ಲಿ ಅವರೊಂದಿಗೆ ಬೆಳಗಾಂಗೆ ರೈಲಿನಲ್ಲಿ ಪ್ರಯಾಣ ಮಾಡಿದೆವು. ದಾರಿಯುದ್ದಕ್ಕೂ ನಗುಮಾತಿನ ಸುರಿಮಳೆ, ರಾಮಾನುಜನ್ ಎಷ್ಟೇ ಹಗುರವಾಗಿ ಮಾತನಾಡಿದರೂ ಅದು ಸ್ವಾರಸ್ಯವಾಗಿರುತ್ತಿತ್ತು.... ಲಘುವಾದ ಮಾತಿನಲ್ಲಿ. ನಿಜವಾದ witನ ವಿಚಾರದ ಹೂರಣ ಇರುತ್ತಿತ್ತು. ಒಮ್ಮೆ ಯಾರೋ ಒಬ್ಬ ಕುಖ್ಯಾತರ ಬಗ್ಗೆ ಮಾತನಾಡುವಾಗ ಆತನಿಗೆ ಯಾವ ನೀತಿ ನಿಯಮವಿಲ್ಲ... ಆತನಿಗೆ ಹೆಚ್ಚಿನ ಖಯಾಲಿ ಹೆಚ್ಚು... ಎಂದಾಗ ರಾಮಾನುಜನ್ 'morality to him means mysore Sandal Soap' - ಎಂದರು ಶುದ್ಧ ಕೋಲಿ ಎನ್ನಬಹುದಾದ ಈ ಮಾತಿನ ಅರ್ಥ ಹೊಳೆದು ನಾವೆಲ್ಲ ನಕ್ಕಾಗ ಅವರು ''delayed action'' ಎಂದರು.[೨] ಹೀಗೆ ಎ.ಕೆ. ರಾಮಾನುಜನ್‌ರು ಹಾಸ್ಯದ ಬಗ್ಗೆ ತನ್ನ ಸ್ನೇಹಿತರ ಜೊತೆಯಲ್ಲಿ ಪದದ ಅರ್ಥವನ್ನು ವಿವರಿಸುತ್ತ ಹಾಸ್ಯವನ್ನು ಬಿಂಬಿಸುತ್ತಿದ್ದರು. ಮತ್ತ ತಮ್ಮ ಜೀವನ ಅನುಭವವನ್ನು ಉದಾಹರಣೆಯ ಮೂಲಕವಾಗಿ ಹೊರಡಿಸಿರುವುದು ಕಂಡು ಬರುತ್ತದೆ. ಹಾಗೂ ''ಮೈಯನ್ ಕೆಯಿಸರು ಹೀಗೆ ನೆನಪು ಮಾಡುತ್ತಾರೆ. ''ಒಮ್ಮೆ ಸಭೆಯಲ್ಲಿ ರಾಮಾನುಜನ್ ಅವರನ್ನು ಜೋಕ್ ಹೇಳಲು ಕೋರಿದರು. ರಾಮಾನುಜನ್ ವೇದಿಕೆಯ ಮೇಲೆ ಬಂದು ನಿಂತು. ''Here is e joke'' ಎಂದು ತಮ್ಮನ್ನೇ ತೋರಿಸಿಕೊಂಡರು.

ಜನ ನಕ್ಕರು. ಮುಂದುವರೆದು But it is hot mine, but it is my father's ಎಂದು ಮತ್ತೆ ಜನ ನಕ್ಕರು. ಒಮ್ಮೆ ತರಗತಿಯಲ್ಲಿ ಪಾಠ ಹೇಳುತ್ತಿದ್ದಾಗ ತುಂಟ ಹುಡುಗರನ್ನು ಉದ್ದೇಶಿಸಿ ರಾಮಾನುಜನ್ Remember You are on benches and not on breaches ಕೆಲದಿನಗಳ

ಬಳಿಕ ರಾಮಾನುಜನ್ ಹೀಗೇ ಹೇಳಿದಾಗ ವಿದ್ಯಾರ್ಥಿಗಳು 'ಸಾರ್ You are Repeating' ಅಂದರು. 'ರಾಮಾನುಜನ್; I never know monkeys have memory ಅಂದರು.''[೬]

ಎ.ಕೆ. ರಾಮಾನುಜನ್ ಹೇಳುವ ಹಾಸ್ಯಗಳು ಅವರ ವ್ಯಕ್ತಿತ್ವಕ್ಕೆ ಕನ್ನಡಿಯಂತೆ ಎಂದು ಹೇಳಬಹುದಾಗಿದ್ದ, ಹಾಸ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತ ಬಂದಿರುವುದು ತಿಳಿಯುತ್ತದೆ. ಹಾಗೂ ತಮ್ಮ ಪ್ರಬಂಧದಲ್ಲಿ ಹಾಸ್ಯಮಯವಾಗಿ ಗುರ್ತಿಸಿರುವುದು ಕಂಡು ಬರುತ್ತದೆ.

ಎ.ಕೆ. ರಾಮಾನುಜನ್‌ರ ಸಾಹಿತ್ಯಂದಲ್ಲಿ ಹಾಸ್ಯ ಪ್ರಸಂಗಗಳಿಗೇನೂ ಕೊರತೆಯಿಲ್ಲ. ಆದರೆ ಅವರ ಈ ಹಾಸ್ಯ ಪ್ರಸಂಗಗಳು ಹೊಟ್ಟೆ ಹುಣ್ಣಾಗಿಸುತ್ತವಂತೆ ನಗಿಸುವುಗಳಲ್ಲ, ಒಂದು ನಗುವಿನ ರೇಖೆ ಮುಖದ ಮೇಖದ ಮೇಲೆ ಮನಸ್ಸಿನ ಆಳದಲ್ಲಿ ಹರಿದು ಹೋಗುವಂತೆ ಮಾಡುವ ಮೃದು, ಗಂಭೀರ ಹಾಸ್ಯಗಳಾಗಿವೆ. ತಮ್ಮ ಹಾಸ್ಯ ಗುಣದಿಂದಾಗಿಯೆ ಪ್ರಾಮುಖ್ಯ ಪಡೆದುಕೊಂಡಂತಹ ಕೆಲವು ಪಾತ್ರಗಳು ಇವೆ, 'ಹೂ ಬಿಡುವ ಮರ' ಎಂಬ ಪ್ರಬಂಧದಲ್ಲಿ ಬರುವ ''ಅವರ ಮನೆಯ ಮುಂದೆ ಒಂದು ಎತ್ತರವಾದ ಮರ ಇತ್ತು. ಮರದ ಕೆಳಗಿನ ನೆಲವನ್ನೂ ಗುಡಿಸಿ ಸ್ವಚ್ಛಮಾಡಿದಳು, ಇಬ್ಬರೂ ಹುಡುಗಿಯರು ಮರದ ಹತ್ತಿರ ಬಂದರು. 'ಅಕ್ಕಾ ನಾನೂ ಮರದ ಕೆಳಗೆ ಕೂತು ಧ್ಯಾನ ಮಾಡುತೇನೆ. ಆಮೇಲೆ ನೀನು ಈ ಬಿಂದಿಗೆಯ ನೀರು ನನ್ನ ತಲೆಯ ಮೇಲೆ ಸುರಿ, ನಾನು ಹೂಬಿಡುವ ಮರವಾಗುತ್ತೇನೆ, ನಿನಗೆ ಎಷ್ಟು ಬೇಕೋ ಅಷ್ಟು ಹೂ ಬಿಡಿಸಿಕೊ ಆದರೆ ಹುಷಾರು. ಮೊಳಕೆ ಚಿವುಟ ಬೇಡ, ಎಲೆಹರಿಯ ಬೇಡ, ಆಮೇಲೆ ಇನ್ನೊಂದು ಬಿಂದಿಗೆಯ ನೀರು ನನ್ನ ಮೇಲೆ ಸುರಿ, ನಾನು ಮತ್ತೆ ಮನುಷ್ಯನಾಗುತ್ತೇನೆ' ಎಂದಳು ತಂಗಿ. ಚಿಕ್ಕವಳು ಮರದ ಕೆಳಗೆ ಕೂತು ದೇವರ ಪ್ರಾರ್ಥನೆ ಮಾಡಿದಳು. ದೊಡ್ಡವಳು ತಂಗಿಯ ತಲೆಯ ಮೇಲೆ ಮೊದಲ ಬಿಂದಿಗೆಯ ನೀರು ಸುರಿದಳು. ತಕ್ಷಣ ಚಿಕ್ಕ ಹುಡುಗಿ ದೊಡ್ಡ ಮರವಾಗಿಬಿಟ್ಟಳು. ಭೂಮಿಯಿಂದ ಹಿಡಿದು ಆಕಾಶದವರೆಗೂ ಬೆಳೆದಿದೆ ಮರ ಅನ್ನಿಸುತ್ತಿತ್ತು. ಅಕ್ಕ ಹುಷಾರಾಗಿ ಹೂ ಬಿಡಿಸಿಕೊಂಡಳು, ಮೊಳಕೆ, ಚಿಗುರು, ಎಲೆಗಳಿಗೆ ಘಾಸಿ ಮಾಡಲಿಲ್ಲ. ಹಾಗೆ ಒಂದೆರಡು ಬುಟ್ಟಿ ಹೂ ಬಿಡಿಸಿಕೊಂಡ ಮೇಲೆ ಇನ್ನೊಂದು ಬಿಂದಿಗೆಯಲ್ಲಿ ನೀರು ಮರದ ಮೇಲೆ ಸುರಿದಳು. ಮರಕ್ಕೆ ಮನುಷ್ಯರೂಪ ಬಂದಿತು. ಮರ ಇದ್ದಜಾಗದಲ್ಲಿ ತಂಗಿ ನಿಂತಿದ್ದಳು ತಲೆಯ ಮೇಲೆ ಬಿದ್ದಿದ್ದು ನೀರು ಕೊಡವಿಕೊಳ್ಳುತ್ತ ಎದ್ದು ನಿಂತಳು. ಇಬ್ಬರೂ ಬುಟ್ಟಿಯಲ್ಲಿದ್ದ ಹೂವು ಮನೆಗೆ ತಂದರು. ಹೂವಿಗೆ ಅಪರೂಪದ ಪರಿಮಳ ಇತ್ತು. ಹೂಗಳನ್ನು ಸೇರಿಸಿ ಮಾಲೆ ಕಟ್ಟಿದರು.

'ಇದನ್ನು ಎಲ್ಲಿ ಮಾರಲಿ?' ಅಕ್ಕ ಕೇಳಿದಳು. 'ಅಕ್ಕಾ ಅರಮನೆಗೆ ಯಾಕೆ ಹೋಗಬಾರದು? ರಾಜ ಕೈ ತುಂಬ ದುಡ್ಡು ಕೊಡತಾನ. ನಮ್ಮಮ್ಮ ಪಾಪ ನಮಗಾಗಿ ಮನೆಕೆಲಸ, ಕೂಲಿ, ಕೆಲಸಮಾಡತಾಳ. ನಾವು ಒಂದಷ್ಟು ದುಡ್ಡು ಕೂಡಿಟ್ಟು ಅಮ್ಮನಿಗೆ ಆಶ್ಚರ್ಯ ಆಗುವ ಹಾಗೆ

ಮಾಡೋಣ' ಅಂದಳು ತಂಗಿ.

ಸರಿ ಅಕ್ಕ ಬುಟ್ಟಿ ತುಂಬ ಹೂ ಮಾಲೆ ಇಟ್ಟುಕೊಂಡು 'ಹೂವು, ಹೂವು ಬೇಕಾ ಹೂವು ಅಂತ ಕೂಗುತ್ತ ಅರಮನೆಗೆ ಹೋದಳು.

ಹೂಮಾಲೆಗಳನ್ನು ರಾಜಕುಮಾರಿ ನೋಡಿದಳು. 'ಅಮ್ಮ ಅಮ್ಮ ಹೂವಿನ ಪರಿಮಳ ಚೆನ್ನಾಗಿದೆ. ನನಗೆ ಬೇಕು. ಕೊಡಿಸು' ಅಂದಳು.

'ಆಗಲಿ, ಹೂವಿನ ಹುಡುಗಿಯನ್ನು ಕರೆ' ಅಂದಳು ರಾಣಿ. ಇಬ್ಬರೂ ಹೂವಿನ ಮಾಲೆ ನೋಡಿದರು. ತುಂಬ ಚೆನ್ನಾಗಿದ್ದವು. ಎಷ್ಟು ಕೊಡಬೇಕು ಇದಕ್ಕೆ ಅಂತ ರಾಣಿ ಕೇಳಿದಳು. 'ನಾವು ಬಡವರು ನಿಮಗೆ ತೋಚಿದಷ್ಟು ಕೊಡಿ' ಅಂದಳು ಅಕ್ಕ ಅವಳ ಬೊಗಸೆ ತುಂಬುವಷ್ಟು ನಾಣ್ಯಗಳನ್ನು ಕೊಟ್ಟು ಎಲ್ಲ ಮಾಲೆಗಳನ್ನು ಖರೀದಿಮಾಡಿದರು. ಅಕ್ಕ ಮನೆಗೆ ಬಂದಳು, ದುಡ್ಡು ತೋರಿಸಿದಳು. 'ಅಕ್ಕ ಅಕ್ಕಾ ಅಮ್ಮನಿಗೆ ಹೇಳಬೇಡ. ದುಡ್ಡು ಬಚ್ಚಿಡು. ಯಾರಿಗೂ ಹೇಳಬೇಡ' ಅಂದಳು ತಂಗಿ.

ಹೀಗೆ ಅವರು ಐದು ದಿನ ಹೂವು ಮಾರಿದರು. ಅವರಿಗೆ ಐದು ಹಿಡಿ ನಾಣ್ಯಗಳು ಸಿಕ್ಕಿದ್ದವು.

'ಅಮ್ಮನಿಗೆ ತೋರಿಸೋಣವಾ? ಅಂತ ಒಬ್ಬಳು ಕೇಳಿದಳು.

'ಬೇಡ, ಬೇಡ ಅಮ್ಮನಿಗೆ ಸಿಟ್ಟು ಬಂದು ಹೊಡೆಯುತ್ತಾಳೆ.' ಅಂದಳು ಇನ್ನೊಬ್ಬಳು, ಇಬ್ಬರು ಹುಡುಗಿಯರಿಗೂ ದುಡ್ಡು ಮಾಡುವ ಆಸೆ ಬಂದಿತ್ತು.

ಒಂದು ದಿನ ರಾಜಕುಮಾರ ಈ ಹೂವುಗಳನ್ನು ನೋಡಿದ. ಮೂಸಿದರೆ ಅದ್ಭುತವಾದ ಪರಿಮಳ ಇತ್ತು ಅಂಥ ಹೂವನ್ನು ಅವನು ಯಾವತ್ತೂ ಎಲ್ಲೂ ನೋಡಿರಲಿಲ್ಲ. 'ಯಾವ ಹೂವು ಇದು? ಎಲ್ಲಿ ಬೆಳೆಯುತ್ತಾರೆ ಇದನ್ನು? ಯಾವ ಗಿಡದಲ್ಲಿ ಬಿಡುಸದೆ? ಅರಮನೆಗೆ ಯಾರು ತರತಾರೆ?' ಅಂದುಕೊಳ್ಳುತ್ತ ಆಶ್ಚರ್ಯಪಟ್ಟ. ಹೂವು ತರುವ ಹುಡುಗಿಯನ್ನು ಗಮನಿಸಿದ. ಒಂದು ದಿನ ಅವಳ ಹಿಂದೆಯೇ ಮುದುಕಿಯ ಮನೆಯವರೆಗೂ ಹೋದ ಅಲ್ಲಿ ಹೂವು ಬಿಡುವ ಒಂದು ಮರವೂ ಇರಲಿಲ್ಲ. ಅವನಿಗೆ ಕುತೂಹಲ ಹುಟ್ಟಿತು. 'ಇಂಥ ಹೂವು ಇವರಿಗೆ ಎಲ್ಲಿ ಸಿಗುತದೆ? ಅಂದುಕೊಂಡ. ಮಾರನೆಯ ದಿನ ಬೆಳಗಿನ ಜಾವ ಇನ್ನೂ ಕತ್ತಲಿರುವಾಗಲೇ ರಾಜಕುಮಾರ ಅಲ್ಲಿಗೆ ಹೋಗಿ ಮುದುಕಿಯ ಮನೆಯ ಮುಂದೆ ಇದ್ದ ಎತ್ತರವಾದ ಮರದ ಹಿಂದೆ ಬಚ್ಚಿಕೊಂಡ ಅವತ್ತು ಕೂಡ ಹುಡುಗಿಯರು ಒಂದು ಮರದ ಕೆಳಗಿನ ಜಾಗ ಗುಡಿಸಿ ಸ್ವಚ್ಛಮಾಡಿದರು. ಮಾಮೂಲಿನಂತೆ ಚಿಕ್ಕವಳು ಹೂವಿನ ಮರವಾಗಿ, ದೊಡ್ಡವಳು ಹುಷಾರಾಗಿ ಹೂ ಬಿಡಿಸಿಕೊಂಡು, ಆಮೇಲೆ ಮರ ಮತ್ತೆ ಹುಡುಗಿ ಯಾಗುವುದೆಲ್ಲ ನಡೆಯಿತು. ಇದೆಲ್ಲ ತನ್ನ ಕಣ್ಣೆದುರಿಗೇ ಆಗುವುದನ್ನು ರಾಜಕುಮಾರ ಕಂಡ.

ನೆಟ್ಟಗೆ ಮನೆಗೆ ಬಂದ ಬಂದವನೇ ಹಾಸಿಗೆಯ ಮೇಲೆ ಬೋರಲು ಬಿದ್ದುಕೊಂಡ ಅಪ್ಪ ಅಮ್ಮ ಬಂದು ಏನಾಯಿತಪ್ಪಾ ಅಂದರು. ಅವನು ಒಂದೂ ಮಾತಾಡಲಿಲ್ಲ. ಮಂತ್ರಿಯ ಮಗ, ರಾಜಕುಮಾರನ ಗೆಳೆಯ ಬಂದ. ಏನಾಯಿತು? ಯಾರಾದರೂ ಏನಾದರೂ ಅಂದರಾ? ಬೇಜಾರಾಯಿತಾ? ಏನಾದರೂ ಬೇಕಾ? ನನ್ನ ಹತ್ತಿರ ಹೇಳು' ಅಂದ.

ರಾಜಕುಮಾರ ನಿಧಾನವಾಗಿ ಎಲ್ಲಾ ಹೇಳಿದ. ಹುಡುಗಿ ಹೂ ಬಿಡುವ ಮರನಾಗಿದ್ದನ್ನು ಹೇಳಿದ 'ಅಷ್ಟೇನಾ!' ಅನ್ನುತ್ತ ಮಂತ್ರಿಯ ಮಗ ಇದ್ದನ್ನೆಲ್ಲ ರಾಜನಿಗೆ ಹೇಳಿದ.

ರಾಜ ಮಂತ್ರಿಯನ್ನು ಕರೆಸಿದ. ಮುದುಕಿಗೆ ಹೇಳಿ ಕಳಿಸಿದ. ಬಂದಳು. ಭಯದಿಂದ ನಡುಗುತ್ತಿದ್ದಳು. ಹಳೆಯ ಬಟ್ಟೆ ತೊಟ್ಟಿದ್ದಳು. ಬಾಗಿಲಲ್ಲೆ ನಿಂತಳು. ತುಂಬ ಬಲವಂತ ಮಾಡಿದ ಮೇಲೆ ಕೂತಳು. ರಾಜ ಅವಳಿಗೆ ಸಮಾಧಾನ ಹೇಳಿದ 'ನಿಮ್ಮ ಮನೆಯಲ್ಲಿ ಇಬ್ಬರು ಹುಡುಗಿಯರಿದ್ದಾರೆ. ನಮಗೆ ಒಳ್ಳನ್ನೂ ಕೊಡತೀಯಾ? ಅಂತ ಕೆಳಿದ ಮುದುಕಿಯ ಭಯ ಹೆಚ್ಚಾಯಿತು.

'ನನ್ನ ಮಕ್ಕಳ ವಿಚಾರ ರಾಜನಿಗೆ ಹೇಗೆ ತಿಳಿಯಿತು?' ಆಗಬಹುದು ಧಣಿ ನೀವು ಕೇಳುವಾಗ ನನ್ನಂಥ ಬಡವಿ ಮಗಳನ್ನು ಕೊಡಲ್ಲ ಅನ್ನುವುದಕ್ಕೆ ಆಗತದಾ? ಎಂದು ತೊದಲಿದಳು."[೪] ಹೀಗೆ ಎ.ಕೆ. ರಾಮಾನುಜನ್‌ರ ಈ ಪ್ರಬಂಧದಲ್ಲಿ ವಿನೋದ ಹಾಸ್ಯ ತುಂಬಿತುಳುಕುತ್ತವೆ. ಭಾಷೆಯ ಸರಳವಾಗಿ ನಿರೂಪಿಸಿರುವುದು ಗುರ್ತಿಸಬಹುದಾಗಿದೆ. ವಾಸ್ತವ ಘಟನೆಯ ಜನರಿಗೆ ತೋರಿಸಿಕೊಟ್ಟಿದ್ದಾರೆ. ಹಾಗೂ ಹೆಣ್ಣು ಕೇಂದ್ರವಾಗಿರುವ ಕಥೆಗಳಲ್ಲಿ ಹೆಣ್ಣಿನ ಕಷ್ಟಗಳು ಈ ಪ್ರಬಂಧದಲ್ಲಿ ತೋರಿಸಿದ್ದಾರೆ. '೩೦೦ ರಾಮಾಯಣಗಳು', ರಾಮಾಯಣವನ್ನು ಕೇಳಿದರೆ ಏನಾಗುತ್ತದೆ? ಈ ಪ್ರಬಂಧದಲ್ಲಿ ಗ್ರಂಥಹಾಸ್ಯ ಮತ್ತು ಚಿಂತನೆಗೆ ಒಳಪಡುವ ಪ್ರಧಾನ ಕೃತಿಯಾಗಿದೆ. ಲೇಖಕರು ತಮ್ಮ ಜೀವನ ಅನುಭವವನ್ನು ಸಾಹಿತ್ಯದ ಮೂಲಕ ನಮಗೆ ಪರಿಚಯ ಮಾಡಿಕೊಡುತ್ತಾರೆ. "ಸಂಸ್ಕೃತಿಯ ಗಂಧವೇ ಇರದ ಸಂಸ್ಕೃತಿಯ ಬಗ್ಗೆ ಆಸಕ್ತಿಯೂ ಇರದ ಹಳ್ಳಿಗನೊಬ್ಬ ಅತ್ಯಂತ ಸುಸಂಸ್ಕೃತಳನ್ನು ಮದುವೆಯಾಗಿದ್ದ ಬದುಕಿನ ಉದಾತ್ತ ಸಂಗತಿಗಳ ಬಗ್ಗೆ ಅವನ ಅಭಿರುಚಿಯನ್ನೂ ಬೆಳೆಸಲು ಅವಳು ಎಷ್ಟೆಷ್ಟೋ ಪ್ರಯತ್ನಪಟ್ಟು ಸೋತಿದ್ದಳು.

ಒಂದು ದಿನ ಆ ಹಳ್ಳಿಗೆ ರಾಮಾಯಣದ ಹರಿಕಥೆ ಮಾಡುವವನೊಬ್ಬ ಬಂದ. ದಿನವೂ ಸಾಯಂಕಾಲ ರಾಮಾಯಣದ ಶ್ಲೋಕಗಳನ್ನು ಹಾಡಿ, ವಿವರಿಸುತ್ತಿದ್ದ. ಇಡೀ ಹಳ್ಳಿಯವರು ಕಥೆ ಕೇಳಲು ಹೋಗುತ್ತಿದ್ದರು.

ಪೆದ್ದನನ್ನೂ ಮದುವೆಯಾಗಿದ್ದವಳು ಗಂಡನಲ್ಲೂ ರಾಮಾಯಣದ ಬಗ್ಗೆ ಆಸಕ್ತಿ ಹುಟ್ಟಿಸುವುದಕ್ಕೆ ಪ್ರಯತ್ನಪಟ್ಟಳು. ನೀನೂ ಹೋಗಿ ಕಥೆ ಕೇಳು. ಕೇಳು ಎಂದು ಪೀಡಿಸಿದಳು. ಆತನು ಒಲ್ಲೆನೆಂದು ಕೊಸರಾಡಿದ. ಕೊನೆಗೊಮ್ಮೆ ಅವಳಿಗೆ ಸಮಾಧಾನವಾದರೂ ಆಗಲೆಂದು ಅವನು ಕಥೆ ಕೇಳಲು

ಹೋದ. ಸಾಯಂಕಾಲ ಕಥೆ ನಡೆಯುತ್ತಿದ್ದಲ್ಲಿಗೆ ಹೋಗಿ ಕೊನೆಯ ಸಾಲಿನಲ್ಲಿ ಕೂತ. ಕಥೆ ಇಡೀ ರಾತ್ರಿ ನಡೆಯುತ್ತಿತ್ತು. ಅವನಿಗೆ ನಿದ್ದೆ ತಡೆಯಲು ಆಗಲಿಲ್ಲ. ಮಲಗಿಬಿಟ್ಟ. ಬೆಳಗಿನ ಜಾವದ ಹೊತ್ತಿಗೆ ಒಂದು ಕಾಂಡದ ಕಥೆಮುಗಿಸಿ ಆರತಿ ಸಿಹಿ ಹಂಚಿದರು. ಮಲಗಿ ಹೋಗಿದ್ದ ಇವನ ಬಾಯಿಗೂ ಯಾರೋ ಒಂದಷ್ಟು ಸಿಹಿ ಇಕ್ಕಿದರು. ಎಚ್ಚರಗೊಂಡ ಮನೆಗೆ ಹೋದ. ಇಡೀ ರಾತ್ರಿ ತನ್ನ ಗಂಡ ರಾಮಾಯಣ ಕೇಳಿದನೆಂದು ಹೆಂಡತಿಗೆ ಸಂತೋಷವಾಯಿತು. 'ಹೇಗಿತ್ತು ರಾಮಾಯಣ? ಅಂತ ಕೇಳಿದಳು. 'ಬಹಳ ಸಿಹಿಯಾಗಿತ್ತು' ಅಂದ ಅವನು. ಅದನ್ನೂ ಕೇಳಿ ಹೆಂಡತಿಗೆ ಸಂತೋಷವಾಯಿತು.

ಮಾರನೆಯ ದಿನವೂ ಕಥೆ ಕೇಳಲು ಹೋಗು ಎಂದು ಬಲವಂತ ಮಾಡಿದಳು. ಇವನು ಹೋಗಿ ಎಲ್ಲರಿಗಿಂತ ಹಿಂದೆ ಗೋಡೆಗೆ ಒರಗಿಸಿಕೊಂಡು ಕೂತ. ಸ್ವಲ್ಪ ಹೊತ್ತಿನಲ್ಲೇ ನಿದ್ದೆ ಹೋದ. ಜನ ಬಹಳ ಇದ್ದರು. ಚಿಕ್ಕ ಹುಡುಗನೊಬ್ಬ ನಿದ್ದೆ ಹೋಗಿದ್ದ ಇವನ ಹೆಗಲೇರಿ ಕೂತುಕೊಂಡ ಕುತೂಹಲದಿಂದ ತೆರೆದ ಬಾಯಿ ಮುಚ್ಚದೆ ಕಥೆ ಕೇಳುತ್ತಿದ್ದ ಬೆಳಗಿನ ಹೊತ್ತಿಗೆ ಅವತ್ತಿನ ಕಥೆಯ ಭಾಗ ಮುಗಿದಾಗ ಎಲ್ಲರೂ ಎದ್ದು ಮನೆಗೆ ಹೋದರು. ಇವನೂ ಹೊರಟ. ಇವನ ಬೆನ್ನ ಮೇಲಿದ್ದ ಹುಡುಗ ಮೊದಲೇ ಇಳಿದು ಹೊರಟು ಹೋಗಿದ್ದ. ಆದರೆ ಇಡೀ ರಾತ್ರಿ ಭಾರ ಹೊತ್ತಿದ್ದ ಇವನ ಹೆಗಲು ನೋಯುತ್ತಿದ್ದವು. ಮನೆಗೆ ಬಂದಾಗ ರಾಮಾಯಣ ಹೇಗಿತ್ತು ಅಂತ ಹೆಂಡತಿ ಮತ್ತೆ ಕೇಳಿದಳು. 'ಬಹಳ ಭಾರ, ಬೆಳಗಾಗುವ ಹೊತ್ತಿಗೆ ಪಡೆದುಕೊಳ್ಳುವುದಕ್ಕೇ ಆಗಲಿಲ್ಲ' ಅಂದ 'ಕಥೆ ಇರುವುದೇ ಹಾಗೆ' ಅಂದಳು ಹೆಂಡತಿ, ಗಂಡ ಕೊನೆಗೂ ರಾಮಾಯಣದ ಭಾವನೆಗಳನ್ನೂ ಅನುಭವಿಸುತ್ತಿದ್ದಾನೆ ಅಂದುಕೊಂಡು ಸಂತೋಷಪಟ್ಟಳು.

ಮೂರನೆಯ ದಿನವೂ ಇವನು ಹೋದ. ಕೊನೆಯಲ್ಲಿ ಜನರ ಗುಂಪಿನ ಅಂಚಿನಲ್ಲಿ ಕೂತ, ನಿದ್ದೆ ಬಂದು ಹಾಗೇ ಮಲಗಿಬಿಟ್ಟ. ಗೊರಕೆ ಹೊಡೆಯುವದಕ್ಕೆ ಶುರುಮಾಡಿದ. ಬೆಳಗಿನ ಜಾವದ ಹೊತ್ತಿಗೆ ಅವನಿಗೆ ಎಚ್ಚರವಾಗುವ ಮೊದಲು, ಒಂದು ನಾಯಿ ಬಂದು ಅವನ ಮುಖದ ಮೇಲೆ ಮೂತ್ರ ಮಾಡಿ ಹೊರಟು ಹೋಯಿತು. ಕಥೆ ಹೇಗಿತ್ತು? ಹೆಂಡತಿ ಕೇಳಿದಳು. 'ಥೂ ಬರೀ ಉಪ್ಪುಪ್ಪು' ಅಂದ ಇವನು, ಏನೋ ಎಡವಟ್ಟಾಗಿದೆ ಅಂದು ಕೊಂಡಳು ಹೆಂಡತಿ ಕಥೆಯಲ್ಲಿ ಏನಾಯಿತು ಹೇಳು ಎಂದು ಬಲವಂತ ಮಾಡಿದಳು. ಬಾಯಿ ಬಿಡಲಿಲ್ಲ. ಕೊನೆಗೆ ದಿನಾ ರಾತ್ರಿ ಕಥೆ ನಡೆಯುವಾಗ ನಿದ್ರೆ ಮಾಡುತ್ತಿದ್ದೆ ಅಂತ ನಿಜ ಹೇಳಿದ.

ನಾಲ್ಕನೆಯ ದಿನ ಹೆಂಡತಿಯೂ ಜೊತೆಯಲ್ಲಿ ಹೋದಳು. ಅವನನ್ನು ಮುಂದಿನ ಸಾಲಿನಲ್ಲೇ ಕೂರಿಸಿದಳು. ಏನೇ ಆದರೂ ನಿದ್ದೆ ಮಾಡಬಾರದು. ಕಥೆ ಕೇಳಬೇಕು ಎಂದು ತಾಕೀತು ಮಾಡಿದಳು. ಅವನು ಮುಂದಿನ ಸಾಲಿನಲ್ಲೇ ಕೂತು ಕಥೆ ಕೇಳಿಸಿಕೊಂಡ ಕಥೆ ಕೇಳುತ್ತ ಕೇಳುತ್ತ

ಅವನೂ ಕಥೆಯ ಸಾಹಸಗಳಲ್ಲಿ ಸೇರಿ ಹೋದ. ಅವತ್ತು ಹನುಮಂತನು ರಾಮನ ಮುಂದ್ರೆಯುಂಗರ ತೆಗೆದುಕೊಂಡು ಕಡಲನ್ನೂ ಹಾರಿದ ಕಥೆ ನಡೆಯುತ್ತಿತ್ತು. ಹನುಮಂತ ಸಮುದ್ರ ಹಾರುತ್ತಿದ್ದ. ಅವನ ಕೈಯಲ್ಲಿದ್ದ ಮುದ್ರೆಯುಂಗುರ ಜಾರಿ ಸಮುದ್ರಕ್ಕೆ ಬಿದ್ದು ಹೋಯಿತು. ಅವನು ಬೇಗ ಉಂಗುರ ಹುಡುಕಿ, ಅದನ್ನು ತೆಗೆದುಕೊಂಡು, ರಾಕ್ಷಸನ ಊರಲ್ಲಿದ್ದ ಸೀತೆಗೆ ಕೊಡಬೆಕಾಗಿತ್ತು. ಏನು ಮಾಡಬೇಕೊ ತೋಚಲಿಲ್ಲ. ಹನುಮಂತ ಕೈ ಕೈ ಹಿಸುಕಿಕೊಳ್ಳುತ್ತಿದ್ದ, ಆಗ ಮುಂದಿನ ಸಾಲಿನಲ್ಲೇ ಕೂತು, ಮೈ ಮರೆತು ಕಥೆ ಕೇಳುತ್ತಿದ್ದ. ಇವನು ತಟಕ್ಕನೆ ಎದ್ದು ನಿಂತ 'ಹನುಮಂತಾ ಯೋಚನೆ ಮಾಡಬೇಡ. ನಾನು ತಂದು ಕೊಡುತ್ತೇನೆ' ಅನ್ನುತ್ತ ಓಡಿ ಹೋಗಿ ಸಮುದ್ರಕ್ಕೆ ಧುಮುಕಿದ. ಉಂಗುರ ತೆಗೆದುಕೊಂಡು ಬಂದು ಹನುಮಂತನಿಗೆ ಕೊಟ್ಟ."[೫] ಈ ಪ್ರಬಂಧದಲ್ಲಿ ಹಾಸ್ಯ ಸ್ವಾರಸ್ಯಮಯವಾಗಿ ಮತ್ತು ನೀತಿಯುಕ್ತತೆಯಿಂದ ಕೂಡಿವೆ. ಎ.ಕೆ. ರಾಮಾನುನ್‌ರು ಮುಖ್ಯವಾಗಿ ರಾಮಾಯಣದ ಸನ್ನಿವೇಶ ಮತ್ತು ರಾಮಾಯಣದಿಂದ ಸಿಗುವ ಫಲ ಹೇಗಿರುತ್ತದೆ ಎನ್ನುವುದನ್ನು ಈ ಪ್ರಬಂಧದಲ್ಲಿ ಹಾಸ್ಯವನ್ನು ಮೂಡಿಸಿದ್ದಾರೆ.

ಎ.ಕೆ. ರಾಮಾನುಜನ್‌ರ ಪ್ರಬಂಧದಲ್ಲಿ ಭಾಷೆಯು ಸರಳವಾಗಿ ಸವಿಸ್ತಾರವಾಗಿ ಪ್ರಬಂಧಗಳು ಇರುವುದು ತಿಳಿಯುತ್ತದೆ. ಅಂದರೆ ಜನಸಾಮಾನ್ಯರಿಗೂ ಗೊತ್ತಾಗುವ ರೀತಿಯಲ್ಲಿಯೂ ಸರಳ ಭಾಷಎಯಲ್ಲಿ ವಿವರಿಸಿದ್ದಾರೆ. ಹಾಗೂ ಹೆಂಗಸರ ಕಥೆಗಳು ಅಲ್ಲಿ ಹೆಣ್ಣಿನ ಕೇಂದ್ರ ಬಿಂದುವಾಗಿ ಮಾಡಿ ಅವರ ಸಂಸ್ಕೃತಿಯನ್ನು ಉಳಿಸುವ ವ್ಯವಸ್ಥೆಯನ್ನು ಹಾಸ್ಯವಾಗಿ ಮೂಡಿಸಿದ್ದಾರೆ. ಪ್ರತಿ–ವ್ಯವಸ್ಥೆಯತ್ತ: ಹೆಂಗಸರ ಕಥೆಗಳು. ಈ ಪ್ರಬಂಧದಲ್ಲಿ ಸರಳವಾಗಿ ವಿವರಿಸಿದ್ದಾರೆ. "ಇನ್ನೊಂದು ಊರಿನಲ್ಲಿ ಇನ್ನೊಬ್ಬ ರಾಜ. ಅವನಿಗೆ ಒಬ್ಬ ಮಗ, ಒಬ್ಬ ಮಗಳು, ಅವನು ಮಗನಿಗೆ ಕನ್ಯೆ ಹುಡುಕುತ್ತಿದ್ದ. ಇಬ್ಬರು ರಾಜರ ಪರಿವಾರವೂ ಕೈಯಲ್ಲಿ ಚಿತ್ರ ಹಿಡಿದುಕೊಂಡು ಹುಡುಕುವುದಕ್ಕೆ ಹೊರಟಿದ್ದರು. ದಾರಿಯಲ್ಲಿ ಹೊಳೆ ಅಡ್ಡ ಬಂತು. ಜೋರಾಗಿ ಪ್ರವಾಹ ಬಂದಿತ್ತು. ಸಂಜೆಯಾಗುತ್ತಿತ್ತು. ಹೊಳೆ ತಗ್ಗಲಿ. ಬೆಳಗಾಗ ಎದ್ದು ಹೊರಡೋಣ "ಅಂದುಕೊಂಡು ಆಕಡೆ ದಡದಲ್ಲಿ ಅವರು ಈ ಕಡೆದಡದಲ್ಲಿ ಇವರು ಬಿಡಾರ ಹೂಡಿದರು. ಬೆಳಗಾಯಿತು ಮುಖತೊಳೆಯುವುದಕ್ಕೆ ನದಿಯ ಹತ್ತಿರ ಬಂದರು. ಎರಡೂ ಗುಂಪುಗಳ ಭೇಟಿಯಾಯಿತು 'ನಮಗೆ ವರ ಬೇಕು' ಎಂದು ಒಬ್ಬರು 'ನಮಗೆ ಕನ್ಯೆ ಬೇಕು' ಎಂದು ಇನ್ನೊಬ್ಬರು ಮಾತಾಡಿಕೊಂಡರು. ಕೈಯಲ್ಲಿದ್ದ ಚಿತ್ರ ಬದಲಾಯಿಕೊಂಡರು. ನೋಡಿದರು. ಇಬ್ಬರಿಗೂ ಒಪ್ಪಿಗೆಯಾಯಿತು. ಹುಡಿಗಿಯ ಕಡೆಯವರು 'ಮೂರು ಖಂಡುಗ ಹೂವಿನ ಹಾಸಿಗೆ ಮಾಡಿ, ಹೂವಿನ ಹೊದಿಕೆ ಹೊದಿಸಿ ನಮ್ಮ ಹುಡುಗಿಯನ್ನು ಬೆಳೆಸಿದ್ದೇವೆ. ನಮ್ಮ ಹುಡುಗಿಯನ್ನೂ ಹಾಗೇ ಜೋಪಾನವಾಗಿ ನೋಡಿಕೊಳ್ಳುವ ಮನೆಯವರಿದ್ದರೆ ಹೆಣ್ಣುಕೊಡುತ್ತೇವೆ' ಅಂದರು.

"ನೀವು ಮೂರು ಖಂಡಾಗ ಹೂ ಹಾಸಿದರೆ ನಾವು ಆರು ಖಂಡುಗ ಹಾಸುತ್ತೇವೆ' ಅಂದರು

ಹುಡುಗನ ಕಡೆಯವರು. ಅಲ್ಲೇ ಮದುವೆ ನಿಶ್ಚಯ ಮಾಡಿಕೊಂಡರು.

ಮದುವೆವೆ ಊರೆಲ್ಲ ಸಿಂಗಾರವಾಯಿತು. ಗಾಳಿದೇವರು ಬೀದಿಗಳನ್ನೆಲ್ಲ ಗುಡಿಸಿದ. ಮಳೆ ದೇವರು ನೀರು ಚಿಮುಕಿಸಿದ. ಆಕಾಶದಗಲ ಚಪ್ಪರ ಹಾಕಿ ಭೂಮಿ ಅಗಲದ ಹಸೆಮಣೆ ಮಾಡಿದರು. ಮದುವೆ ವೈಭವದಿಂದ ನಡೆಯಿತು. ರಾಜಕುಮಾರಿ ಗಂಡನ ಅರಮನೆಗೆ ಬಂದಳು.

ಗಂಡ ಹೆಂಡತಿ ಸುಖವಾಗಿದ್ದರು. ಆರು ಖಂಡುಗ ಹೂವಿನ ಹಾಸಿಗೆ ಆರು ಖಂಡುಗ ಹೂವಿನ ಹೊದಿಕೆ ಹೊದ್ದು ಸುಖವಾಗಿ ಕಾಲ ಕಳೆದರು.

ಹೀಗೆ ಎಲ್ಲಾ ಚೆನ್ನಾಗಿ ನಡೆಯುತ್ತಿದ್ದಾಗ ವಿಧಿ ದೇವಿ ರಾಜಕುಮಾರಿಯ ಕನಸಿನಲ್ಲಿ ಬಂದಳು. 'ನಿನ್ನ ಹತ್ತಿರ ಶ್ರೀಮಂತಿಕೆ ಇದೆ. ಯಾರ ಹತ್ತಿರವೂ ಅಷ್ಟು ಸಂಪತ್ತು ಇಲ್ಲ. ಹೊಟ್ಟು ಜೊಳ್ಳು ತಿನ್ನುವವರು ಯಾರು? ಅನ್ನುತ್ತ ಮೆಲ್ಲಗೆ ಹೂವನ್ನೆಲ್ಲ ತೆಗೆದುಕೊಂಡು ಹಸಿರು ಮುಳ್ಳಿನ ಹಾಸುಗೆ ಹಾಸಿದಳು. ಅಲ್ಲಿಗೆ ಹೂವಿನ ಮೇಲೆ ಮಲಗುತ್ತಿದ್ದ ರಾಜಕುಮಾರಿ ಈಗ ಮುಳ್ಳಿನ ಮೇಲೆ ಮಲಗಬೇಕಾಯಿತು. ದಿನವೂ ರಾತ್ರಿ ವಿಧಿಯಮ್ಮ ಬಂದು ಹಾಸಿಗೆಯ ಹೂವನ್ನೆಲ್ಲ ತೆಗೆದು ಮುಳ್ಳುಹಾಸಿ ಮಾಯವಾಗುತ್ತಿದ್ದಳು. ರಾಜಕುಮಾರಿಯನ್ನು ಬಿಟ್ಟರೆ ಬೇರೆ ಯಾರ ಕಣ್ಣಿಗೂ ಕಾಣುತ್ತಿರಲಿಲ್ಲ. ರಾಜಕುಮಾರಿ ನವೆದು ನವೆದು ಕಿರು ಬೆರಳ ಗಾತ್ರಕ್ಕೆ ಸವೆದು ಹೋದಳು. ವಿಧಿಯಮ್ಮ ಬಂದು ಹೋಗುವುದನ್ನಾಗಲೀ ಮುಳ್ಳಿನ ಹಾಸುಗೆ ಹಾಸುವುದನ್ನಾಗಲೀ ಯಾರಿಗೂ ಹೇಳಲಿಲ್ಲ. 'ನಿನ್ನ ಹಣೆಬರಹ ಹೀಗಿದೆ. ನನಗೇನಾಗುತ್ತಿದೆ ಅನ್ನುವುದು ಯಾರಿಗೂ ಅರ್ಥ ಆಗಲ್ಲ' ಅಂದುಕೊಳ್ಳುತ್ತ ದಿನಾಲೂ ಸೊರಗಿದಳು.

ಹೆಂಡತಿ ಯಾಕೆ ಹೀಗೆ ಸೊರಗುತ್ತಿದ್ದಾಳೆ ಎಂದು ಗಂಡ ಆಶ್ಚರ್ಯಪಟ್ಟ ಚೆನ್ನಾಗಿ ಉಣ್ಣುತ್ತೀ ತಿನ್ನುತ್ತೀ ಅಪ್ಪನ ಮನೆಯಲ್ಲಿ ನಿನ್ನ ನೋಡಿಕೊಳ್ಳುತಿದ್ದಕ್ಕಿಂತ ಚೆನ್ನಾಗಿ ನೋಡಿಕೊಳ್ಳತ್ತಾ ಇದ್ದೇವೆ. ಆದರೂ ಸೊರಗುತಾ ಇದೀಯ ಸೊರಗಿ ಹಂಚೀ ಕಡ್ಡಿ ಆಗಿದೀಯ ಯಾಕೆ ಏನು ವಿಷಯ? ಅಂತ ಕೇಳಿದ ಮಾವ, ಅತ್ತೆ, ಕೆಲಸದ ಹೆಣ್ಣಾಳು ಎಲ್ಲರೂ ಅದೇ ಪ್ರಶ್ನೆ ಕೇಳಿದರು. ವಿಧಿಯಮ್ಮನೇ ಸ್ವತಃ ಇಂಥ ಕಷ್ಟ ಕೊಡುತ್ತಿರುವಾಗ ಮನುಷ್ಯರಿಗೆ ಹೇಳಿ ಏನು ಪ್ರಯೋಜನ? 'ಅಗ್ನಿ ಪ್ರವೇಶ ಮಾಡುವುದೇ ಸರಿ' ಅಂದುಕೊಂಡಳು. ಒಂದು ಗಾಡಿ ಸೌದೆ ತರಿಸಿ ಬೆಂಕಿ ಹಾಕಿ ಅನ್ನುತ್ತ ಒತ್ತಾಯ ಮಾಡಿದಳು.

ಹಟ ಹಿಡಿದಳು. ಅವರು ತಾನೇ ಏನು ಮಾಡತ್ತಾರೆ? ಕೊನೆಗೂ ಅವಳು ಹೇಳಿದ ಹಾಗೇ ಮಾಡಿದರು. ಹೊಸ ಸೀರೆ ಉಡಿಸಿದರು. ಕೆನ್ನೆಗೆ ಅರಿಶಿಣ ಕುಂಕುಮ ಬಳಿದರು. ಗಂಧದ ಮರದ ಕಟ್ಟಿಗೆಗಳನ್ನು ಒಟ್ಟಿ ಅವಳನ್ನು ಮಧ್ಯದಲ್ಲಿ ಕೂರಿಸಿ ಬೆಂಕಿ ಹಚ್ಚಿದರು. ಆಗ ಒಂದು ಅದ್ಭುತ ನಡೆಯಿತು. ದೊಡ್ಡಗಾಳಿ ಎದ್ದು ಅವಳನ್ನೂ ಉರಿಯುವ ಬೆಂಕಿಯಿಂದ ಯಾರಿಗೂ ಕಾಣದ

ಹಾಗೆ ಎತ್ತಿಕೊಂಡು ಹೋಗಿ ಕಾಡಿನಲ್ಲಿ ಹಾಕಿತು.

'ಅಯ್ಯೋ ದೇವರೇ, ಬೆಂಕಿಯಲ್ಲಿ ಬಿದ್ದು ಸಾಯಬೇಕು ಅಂದುಕೊಂಡೆ, ಆಗಲಿಲ್ಲಾ' ಅನ್ನುತ್ತ ಅವಳು ದುಃಖಪಟ್ಟಳು.

ಗಾಳಿ ತಗ್ಗಿದ ಮೇಲೆ ಸುತ್ತಲೂ ನೋಡಿದಳು. ಕಾಡಿನಲ್ಲಿದ್ದಳು ಹತ್ತಿರದಲ್ಲೇ ಒಂದು ಗುಹೆ ಇತ್ತು. 'ಹುಲಿಯೋ ಸಿಂಹವೋ ತಿಂದುಬಿಡಲಿ ಹಾಗಾದರೂ ಸಾಯತೇನೆ' ಅಂದುಕೊಂಡಳು. ಗುಹೆಯೊಳಕ್ಕೆ ಹೋದಳು. ಅಲ್ಲಿ ಹುಲಿಯಾಗಲೀ ಸಿಂಹವಾಗಲೀ ಇರಲಿಲ್ಲ. ಮೂರು ದೊಡ್ಡ ರಾಶಿ ಜೊಳ್ಳು, ಹೊಟ್ಟು ಇದ್ದವು. ನೆಲದ ಮೇಲೆ ಒರಳು ಒನಕೆ ಇದ್ದವು ವಿಧಿಯಮ್ಮ ಕನಸಿನಲ್ಲಿ ಒಂದು 'ಜೊಳ್ಳು ಹೊಟ್ಟು ಯಾರು ತಿನ್ನುತ್ತಾರೆ?' ಅಂತ ಕೇಳಿದ್ದು ಜ್ಞಾಪಕಕ್ಕೆ ಬಂದು. ಇದಕ್ಕೆ ಹಾಗೆ ಹೇಳಿದ್ದಳೇನೋ. ಅಂದುಕೊಂಡಳು. ಏನು ಮಾಡಬೇಕು ಅವಳು? ದಿನಾ ಜೊಳ್ಳು ಹೊಟ್ಟು ಕುಟ್ಟಿ ಕುಟ್ಟಿ ಒಂದು ಥರಾ ಹಿಟ್ಟು ಮಾಡಿ ಅದನ್ನೇ ತಿಂದು ಬದುಕಿದಳು. ನಾಲ್ಕು ವರ್ಷ ಕಳೆಯಿತು ಹೊಟ್ಟಿನ ರಾಶಿ ಕರಗಿತು.

'ಮನುಷ್ಯರ ಮುಖ ನೋಡಿ ಮೂರೋ ನಾಲ್ಕೋ ವರ್ಷ ಆದವು ಹೊರಗೆ ಹೋಗಿ ನೋಡಿಯಾದರೂ ನೋಡುತೇನೆ' ಅಂದುಕೊಂಡಳು ಗುಹೆಯಿಂದ ಆಚೆಗೆ ಬಂದಳು. ಬೆಚ್ಚಹತ್ತಿದಳು. ಕೆಳಗೆ ಒಂದಷ್ಟು ಜನ ಮರ ಕಡಿಯುತ್ತಿದ್ದರು. ಇವರ ಹಿಂದೆಯೇ ಹೋದರೆ ಯಾವುದಾದರೂ ಊರು ಸಿಕ್ಕಿತು' ಅಂದುಕೊಂಡಳು ಕೆಳಗಿಳಿದಳು. ಮರ ಕಡಿಯುವವರು ಸೌದೆ ಹೊರೆ ಕಟ್ಟಿಕೊಂಡು ಹತ್ತಿರದಲ್ಲೇ ಇದ್ದ ಬೆಂಗಳೂರಿನಂಥ ಪಟ್ಟಣದ ಕಡೆ ಹೆಜ್ಜೆ ಹಾಕಿದರು. ಅವರು ಮುಂದೆ ನಡೆದರು. ಅವರಿಗೆ ಕಾಣದ ಹಾಗೆ ಇವಳು ಅವರ ಹಿಂದೆ ಹೆಜ್ಜೆ ಹಾಕಿದಳು.

ಅಷ್ಟು ಹೊತ್ತಿಗೆ ಸೂರ್ಯಮುಳುಗಿದ ಅವರು ಅಲ್ಲೆ ಮರದ ಕೆಳಗೆ ಮಲಗಿದರು. ಇವರು ಪೊದೆಯ ಹಿಂದೆ ಬಚ್ಚಿಟ್ಟುಕೊಂಡಳು. ಆಗ ಅಲ್ಲಿಗೊಂದು ಹುಲಿ ಬಂದು. 'ಹುಲಿಯಾದರೂ ನನ್ನ ತಿನ್ನಲಿ' ಅಂದುಕೊಂಡು ಅಲ್ಲಾಡದೆ ಹಾಗೆ ಹೊರಟು ಹೋಯಿತು. 'ಅಯ್ಯೋ ಹುಲಿಗೂ ಬೇಡವಾದೆನೇ' ಅಂತ ಜೋರಾಗಿ ನರಳಿದಳು. ಮರ ಕಡಿಯುವವರು ಆ ಮಾತು ಕೇಳಿಸಿಕೊಂಡರು.

ಎದ್ದು ಸುತ್ತಲೂ ನೋಡಿದರು. ಅವಳು ಮಲಗಿದ್ದ ಕಡೆಯಿಂದ ಹುಲಿ ಹೋಗುತ್ತಿತ್ತು. ಅವರಿಗೆ ಆಶ್ಚರ್ಯ ಭಯ ಎಲ್ಲಾ ಆಯಿತು. ಮಾತೇ ಹೊರಡಲಿಲ್ಲ. ಅವಳ ಹತ್ತಿರಕ್ಕೆ ಬಂದರು. 'ನೀನು ಮಹಾ ಪುಣ್ಯವಂತೆ ಅದಕ್ಕೇ ಹುಲಿ ಹೊರಟು ಹೋಯಿತು. ನಿನ್ನಿಂದ ನಮ್ಮ ಪ್ರಾಣವೂ ಉಳಿಯಿತು. ಯಾಕೆ ಅಳತಾ ಇದೀಯ? ಏನು ಕಷ್ಟ ಅಂತ ವಿಚಾರಿಸಿದರು.

'ನನಗೇನೂ ಕಷ್ಟ ಇಲ್ಲ. ನನ್ನ ಯಾರದಾದರೂ ಮನೆಗೆ ಸೇರಿಸಿ. ಅವರ ಮನೆಯಲ್ಲಿ ಕೆಲಸ

ಮಾಡಿಕೊಂಡಿರತೇನೆ ಒಂದು ಹಿಡಿ ಅನ್ನ ಮೈ ಮುಚ್ಚುವುದಕ್ಕೆ ಒಂದಿಷ್ಟು ಬಟ್ಟೆ ಕೊಟ್ಟರೆ ಸಾಕು. ಇಷ್ಟು ಮಾಡಿ ನಿಮಗೆ ಪುಣ್ಯ ಬರತದೆ' ಅಂದಳು. ಅವರು ಸರಿ ಅನ್ನುತ್ತ ಅವಳನ್ನ ಜೊತೆಗೆ ಕರೆದುಕೊಂಡು ಹೊರಟರು.

ಹತ್ತಿರದಲ್ಲೇ ಬೆಂಗಳೂರಿನಂಥ ದೊಡ್ಡ ಊರು. ಅಲ್ಲೊಂದು ದೊಡ್ಡ ಮನೆ. ಅಲ್ಲಿಗೆ ಅವರು ಯಾವಾಗಲೂ ಸೌದೆ ಹಾಕುತ್ತಿದ್ದರು. ಮನೆಯ ಯಜಮಾನಿಯನ್ನೂ ಕಂಡು ಈ ಹೆಂಗಸನ್ನ ಕೆಲಸಕ್ಕೆ ಇಟ್ಟುಕೊಳ್ಳಿ ಪಾಪ ಬಡವಿ ಬದುಕಿಕೊಳ್ಳುತ್ತಾಳೆ ಅಂದರು. ಯಜಮಾನಿ ಸರಿ ಅಂದು ಅವಳನ್ನ ಕೆಲಸಕ್ಕೆ ಇಟ್ಟುಕೊಂಡಳು. ಸೌದೆ ಕಡಿಯುವವರು ಹೊರಟು ಹೋದರು. ಇವಳು ಆ ಮನೆಯಲ್ಲಿ ಹೇಳಿದ ಕೆಲಸ ಮಾಡಿಕೊಂಡು ಇದ್ದಳು.

ಒಂದು ದಿನ ಯಜಮಾನಿಯ ಚಿಕ್ಕ ಮಗ ಹಟಮಾಡುತ್ತ ಅಳತಾ ಇದ್ದ 'ಇವನನ್ನ ಕರಕೊಂಡು ಹೋಗು. ಅರಮನೆ ತೋರಿಸಿಕೊಂಡು ಸಮಾಧಾನ ಮಾಡಿಸಿಕೊಂಡು ಬಾ' ಅಂದಳು ಯಜಮಾನಿ. ಇವಳು ಮಗುವನ್ನು ಕರಕೊಂಡು ಹೋಗಿ ಅದು ಇದು ತೋರಿಸಿ ಸಮಾಧಾನ ಮಾಡುತ್ತಿದ್ದಾಗ ಒಂದು ನವಿಲು ಬಂದು ಮಗುವಿನ ಕುತ್ತಿಗೆಯಲ್ಲಿದ್ದ ಸರ ಎತ್ತಿಕೊಂಡು ನುಂಗಿಬಿಟ್ಟಿತು. ಇವಳು ಮನೆಗೆ ಓಡೋಡಿ ಬಂದು ನಡೆದದ್ದು ಹೇಳಿದಳು. ಯಜಮಾನಿ ಅವಳ ಮಾತು ನಂಬಲಿಲ್ಲ."[೬]

ಎ.ಕೆ. ರಾಮಾನುಜನ್‌ರು ಹೆಣ್ಣಿನ ಸ್ಥಿತಿಗತಿಯನ್ನು ಮತ್ತು ಕಥಾನಾಯಕಿಯಾಗಿ ಈ ಪ್ರಬಂಧದಲ್ಲಿ ಕಂಡುಬರುತ್ತಾರೆ. (ಒಂದು ಕಥೆ, ಒಂದು ಹಾಡು.) "ಒಬ್ಬ ಹೆಂಗಸಿದ್ದಳು. ಅವಳಿಗೆ ಒಂದು ಕಥೆ ಗೊತ್ತಿತ್ತು. ಒಂದು ಹಾಡು ಗೊತ್ತಿತ್ತು. ಕಥೆಯನ್ನೂ ಯಾರಿಗೂ ಹೇಳದೇ ಹಾಡನ್ನೂ ಯಾರಿಗೂ ಕೇಳಿಸದೇ ತನ್ನೊಳಗೇ ಬಚ್ಚಿಟ್ಟುಕೊಂಡಿದ್ದಳು.

ಕಥೆ, ಹಾಡು ಎರಡಕ್ಕೂ ಬಿಡುಗಡೆ ಬೇಕಾಗಿತ್ತು. ಒಂದು ದಿನ ಅಳಬಾಯಿ ತೆರೆದುಕೊಂಡೇ ನಿದ್ದೆ ಹೋಗಿದ್ದಾಗ ಕಥೆ ಹೊರಕ್ಕೆ ಹಾರಿತು. ಚಪ್ಪಲಿಯ ರೂಪ ತಳೆದು ಮನೆಯ ಹೊರಗೆ ಹೋಗಿ ಕೂತಿತು. ಹಾಡು ಹೊರಕ್ಕೆ ಹಾರಿತು. ಗಂಡಸಿನ ಅಂಗಿಯ ರೂಪ ತಾಳಿ ಗೂಟಕ್ಕೆ ನೇತಾಡಿಕೊಂಡಿತು. ಅವಳ ಗಂಡ ಮನೆಗೆ ಬಂದ. ಚಪ್ಪಲಿ, ಅಂಗಿ ನೋಡಿದ 'ಯಾರು ಬಂದಿದ್ದಾರೆ?' ಅಂತ ಕೇಳಿದ.

ಯಾರು ಇಲ್ಲ" ಅಂದಳು

'ಈ ಅಂಗಿ, ಈ ಚಪ್ಪಲಿ ಯಾರದು?

'ನನಗೆ ಗೊತ್ತಿಲ್ಲ' ಅಂದಳು ಅವನಿಗೆ ಸಮಾಧಾನವಾಗಲಿಲ್ಲ.

ಸಂಶಯ ಹುಟ್ಟಿತು. ಸಿಟ್ಟುಮಾಡಿಕೊಂಡ, ಜಗಳವಾಯಿತು.

ಗಂಡನಿಗೆ ಕೋಪ ಬಂದು ಕಂಬಳಿ ಎತ್ತಿಕೊಂಡು ಹನುಮಂತನ ದೇವಸ್ಥಾನಕ್ಕೆ ಹೋಗಿ ಮಲಗಿಕೊಂಡ

ಹೆಂಡತಿಗೆ ಏನಾಗುತ್ತಿದೆ ತಿಳಿಯಲಿಲ್ಲ. ಮನೆಯಲ್ಲಿ ಒಬ್ಬಳೇ ಮಲಗಿದಳು.

'ಯಾರದು ಈ ಚಪ್ಪಲಿ, ಈ ಅಂಗಿ?' ಮತ್ತೆ ಮತ್ತೆ ಕೇಳಿಕೊಂಡಳು

ಯೋಚನೆ ಮಾಡಿದಳು. ಏನೂ ಹೊಳೆಯಲಿಲ್ಲ. ತಲೆಕೆಟ್ಟು ಹೋಯಿತು. ದೀಪ ಆರಿಸಿ ಮಲಗಿದಳು.

ರಾತ್ರಿಯ ಹೊತ್ತು ಎಲ್ಲರ ಮನೆಯ ಆರಿಸಿದ ದೀಪಗಳೂ ಹನುಮಂತನ ದೇವಸ್ಥಾನಕ್ಕೆ ಬಂದು, ಮಾತುಕತೆ ಆಡುತ್ತ ರಾತ್ರಿ ಕಳೆಯುತ್ತಿದ್ದವು. ಅವತ್ತು ರಾತ್ರಿ ಎಲ್ಲರ ಮನೆಯ ಜ್ಯೋತಿಗಳೂ ಬಂದಿದ್ದವು. ಒಂದು ಮನೆಯದು ಮಾತ್ರ ನೇರ ತಡವಾಗಿ ಬಂದಿತು. ಮಿಕ್ಕ ಜ್ಯೋತಿಗಳೆಲ್ಲ. 'ಯಾಕೆ ಇಷ್ಟು ತಡವಾಯಿತು?' ಎಂದು ಅದನ್ನು ಕೇಳಿದವು.

'ನಮ್ಮ ಮನೆಯಲ್ಲಿ ಗಂಡ ಹೆಂಡತಿ ರಾತ್ರಿ ಬಹಳ ಹೊತ್ತಿನವರೆಗೂ ಜಗಳವಾಡುತ್ತಿದ್ದರು' ಅಂದಿತು ತಡವಾಗಿ ಬಂದ ಜ್ಯೋತಿ

ಯಾಕೆ ಜಗಳವಾಡಿದರು?'

ಗಂಡ ಮನೆಯಲ್ಲಿಲ್ಲದಿದ್ದಾಗ ಒಂದು ಜೊತೆ ಚಪ್ಪಲಿ ಅಂಗಳದಲ್ಲಿ ಬಂದು ಕೂತಿತ್ತು. ಒಂದು ಅಂಗಿ ಗೂಟಕ್ಕೆ ಬಂದು ನೇತಾಡಿತು. 'ಯಾರದು ಇವು' ಅಂತ ಗಂಡ ಕೇಳಿದ ಅವಳಿಗೆ ಗೊತ್ತಿರಲಿಲ್ಲ ಜಗಳವಾಡಿದರು?

'ಚಪ್ಪಲಿ ಅಂಗಿ, ಎಲ್ಲಿಂದ ಬಂದವು?'

ಮನೆಯ ಯಜಮಾನಿಗೆ ಒಂದು ಕಥೆ ಗೊತ್ತು. ಒಂದು ಹಾಡುಗೊತ್ತು. ಅವಳು ಯಾರಿಗೂ ಆ ಕಥೆ ಹೇಳಿಲ್ಲ. ಯಾರಿಗೂ ಆ ಹಾಡು ಕೇಳಿಸಿಲ್ಲ. ಕಥೆಗೂ ಹಾಡಿಗೂ ಅವಳ ಒಳಗೇ ಇದ್ದು ಉಸಿರು ಕಟ್ಟಿತು. ಅವು ಇವತ್ತು ಹೊರಕ್ಕೆ ಬಂದು ಚಪ್ಪಲಿ ಅಂಗಿಯಾಗಿ ಕೂತುಕೊಂಡವು. ಅವಳ ಮೇಲೆ ಸೇಡು ತೀರಿಸಿಕೊಂಡವು. ಪಾಪ ಅವಳಿಗೆ ಗೊತ್ತೇ ಇಲ್ಲ'.

ಗುಡಿಯಲ್ಲಿ ಕಂಬಳಿ ಹೊದ್ದು ಮಲಗಿದ್ದ ಗಂಡ ಈ ಮಾತೆಲ್ಲ ಕೇಳಿಸಿಕೊಂಡ ಅವನ ಅನುಮಾನ ಬಗೆಹರಿಯಿತು. ಮನೆಗೆ ವಾಪಸ್ಸು ಹೋದ ಹೆಂಡತಿಯನ್ನು ಕಥೆ ಮತ್ತೆ ಹಾಡಿನ ಬಗ್ಗೆ ಕೇಳಿದ. ಅವಳಿಗೆ ಎರಡೂ ಮರೆತು ಹೋಗಿತ್ತು. 'ಯಾವ ಕಥೆ ಯಾವ ಹಾಡು?'[೭] ವರ್ಣ ರಂಜಿತ ಸನ್ನಿವೇಶಗಳು ಹೇರಳವಾಗಿ ದೊರೆಯುತ್ತವೆ. ಹಾಗೂ ವಸ್ತು, ವಸ್ತುವಲ್ಲದ್ದು ಒಂದೇ ನಿರಂತರವಾಗಿ ತಮ್ಮ ಪ್ರಬಂಧದಲ್ಲಿ ಸರಳವಾಗಿ ರಂಜಿಸಿದ್ದಾರೆ.

ಹೀಗೆ ಎ.ಕೆ. ರಾಮಾನುಜನ್‌ರ ಇತರ ಕೃತಿಗಳಲ್ಲಿಯು ವಿನೋದ ಹಾಸ್ಯೋಕ್ತಿಗಳು ತುಂಬಿತುಳುಕುತ್ತವೆ. ಇವುಗಳಲ್ಲಿ ಇರುವ ಉದ್ದೇಶ ನಗಿಸುವುದರ ಜೊತೆಗೆ ಯಾವ ಸಂದರ್ಭದಲ್ಲಿಯೇ ಆಗಲಿ ಯಾರ ಮನಸ್ಸು ನೋವಾಗದಂತೆ ಜನರಲ್ಲಿರುವ ಓರೆಕೋರೆಗಳನ್ನು ನಗುನಗುತ್ತಲೇ ತಿದ್ದುವ ಕೆಲಸ ಎ.ಕೆ. ರಾಮಾನುಜನ್‌ರ ಈ ಸಜ್ಜನಿಕೆ. ನಗಿಸುವ ಜೀವನ ಕಲೆ ಅವನು ಹುಟ್ಟಿ ಬೆಳೆದ ಜೀವನ ಅನುಭವ ರಸಘಟ್ಟಗಳು ಅವುಗಳನ್ನು ಅವರು ನಮ್ಮ ಮುಂದೆ ಬಿಚ್ಚಿಡುವ ರೀತಿ ಸರಳ. ಅದ್ಭುತ ಎರಡು ಹೌದು;

ಇವರ ಈ ಹಾಸ್ಯ ಪ್ರವೃತ್ತಿಯನ್ನೂ ಹಾಗೂ ಇವರ ಸಾಹಿತ್ಯದ ಅಭಿರುಚಿ ಕೊಡುಗೆಗೆ ವೈ.ಎನ್.ಕೆ.ಯವರು 'ನಾನು ಅರುವತ್ತು ವರುಷ

ಬೆಳೆದರೂ ಬೆಳೆದಿದ್ದು

ಐದಡಿ ಆರಂಗುಲ'

ಎಂದು ರಾಮಾನುಜನ್ ಹೇಳಿಕೊಂಡರೂ ಅವರು ಸಾಹಿತ್ಯಕ್ಷೇತ್ರಕ್ಕೆ ಅಂತರಾಷ್ಟ್ರೀಯ ಖ್ಯಾತಿ ಗಳಿಸಿ ಬೆಳೆದದ್ದು ಮುಗಿಲೆತ್ತರ. ಕನ್ನಡದ ಹೊರಗಡೆ, ಭಾರತದ, ಇಂಗ್ಲೆಂಡ್ ಅಮೇರಿಕಾಗಳ ವಿದ್ವತ್ ಕ್ಷೇತ್ರದಲ್ಲಿ ಅವರದು ದೊಡ್ಡ ಹೆಸರು. 'ಟೈಮ್ಸ್ ಆಫ್ ಇಂಡಿಯಾ' ರಾಮಾನುಜನ್‌ರನ್ನು 'ಸಾಂಸ್ಕೃತಿಕ ನಾವಿಕ' ಎಂದು ಕರೆದು, ಮುಕ್ತಕಂಠದಿಂದ ಪ್ರಶಂಸಿಸಿದೆ. ಎರಡುಭಾಷೆ, ಎರಡುದೇಶ ಎರಡು ಸಂಸ್ಕೃತಿಯನ್ನು ಒಟ್ಟಿಗೆ ತರಲು ರಾಮಾನುಜನ್ ಬಳಸಿದ ಸಾಧನ ಎಂದರೆ ಭಾಷಾಂತರ."[೮] ಎಂದು ವಿವರಿಸಿದ್ದಾರೆ. ಹೀಗೆ ಹತ್ತು ಹಲವಾರು ಕ್ಷೇತ್ರಗಳಿಗೆ ಎ.ಕೆ. ರಾಮಾನುಜನ್‌ರು ವಿವರವಾದ ಹಾಗೂ ವಿಸ್ತಾರವನ್ನು ತಮ್ಮ ಪ್ರಬಂಧಗಳಲ್ಲಿ ನೀಡಿದ್ದಾರೆ.

ಎ.ಕೆ. ರಾಮಾನುಜನ್‌ರ ಜೀವನ ಅನುಭವದಿಂದ ವಿನೋದಗೊಳಿಸಿಕೊಟ್ಟರು ಆಗಿದ್ದರೆ. ಯು.ಆರ್. ಅನಂತಮೂರ್ತಿಯವರು "ರಾಮಾನುಜನ್ನರ ಇಡೀ ವ್ಯಕ್ತಿತ್ವಕ್ಕೆ ಈ ಘಟನೆ ನನಗೊಂದು ಇಣುಕುನೋಟ ಕೊಟ್ಟಿದೆ. ಏನನ್ನಾದರೂ ವಿನೋದದಲ್ಲಿ ಕಾಣಬಲ್ಲ ರಾಮಾನುಜನ್ ಆಳದಲ್ಲಿ ಕೆಲವು ಶ್ರದ್ಧೆಗಳನ್ನು ಇಟ್ಟುಕೊಂಡಿದ್ದರು. ಆದರೆ ಈ ಶ್ರದ್ಧೆ ಈ ಇಂದ್ರಿಯಗೋಚರ ಪ್ರಪಂಚಕ್ಕೆ ಉದ್ಭವವಾದದ್ದಾಗಿತ್ತು. ಸೌಮ್ಯವಾದ ವರ್ತನೆ ಮತ್ತು ನಿಷ್ಠುರವಾದ ಸತ್ಯ ದರ್ಶನಕ್ಕೆ ಬದ್ದರಾದ ರಾಮಾನುಜನ್ ಜೈನ, ಬೌದ್ಧ ಧರ್ಮದ ಮನೋಧರ್ಮಿಯಾಗಿ ನನಗೆ ಕಾಣುತ್ತಿದ್ದರು.[೯]" ಎಂದು ಹೇಳಿದ್ದಾರೆ. ತಮ್ಮ ಬರಹದಲ್ಲಿ ಎಲ್ಲ ರೀತಿಯ ಅಂದರೆ, ಸಾಮಾಜಿಕ ಧಾರ್ಮಿಕತೆಯ ಮೂಲವನ್ನು ತಿಳಿಸುತ್ತ ಹೋಗಿರುವುದು. ಪಿ.ಶ್ರೀನಿವಾಸರಾವ್‌ರವರು ಎ.ಕೆ. ರಾಮಾನುಜನ್‌ರ ಬದುಕಿನ ವೈಶಿಷ್ಟ್ಯವನ್ನು ಹಾಸ್ಯವಾಗಿ ವ್ಯಕ್ತಪಡಿಸಿದ್ದಾರೆ. "ತನ್ನನ್ನೇ ಮಾಡಿಕೊಳ್ಳುವ ವ್ಯಂಗ್ಯ ಅಥವಾ ಹಾಸ್ಯ, ಇವರ ಭೀರುಸನ, ಲಜ್ಜೆ, ಖಾಸಗೀತನ ಕೀಚಲು ಇವೆಲ್ಲಾ ತರುತ್ತಿದ್ದ

ಕೀಳರಿಮೆಯನ್ನೂ ಹಿಂದಿಕ್ಕುತ್ತಿತ್ತು. ಅಲ್ಲದೆ ಮಾತಿನ ಶೈಲಿ ಅವರಿಗೆ ಇನ್ನೂ ಕೆಲವು ರೀತಿಯಲ್ಲಿ ಸಹಾಯಕವಾಗಿತ್ತು. ಅವರ ಸ್ವ-ವ್ಯಂಗ್ಯ ವಾಣಿಯನ್ನು ಕೇಳಿದವರು, ಅವರನ್ನು ಇನ್ನಷ್ಟು ಹಗುರವಾಗಲ್ಲಿ, ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದರು. ರಾಮಾನುಜನ್ ಅವರ ಕೀಚಲು ದನಿಯ ಬಗ್ಗೆಯೇ ತಮಾಷೆ ಮಾತಾಡುತ್ತಿದ್ದರು."[೧೦] ಎಂದು ಹೇಳಿದ್ದಾರೆ.

ಈ ಮೇಲಿನ ವಿಚಾರಗಳನ್ನು ಪರಿಶೀಲಿಸಿದಾಗ ಎ.ಕೆ. ರಾಮಾನುಜನ್‌ರ ಹಾಸ್ಯದ ಸ್ವರೂಪ ಸರಿ. ಗುರಿಗಳು ವೇದ್ಯವಾಗುತ್ತವೆ. ಈ ಸರಳ ಹಾಸ್ಯದ ಹಿಂದಿರುವ ವ್ಯಂಗ್ಯ ವಿಡಂಬನೆಗಳು ಗೋಚರಿಸುತ್ತವೆ.

ಅಡಿ ಟಿಪ್ಪಣಿಗಳು

೧. ಎ.ಕೆ. ರಾಮಾನುಜನ್‌ರ ನೆನಪಿನ ಸಂಪುಟ., ಸಂ. ಟಿ.ಪಿ. ಅಶೋಕ, ಪುಟ.೩೮

೨ ಎ.ಕೆ. ರಾಮಾನುಜನ್‌ರ ನೆನಪಿನ ಸಂಪುಟ., ಸಂ. ಟಿ.ಪಿ. ಅಶೋಕ, ಪುಟ.೦೬

೩. ಎ.ಕೆ. ರಾಮಾನುಜನ್‌ರ ನೆನಪಿನ ಸಂಪುಟ., ಸಂ. ಟಿ.ಪಿ. ಅಶೋಕ, ಪುಟ.೧೦

೪. ಎ.ಕೆ. ರಾಮಾನುಜನ್‌ರ ಆಯ್ದ ಪ್ರಬಂಧಗಳು, ಅನುವಾದ ಓ.ಎಲ್. ನಾಗಭೂಷಣ ಸ್ವಾಮಿ., ಪುಟ.೧೫೯, ೧೬೦, ೧೬೧.

೫. ಎ.ಕೆ. ರಾಮಾನುಜನ್‌ರ ಆಯ್ದ ಪ್ರಬಂಧಗಳು, ಅನುವಾದ ಓ.ಎಲ್. ನಾಗಭೂಷಣ ಸ್ವಾಮಿ., ಪುಟ.೧೦೦, ೧೦೧, ೧೦೨.

೬. ಎ.ಕೆ. ರಾಮಾನುಜನ್‌ರ ಆಯ್ದ ಪ್ರಬಂಧಗಳು, ಅನುವಾದ ಓ.ಎಲ್. ನಾಗಭೂಷಣ ಸ್ವಾಮಿ., ಪುಟ.೧೮೨, ೧೮೩, ೧೮೪, ೧೮೫, ೧೮೬

೭ ಎ.ಕೆ. ರಾಮಾನುಜನ್‌ರ ಆಯ್ದ ಪ್ರಬಂಧಗಳು, ಅನುವಾದ ಓ.ಎಲ್. ನಾಗಭೂಷಣ ಸ್ವಾಮಿ., ಪುಟ.೧೯೫, ೧೯೬.

೮. ಎ.ಕೆ. ರಾಮಾನುಜನ್‌ರ ನೆನಪಿನ ಸಂಪುಟ., ಸಂ. ಟಿ.ಪಿ. ಅಶೋಕ, ಪುಟ.೦೮

೯. ಎ.ಕೆ. ರಾಮಾನುಜನ್‌ರ ನೆನಪಿನ ಸಂಪುಟ., ಸಂ. ಟಿ.ಪಿ. ಅಶೋಕ, ಪುಟ.೨೩

* * *

ಅಧ್ಯಾಯ ೭

"ಜಾನಪದ ಸಂಸ್ಕೃತಿ"

ಅಧ್ಯಾಯ ೭

"ಜಾನಪದ ಸಂಸ್ಕೃತಿ"

ಎ.ಕೆ. ರಾಮಾನುಜನ್ ಜಾನಪದ ಸಂಸ್ಕೃತಿಯನ್ನು ತಮ್ಮ ಪ್ರಬಂಧಗಳಿಗೆ ಮೂಲವಾಗಿ ಇಟ್ಟುಕೊಂಡು ಬರೆದಂತವುಗಳು ಆಗಿವೆ. ಹಾಗೂ ಒಗಟುಗಳು, ಗಾದೆಗಳು ಪೂರಕವಾಗಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ವಿಚಾರವನ್ನು ತಮ್ಮ ಪ್ರಬಂಧಗಳಲ್ಲಿ ವಿವರಿಸಿರುವುದು ಕಂಡುಬರುತ್ತದೆ. ಜಾನಪದ ವಿದ್ವಾಂಸರಾದ ಇವರು. ಜಾನಪದ ಸಂಸ್ಕೃತಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದು ತಿಳಿಯುತ್ತದೆ. ಅಂದರೆ, ಒಂದು ಗ್ರಾಮೀಣ ಸೊಗಡಿನಲ್ಲಿ ಹಾಡು, ಗಾದೆ, ಒಗಟು, ಪ್ರಾಚೀನ ಕಾಲದಿಂದಲೂ ನಡೆದುಬಂದರೂ ಸಹ ಈ ಕಾಲದಲ್ಲಿ ಎ.ಕೆ. ರಾಮಾನುಜನ್‌ರು ಅವುಗಳನ್ನು ಸರಳ ರೀತಿಯಲ್ಲಿ ವಿವರಿಸಿದ್ದಾರೆ. ಜಾನಪದ ಕ್ಷೇತ್ರ ರಾಮಾನುಜನ್‌ರಿಗೆ ತುಸು ಪ್ರಿಯವಾದುದ್ದು, ಗಾದೆಗಳ ಮೇಲೆ ಮತ್ತು ಒಗಟುಗಳ ಮೇಲೆ ಒಂದು ಸಣ್ಣ ಕೃತಿಯನ್ನು ಬರೆದಿದ್ದಾರೆ. ಈ ಕೃತಿ ಅತ್ಯಮೂಲ್ಯವಾದ ಮಾಹಿತಿಗಳು ಇದರಲ್ಲಿ ದೊರೆಯುತ್ತವೆ. ಸಾಕಷ್ಟು ವಿಷಯ ಸಂಗ್ರಹಮಾಡಿ ವಿಶ್ಲೇಷಣೆ ಮಾಡಿದ್ದಾರೆ. ಜಿ. ರಾಜಶೇಖರ್‌ರವರು "ರಾಮಾನುಜನ್‌ರ ಗದ್ಯ ಸುಲಭವಾದದ್ದು ನಿಖರತೆ ಭಾಷೆಯ ಮಿತವ್ಯಯ ಮತ್ತು ಅರ್ಥಸಂಪತ್ತು ಅವರ ಗದ್ಯದಲ್ಲಿ ಎದ್ದು ಕಾಣುವ ಗುಣಗಳು. ಅವರ ಪುಸ್ತಕ ವಿಮರ್ಶೆ, ಮುನ್ನುಡಿ, ಬೆನ್ನುಡಿ ಮತ್ತು ಇತರ ಬರಹಗಳಲ್ಲಿ ಪಾಂಡಿತ್ಯ ಮತ್ತು ಕವಿ ಸಂವೇದನೆಗಳು ಹದವಾಗಿ ಬೆರೆತಿವೆ. ಅವರ ದರ್ಶನ ಸಮಸ್ತವನ್ನು ಒಳಗೊಳ್ಳುವಂತಹದಾಗಿತ್ತು. ಅವರ ದೃಷ್ಠಿಕೋನ, ಉದಾರವಾದೀ ದೃಷ್ಟಿಕೋನ ಅವರ ಪ್ರತಿಪಾದನೆಗಳು ನಂಬಿಕೆಗೆ ಅರ್ಹವಾಗಿದ್ದವು. ಅವರ ಧ್ವನಿಗೆ ಹಲವು ಸ್ತರಗಳಿದ್ದವು. ಅವರ ಕೊನೆಯ ಪ್ರಕಟಣೆ, "Flok Taler from india" ಒಬ್ಬ ಹಳೆಯ ಗೆಳೆಯನ ಆಪ್ತ ಸಂಬೋಧನೆಯೊಂದಿಗೆ ಪ್ರಾರಂಭವಾಗುತ್ತದೆ. "ನನ್ನನ್ನೂ ಈ ಕತೆಗಳ ತೀರ ಇತ್ತೀಚೆಗಿನ ನಿರೂಪಕ ಮತ್ತು ನೀವು ತೀರ ಇತ್ತೀಚೆಗಿನ ಶ್ರೋತೃ ಎಂದು ಭಾವಿಸಿಕೊಳ್ಳಿ ಮತ್ತು ನೀವು ಕೂಡ

ಈ ಕತೆಗಳನ್ನು ಬೇರೆಯವರಿಗೆ ಹೇಳುವಿರಿ... ನಾವು ನೀವು ಜೊತೆಯಾಗಿ ಕತೆಯ ಅರ್ಥಗಳನ್ನೂ ಹುಟ್ಟುಹಾಕುತ್ತಿದ್ದೇವೆ.” ಅಲ್ಲಿಂದ ಮುಂದೆ ಅವರು ಜನಪದ ಕತೆಗಳು ಮತ್ತು ಲಿಖಿತ ಪಾಠಗಳ ಪರಂಪರೆ, ಪುರುಷ ಮತ್ತು ಸ್ತ್ರೀ ಪ್ರಧಾನ ಕತೆಗಳು. ದೇಶದ ಬೇರೆ ಬೇರೆ ಭಾಗಗಳಲ್ಲಿ ಕತೆಯ ಭಾಷೆ ಮತ್ತು ವಸ್ತುಗಳ ವೈವಿಧ್ಯಮಯ ವಿನ್ಯಾಸಗಳು ಇವುಗಳ ಪ್ರೌಢ ವಿಶ್ಲೇಷಣೆ ನಡೆಸುತ್ತಾರೆ.”[೧] ಎಂದು ರಾಮಾನುಜನ್ನರ ಬಗ್ಗೆ ಹೇಳಿದ್ದಾರೆ.

ಎ.ಕೆ. ರಾಮಾನುಜನ್‌ರು ಜಾತಿ, ವರ್ಗ, ಧಾರ್ಮಿಕ ಎಲ್ಲರಿಗೂ ಅರ್ಥವಾಗುವಂತೆ ತಮ್ಮ ಪ್ರಬಂಧದಲ್ಲಿ ಸರಳ ಭಾಷೆಯಲ್ಲಿ ವಿವರಿಸಿದ್ದಾರೆ. ಸ್ವತಃ ಇತರೆ “ಜಾನಪದವು ಸ್ವಚ್ಛಂದವಾದದ್ದು ಸಹಜವಾದದ್ದು ಅನ್ನುವ ರೊಮ್ಯಾಂಟಿಕ್ ಕಲ್ಪನೆಗೆ ವಿರುದ್ಧವಾಗಿ ಅದು ಅತ್ಯಂತ ರೂಪನಿಷ್ಠವಾದದ್ದು. ಅದು ತನ್ನ ರೂಪಗಳನ್ನು ಸ್ಪಷ್ಟವಾಗಿ ತೋರ್ಪಡಿಸಿಕೊಳ್ಳುತ್ತದೆ. ಆಚರಣೆಗಳ ಸಂದರ್ಭದಲ್ಲಿ ದೇವರು ಮೈ ಮೇಲೆ ಬರುವುದು, ಬಿಟ್ಟುಹೋಗುವುದು ನಿಗದಿಯಾಗಿರುವಂತೆ ಜಾನಪದ ಕಥೆಗಳ ಕೇಳುಗರು ಪಾತ್ರಗಳೊಡನೆ ಒಂದಾಗುವ, ದೂರವಾಗುವ ಕ್ರಿಯೆ ನಡೆಯುವಂಥ ಮೀಟು ಸ್ಥಾನಗಳಿರುತ್ತವೆ.’[೨] ಎಂದು ಹೇಳಿದ್ದಾರೆ. ಜಾನಪದವು ಸರಳರೀತಿಯಲ್ಲಿ ಸಹಜವಾಗಿ ಅರ್ಥವಾಗುತ್ತದೆ ಎಂದು ವಿವರಿಸುವುದು ತಿಳಿಯುತ್ತದೆ.

ಎ.ಕೆ. ರಾಮಾನುಜನ್‌ರು, “ಕನ್ನಡ ಜಾನಪದ ಎರಡು ವಲಯಗಳು” ಪ್ರಬಂಧದಲ್ಲಿ ಪ್ರಕಾರ ಮತ್ತು ವ್ಯವಸ್ಥೆ, ಕಥೆಗಳು ಮತ್ತು ಕಥೆಗಾರರು ಖಾಸಗಿ ಮತ್ತು ಸಾರ್ವಜನಿಕವಾಗಿ ಎರಡು ವಲಯಗಳ ಆಧಾರದ ಮೇಲೆ ವಿಂಗಡಿಸಿರುವುದು ತಿಳಿಯುತ್ತದೆ. ಹಾಗೂ ಇಲ್ಲಿ ಕಥೆಗಳು ಖಾಸಗಿಯಾಗಿ ಮತ್ತು ಕಥೆಗಾರರು ಸಾರ್ವಜನಿಕವಾಗಿ ಹೇಳುತ್ತ ಹೋಗುತ್ತಾರೆ. ಕಥೆಗಳ ಅರ್ಥ ವ್ಯತ್ಯಾಸವನ್ನು ತೋರ್ಪಡಿಸಿಕೊಂಡು ಹೋಗಿದ್ದಾರೆ ಉದಾಹರಣೆ: “ಮನೆಯಲ್ಲಿ ಅಜ್ಜಿ ಹೇಳಿದ ಮತ್ತು ಸಾರ್ವಜನಿಕವಾಗಿ ಗಾಯಕನೊಬ್ಬ ಪ್ರಸ್ತುತಪಡಿಸಿದ ಒಂದೇ ಮಾದರಿಯ ಕಥೆಯ ಎರಡು ಆವೃತ್ತಿಗಳು ಕೆಲವು ವರ್ಷಗಳ ಹಿಂದೆ ನನಗೆ ದೊರೆತವು ಈ ಕಥೆಯಲ್ಲಿ ಒಬ್ಬ ರಾಜನಿಗೆ ಐವರು (ಅಥವಾ ಏಳು ಜನ ನೂರಾ ಒಂದು ಜನ) ಹೆಂಡತಿಯರು ಇದ್ದು ಅವರು ಯಾರಿಗೂ ಮಕ್ಕಳಿರುವುದಿಲ್ಲ. ರಾಜ ಒಂದು ದಿನ ಅಪರಿಚಿತ ಹುಡುಗಿಯನ್ನು ಕಂಡು ಅವಳನ್ನು ಮದುವೆಯಾಗುತ್ತಾನೆ. ಅವಳಿಗೆ ಮಗುವಾಗುತ್ತದೆ. ಮನೆಯೊಳಗೆ ಅಜ್ಜಿ ಹೇಳಿದ ಕಥೆ ಹೀಗೆ ಶುರುವಾಗಿತ್ತು.

ಒಬ್ಬ ರಾಜ ಇದ್ದ. ಅವನಿಗೆ ಐದು ಜನ ಹೆಂಡತಿಯ. ತುಂಬಾ ಐಶ್ವರ್ಯ ಇತ್ತು. ಬಂಗಾರ ತಟ್ಟೇಲಿ ಊಟ ಮಾಡುತಾ ಬೆಳ್ಳಿ ಲೋಟದಲ್ಲಿ ನೀರು ಕುಡಿತಾ ಇದ್ದ. ಆದರೂ ಅವನಿಗೆ ಮಕ್ಕಳಿಲ್ಲಾ ಅನ್ನುವ ಕೊರಗು ಇತ್ತು.

ಇದನ್ನೇ ವೃತ್ತಿ ಗಾಯಕನೊಬ್ಬ ಹೇಳಿದಾಗ ಅಜ್ಜಿ ಅರ್ಧ ನಿಮಿಷದಲ್ಲಿ ಹೇಳಿದಷ್ಟನ್ನು ಹೇಳುವುದಕ್ಕೆ ಅವನಿಗೆ ಒಂದು ಗಂಟೆ ಅಥವಾ ಇನ್ನೂ ಹೆಚ್ಚು ಸಮಯ ಬೇಕಾಗುತ್ತದೆ. ಅವನು ಕೈಯಲ್ಲಿ ತಾಳ ಹಿಡಿದು ಪಕ್ಕದಲ್ಲಿ ಶಿಷ್ಯನೊಬ್ಬನನ್ನೂ ನಿಲ್ಲಿಸಿಕೊಂಡು ಶಿವನ ಪ್ರಾರ್ಥನೆ ಮಾಡಿ ಶಿವ (ಮತ್ತು ಪ್ರೇಕ್ಷಕರು) ತಾನು ಮಾಡಲಿರುವ ಕಥೆಯಲ್ಲಿ ತಪ್ಪುಗಳನ್ನು ಎಣಿಸಬಾರದೆಂದು ಪ್ರಾರ್ಥಿಸುತ್ತಾನೆ.

ಅರಿಯದವರು, ಕಲಿಯದವರು

ತಪ್ಪಿದ್ದರೆ ತಿದ್ದಿ ಒಪ್ಪಿಸಿಕೋ ದೇವಾ

ಸಾವಿರ ಶರಣಾರ್ಥಿ.

ಆಮೇಲೆ ಹೆಜ್ಜೆ ಹಾಕಿ ಕುಣಿಯುತ್ತಾನೆ. ಹಿರಿಯರ, ಗುರುಗಳ ಪ್ರಾರ್ಥನೆ ಮಾಡುತ್ತಾನೆ ಆಮೇಲೆ ಹಾಡುತ್ತಾನೆ.

ನಮ್ಮ ಕಣ್ಣೆದುರೀಗೆ ಇರುವುದು ಸುಂದರ ಪಟ್ಟಣವು

ಚಂದ್ರಾವತಿ ಎಂಬೋ ಹೆಸರೂ

ಯೇ ಗುಡುಗುಡು ಧೀದಯ್ಯಾ!

ತಾಳದ ಸದ್ದು, ಹಾಡುಗಾರಿಕೆ ನಿಲ್ಲುತ್ತದೆ. ಶಿಷ್ಯನತ್ತ ತಿರುಗುತ್ತಾನೆ. ಅವನ ಭುಜ ತಟ್ಟಿ ಗದ್ಯದಲ್ಲಿ ಸಂಭಾಷಣೆ ಶುರುಮಾಡುತ್ತಾನೆ.

'ಯೇ, ಮಗಾ ಕೇಳು'

'ಹೂಂ, ಹೇಳಾಪ್ಪ. ನನ್ನ ಗುರುವೇ'

'ಚಂದ್ರಾವತೀ ಚಂದ್ರವತೀ ಅಂಬೋ ಪಟ್ಟಣ'

'ಹೌದೂ ಸ್ವಾಮಿ'

'ನೋಡು ಚಂದ್ರವನೇ ಪಟ್ಟಣಾ ನೋಡು, ಮಗಾ'

'ಅಲ್ಲೇ ಓ ಅದೇನಾ ನನ್ನ ಗುರುವೇ?'

'ಕೂಟೆ ಕಲ್ಲಿನಲ್ಲಿ ಕಟ್ಟಿದ್ದು'.

'ಮುತ್ತಿನಾ ಅಲಂಕಾರಾ'

'ಕೋಟೆ ಹೆಂಗಿತ್ತು ಅಂತ ಹೆಂಗಪ್ಪಾ ಹೇಳಲೀ'.....

ಆ ಮೇಲೆ ಊರಿನ ಬೀದಿಗಳು, ಬೇರೆ ಬೇರೆ ಜಾತಿಗಳವರ ಕೇರಿಗಳು, ಅವರ ಶ್ರೀಮಂತಿಕೆ, ಚಿನ್ನ, ವಜ್ರಗಳನ್ನು ವರ್ಣನೆ ಮಾಡುತ್ತಾನೆ. ದೊರೆ ಚಟುವರಂಗರಾಯ ಇಲ್ಲಿ ನ್ಯಾಯವಾಗಿ

ಅಳತಾ ಐದು ಜನ ಹೆಂಡಂದಿರೂ ಕಣ್ಣೀರಲ್ಲಿ ಕೈ ತೊಳೆಯುತಾ ಇರತಾರೆ. ಒಂದು ಸಾರಿ ರಾಜ ದೂರ ಪ್ರಾಂತ್ಯಕ್ಕೆಲ್ಲ ಸಂಚಾರ ಹೋಗಿದ್ದ. ಅವನು, ಅವರನ ಪರಿವಾರದವರು. ಹೊರಟ ತಕ್ಷಣ ಶಿವ ಮುದಿ ಗುರುವಿನ ವೇಷದಲ್ಲಿ ಅರಮನೆ ಬಾಗಿಲಿಗೆ ಬಂದ, ಅವನ ವರ್ಣನೆಯ ಹಾಡು ಸುದೀರ್ಘವಾಗಿಬರುತ್ತದೆ ಇಲ್ಲ. ಅವನನ್ನು ಕಂಡು ರಾಣಿಯರಿಗೆ ಸಂತೋಷವಾಗಿತ್ತದೆ. ಬಂಗಾರದ ಕೊಡದಲ್ಲಿ ಪನ್ನೀರು ತಂದು ಅವನ ಪಾದ ತೊಳೆಯುತ್ತಾರೆ. ಧೂಪಾರತಿ, ದೀಪಾರತಿ ಮಾಡುತ್ತಾರೆ. ಪಟ್ಟಿಯಲ್ಲಿ ಒಳ್ಳೊಳ್ಳೆಯ ಊಟ ತಂದಾಗ ಮಾತ್ರ ಅವನು ಮುಖ ತಿರುಗಿಸಿಕೊಳ್ಳುತ್ತಾನೆ.

ಇಲ್ಲಾ ಇಲ್ಲಾ.

ಬಂಜೇರ ಕೈಯಲ್ಲಿ ನಾನು ಅನ್ನ. ಉಣ್ಣಲ್ಲ.

ಬಂಜೇರ ಕೈಯಲ್ಲಿ ನಾನು ಅನ್ನ ಉಣ್ಣಲ್ಲ.

ಇಲ್ಲಾ ಇಲ್ಲಾ.

ಅನ್ನುತ್ತಾ ರಾಜ್ಯದ ಐದು ಜನ ಸುಂದರವಾದ ರಾಣಿಯರು, ಮಕ್ಕಳಿಲ್ಲದೆ ದುಃಖಪಡುತ್ತಾ ಇದ್ದವರು, ತಂದ ಭಿಕ್ಷವನ್ನೂ ನಿರಾಕರಿಸಿ ಪಟ್ಟನೆ ಹೊರಟು ಬಿಡುತ್ತಾನೆ. ರಾಣಿಯರು ಅಂತಃಪುರಕ್ಕೆ ಬಂದು ತಮ್ಮ ಸಾಲು ಮಂಚಗಳ ಮೇಲೆ ಅಳುತ್ತಾ ಮಲಗಿಬಿಡುತ್ತಾರೆ. ರಾಜ ವಾಪಸ್ಸು ಬಂದಾಗ ಅವರು ಅಳುತ್ತಾ ಉಪವಾಸ ಮಲಗಿರುವುದು ಸಾಯಲು ಸಿದ್ಧರಾಗಿರುವುದು ಕಾಣುತ್ತಾನೆ. ಆಮೇಲೆ ಸಮಸ್ಯೆಗೆ ಪರಿಹಾರ ಹುಡುಕುತ್ತಾ ಹೊರಟು ಮುಂದೆ ರಾಣಿಯಾಗಲಿರುವ ಕಾಡಸಿದ್ದಮ್ಮನನ್ನೂ ದೇವಸ್ಥಾನವೊಂದರಲ್ಲಿ ಕಾಣುತ್ತಾನೆ. ಆಮೇಲೆ ಗಾಯಕರು ಅವಳ ಇಡೀ ಪೂರ್ವೇತಿಹಾಸ, ಅವಳ ಅಪ್ಪ ಅಮ್ಮಂದಿರ ಹೆಸರು, ರಾಜ್ಯ ಇತ್ಯಾದಿ ಎಲ್ಲದರ ಬಗ್ಗೆ ಹಾಡುತ್ತಾರೆ.

ಕಥೆಯ ಎರಡು ರೂಪಗಳಲ್ಲಿರುವ ವ್ಯತ್ಯಾಸಗಳನ್ನು ಸೂಚಿಸಲು ಇದಿಷ್ಟು ವಿವರಗಳು ಸಾಕು ಅನಿಸುತ್ತದೆ. ಒಂದು ವ್ಯತ್ಯಾಸ ಇದು–ಅಜ್ಜಿಯ ಕಥೆಯಲ್ಲಿ ಯಾವ ಪಾತ್ರಕ್ಕೂ ಯಾವ ಊರಿಗೂ ಹೆಸರಿಲ್ಲ. ವೃತ್ತಿಗಾಯಕ ಹಾಡುವ ಕಥೆಯಲ್ಲಿ ಎಲ್ಲ ಪಾತ್ರಗಳಿಗೂ, ಊರುಗಳಿಗೂ, ಕೊನೆಗೆ ಹೆರಿಗೆ ಮಾಡಿಸಲು ಬರುವ ಸೂಲಗಿತ್ತಿಗೂ ಹೆಸರುಗಳಿವೆ; ಅಸೂಯೆ ಹುಟ್ಟಿ ದುಷ್ಟರಾಗುವ ಐದು ಜನ ರಾಣಿಯರಿಗೆ ಮಾತ್ರ ಹೆಸರಿಲ್ಲ. ಎಲ್ಲ ಹೆಸರುಗಳ ನಡುವೆ ಅವರು ಮಾತ್ರ ರೂಪ ರಹಿತ ಅನಾಮಧೇಯರಾಗಿ ತಿಳಿಯುತ್ತಾರೆ."[೩] ಹೀಗೆ ರಾಮಾನುಜನ್‌ರು ಕಥೆಯಲ್ಲಿರುವ ವ್ಯತ್ಯಾಸವನ್ನು ವಿಚಾರ, ನೈತಿಕತೆ, ಸಂಸ್ಕೃತಿ ಸಂಪ್ರದಾಯ ಪೂರಕವಾಗಿ ಇರುವುದು ತಿಳಿಯುತ್ತಾರೆ. ಹಾಗೂ– ವೃತ್ತಿಗಾಯಕರು ಹೇಳುವ ಪರಿಣಿತಿ ಪಡೆದಿರುತ್ತಾರೆ. ಮತ್ತು ವೃತ್ತಿಗಾಯಕರು ಧಾರ್ಮಿಕ ಮತ್ತು ಲೌಕಿಕ ಕಥೆಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಆಯ್ದುಕೊಳ್ಳುತ್ತಾರೆ. ಆದರೆ ಮನೆಯ ಕಥೆಗಳು

ಮಕ್ಕಳೇ ನೇರವಾದ ಕೇಳುಗರು ಅನ್ನುವುದು ಸ್ಪಷ್ಟವಾಗಿಯೇ ಇದೆ. ವೃತ್ತಿ ಗಾಯಕರಿಗೆ ವಿರುದ್ಧವಾಗಿ ಮನೆಕಥೆಗಳು ನಡೆಯುತ್ತವೆ ಎಂದು ತಿಳಿಯಬಹುದಾಗಿದೆ. “ಈ ಎರಡು ಪ್ರಕಾರಗಳ ನಡುವಿನ ವೈದೃಶ್ಯಗಳನ್ನೂ ಹೀಗೆ ಸಂಕ್ಷೇಪವಾಗಿ ಹೇಳಬಹುದು. ಈ ಪ್ರಕಾರಗಳಿಗೆ ಇರುವ ಎರಡು ಮುಖ್ಯ ಹಿನ್ನೆಲೆಯ ಧಾರ್ಮಿಕ ಅಥವಾ ಲೌಕಿಕವಾಗಿರಬಹುದು. ಮನೆಯ ಕಥಾ ಪ್ರಕಾರಗಳ ಕಥೆಗಾರರು ಸಾಮಾನ್ಯವಾಗಿ ಹೆಂಗಸರೇ ಆಗಿರುತ್ತಾರೆ. ಕಥೆಗಳು ಲೌಕಿಕವಾಗಿರುತ್ತವೆ. ಮಕ್ಕಳು ಶ್ರೋತೃಗಳಾಗಿರುತ್ತಾರೆ; ಅಥವಾ ವ್ರತ ಕಥೆಗಳಂಥವಕ್ಕೆ ಮನೆಯ ಹಿನ್ನೆಲೆಯೇ ಇದ್ದರೂ ಇಡೀ ಕುಟುಂಬದವರು ಕೆಲವೊಮ್ಮೆ ನೆರೆಯವರು ಕೂಡ ಶ್ರೋತೃಗಳಾಗುತ್ತಾರೆ. ಹೆಂಗಸರು ‘ಮಾಸ್ತಿ’ ಕಥೆಗಳಂಥ ಕಥನ ಗೀತೆಗಳನ್ನೂ ಹಾಡುತ್ತಾರೆ; ಪೌರಾಣಿಕ ಘಟನೆಗಳನ್ನು ಹೇಳುವ ಕಥನ ಗೀತೆಗಳನ್ನು ಸ್ನಾನಮಾಡುವಾಗ, ಅಡುಗೆಮಾಡುವಾಗ ತಮ್ಮಷ್ಟಕ್ಕೇ, ಮದುವೆಯ ಸಂದರ್ಭಗಳಲ್ಲಿ ಅಥವಾ ಹೆಂಗಸರೇ ಇರುವ ಗುಂಪುಗಳಲ್ಲಿ ಹಾಡಿಕೊಳ್ಳುತ್ತಾರೆ. ಈ ಎರಡನೆಯ ಬಗೆಯ ಕಥೆ ಮತ್ತು ಕಥನ ಗೀತೆಗಳು ಶೈಲಿ, ಛಂದಸ್ಸು, ಸಾಹಿತ್ಯಿಕ ಭಾಷೆ, ಸೆಂಟಿಂಗ್ ಮತ್ತು ಶ್ರೋತೃಗಣಗಳ ವಿಷಯದಲ್ಲಿ ಸಾರ್ವಜನಿಕ ಪ್ರಕಾರಕ್ಕೆ ಸೇರಿದ್ದವರು ಮನೆಯೊಳಗಿನದ್ದೇ ಆಗಿ ಉಳಿದಿರುತ್ತದೆ.

ಸಾರ್ವಜನಿಕ ವಲಯದ ಕಥೆಗಳನ್ನು ಸಾಮಾನ್ಯವಾಗಿ ಗಂಡಸರು ಹೇಳುತ್ತಾರೆ. ಅವರು ಹವ್ಯಾಸಿ, ಬದುಕಿಗೆ ಬೇರೆ ವೃತ್ತಿ ಅವಲಂಬಿಸಿದ್ದು ಹಬ್ಬ ಹರಿದಿನಗಳಲ್ಲಿ ಸ್ಥಳೀಯ ಕಾವ್ಯ ಅಥವಾ ಜಾತಿಮಹಾಕಾವ್ಯವನ್ನು ಹಾಡುವ ಅರೆ ವೃತ್ತಿಪರ ಅಥವಾ ಧಾರ್ಮಿಕ ಮತ್ತು ಲೌಕಿಕ ಕಥೆಗಳನ್ನೂ ಊರೂರು ತಿರುಗಿ ಹಾಡುವ ವೃತ್ತಿಪರ ಗಾಯಕರು, ಕಥೆಗಾರರೂ ಆಗಿರಬಹುದು. ಸ್ಥಳೀಯ ಹಬ್ಬ ಉತ್ಸವಗಳ ಸಂದರ್ಭದಲ್ಲಿ ವೃತ್ತಿಗಾಯಕರು ಇಡೀ ಹಳ್ಳಿಯನ್ನು, ಮಿಶ್ರ ಶ್ರೋತೃಗಳನ್ನು ಉದ್ದೇಶಿಸಿ ಕಥೆಗಳ ಪ್ರದರ್ಶನ ನೀಡುತ್ತಾರೆ.

ಮನೆಯೊಳಗಿನ ಪ್ರಕಾರಗಳು ಆಡು ಮನೆಗೆ ತೀರ ಹತ್ತಿರವಾಗಿದ್ದರೆ ಸಾರ್ವಜನಿಕ ಪ್ರಕಾರಗಳು. ವಿಶೇಷವಾದ ಶೈಲಿ, ಸೂತ್ರ ರೂಪದ ಗದ್ಯ, ಪದ್ಯ, ಹಾಡು, ಸಂಭಾಷಣೆ, ವೇಷಭೂಷಣ, ಸಹಾಯಕರು, ವಾದ್ಯಗಳು, ಚಿತ್ರ ಮತ್ತು ಬೊಂಬೆಗಳಂಥ ಸಹಾಯಕ ಉಪಕರಣಗಳು, ಇವನ್ನೆಲ್ಲ ಬಳಸಿಕೊಳ್ಳುತ್ತವೆ.”[೪] ಹೀಗೆ ಎ.ಕೆ. ರಾಮಾನುಜನ್‌ರು ಸಾರ್ವಜನಿಕವಾಗಿ ಕಥನ ಗೀತೆಗಳು, ಶೈಲಿ, ಛಂದಸ್ಸು, ಸಾಹಿತ್ಯಿಕ ಭಾಷೆಯನ್ನು ಸರಳವಾಗಿ ಸಂಶೋಧನೆಮಾಡಿರುವುದು ತಿಳಿಯುತ್ತದೆ. ಹಾಗೂ ಸಾಂಸ್ಕೃತಿಕ ಸಂಗತಿಗಳಾದ ಸ್ಥಳೀಯ ಹಬ್ಬ, ಉತ್ಸವಗಳ ಸಂದರ್ಭದಲ್ಲಿ ಗುರ್ತಿಸಿರುವುದು ಕಂಡುಬರುತ್ತವೆ.

ಎ.ಕೆ. ರಾಮಾನುಜನ್‌ರು ಜಾನಪದ ಕ್ಷೇತ್ರದಲ್ಲಿ ಗಾದೆ ಮತ್ತು ಒಗಟು ತಿಳಿಸಿ ಸ್ಥಾನವನ್ನು ನೀಡಿದ್ದಾರೆ. ಗಾದೆಗಳು ಮತ್ತು ಒಗಟುಗಳು, ಪ್ರಾಚೀನಕಾಲದಿಂದಲೂ ಇದ್ದು ಈ ಪ್ರಕಾರಗಳಲ್ಲಿ

ಜಾನಪದವನ್ನು ವರ್ಗೀಕರಣ ಮಾಡಿದ್ದಾರೆ. ಒಗಟುಗಳಿಗೆ ಸಮಾಜದಲ್ಲಿ ಸ್ಥಾನಮಾನದ ಬಗ್ಗೆ ಕುರಿತು ವಿವರಿಸಿದ್ದಾರೆ. ಉದಾಹರಣೆ, ಕನ್ನಡ ಒಗಟುಗಳು ಕನ್ನಡ ಗಾದೆಗಳಿಗೆ ಅನೇಕ ರೀತಿಯಲ್ಲಿ ಪೂರಕವಾಗಿವೆ. ಹಾಡುಗಳಲ್ಲಿ ಇರುವಂತೆ ಒಗಟುಗಳಲ್ಲಿ ಸಾಮಾಜಿಕ ಥಿಮ್ ಇರುವುದಿಲ್ಲ. ನೀರು ಸೂರ್ಯ. ಕಣ್ಣು, ಮರ, ಮೊಟ್ಟೆ ಇತ್ಯಾದಿಯಾಗಿ ನಿಸರ್ಗದ ಪರಿಚಿತ ವಸ್ತುಗಳ ಮೇಲೆ ಅಥವಾ ಬಾವಿ, ಪುಸ್ತಕ, ಕುಡುಗೋಲು ಇತ್ಯಾದಿ ಪರಿಚಿತ ಸಾಂಸ್ಕೃತಿಕ ವಸ್ತುಗಳ ಮೇಲೆ ಅಪಾರ ಗಮನವಿರುತ್ತದೆ. ಇಂಥ ವಸ್ತುಗಳನ್ನಿಟ್ಟುಕೊಂಡು ಕಾವ್ಯ ಕ್ರೀಡೆ, ತರ್ಕ ಕ್ರೀಡೆಗಳಲ್ಲಿ ತೊಡಗಿರುತ್ತದೆ. ಸುಮಾರು ಐದಾರು ವರ್ಷದ ಮಕ್ಕಳು ತರ್ಕದ ಬಳಕೆಯನ್ನು ಕಲಿಯುತ್ತಿರುವಾಗ ಒಗಟು ಅವರಿಗೆ ಪ್ರಿಯವಾದ ಪ್ರಕಾರವಾಗಿರುತ್ತದೆ. ಕನ್ನಡ ಸಾಮಾನ್ಯವಾದ ಒಂದು ಒಗಟು ಇದು. 'ಮೂರು ಕಣ್ಣಿವೆ. ಆದರೂ ಶಿವ ಅಲ್ಲಿ ಏನದು?' ಉತ್ತರ. ತೆಂಗಿನಕಾಯಿ.

ಇದಕ್ಕೆ ಪ್ರತಿಯಾಗಿ ಗಾದೆಗಳು ಸಮಾಜವೊಂದರಲ್ಲಿ ಲಭ್ಯವಿರುವ ಬೇಕಾದಲ್ಲಿ ಒಯ್ದು ಬಳಸಬಹುದಾದ ಪೋರ್ಟಬಲ್ ನಿದರ್ಶನಗಳು ಗಾದೆಗಳಲ್ಲೂ ನಿಸರ್ಗದ ಸಂಸ್ಕೃತಿಯ ವಸ್ತುಗಳ ಉಲ್ಲೇಖ ಇರುತ್ತದಾದರೂ ಅದು ಆವಸ್ತುವಿಗೆ ಇರುವ ಕಾವ್ಯಾತ್ಮಕ ಅಥವಾ ತಾರ್ಕಿಕ ಮೌಲ್ಯಗಳ ಕಾರಣಕ್ಕಿಲ್ಲ. ಬದಲಾಗಿ ನೀತಿಬೋಧೆ ಅಥವಾ ನಂಬಿಕೆಯೊಂದರ ನಿದರ್ಶನವೆಂಬ ಕಾರಣಕ್ಕೆ ಉಲ್ಲೇಖಗೊಳ್ಳುತ್ತವೆ."[೫]

ಎ.ಕೆ. ರಾಮಾನುಜನ್‌ರು ಜಾನಪದ ಸಂಸ್ಕೃತಿಯ ಬಗ್ಗೆ ಆಚರಣೆ ಮತ್ತು ರಂಗಭೂಮಿಯ ಹಿನ್ನೆಲೆಯಲ್ಲಿ ಗುರ್ತಿಸಿರುವುದು ತಿಳಿಯುತ್ತದೆ. ಮುಖ್ಯವಾಗಿ ಇವರು ವ್ರತಕಥೆಯಂಥ ಸವಿತ್ರ ಕಥನಗಳು ಆಚರಣೆಗಳೊಳಗೆ, ಇರುವ ಜಾನಪದ ರಂಗಭೂಮಿಯೂ ಅಳದಲ್ಲಿ ಆಚರಣೆ, ಸಾಂಸ್ಕೃತಿಕಪ್ರದರ್ಶನ ಮತ್ತು ಧಾರ್ಮಿಕ ಮತ್ತು ಕಲಾತ್ಮಕ ಉದ್ದೇಶಗಳು ಸವಿವರವಾಗಿ ವಿವರಿಸಿದ್ದಾರೆ. ಹಾಗೂ ಆಚರಣೆಯಲ್ಲಿ ಎಲ್ಲ ರೀತಿಯ ಪೂಜೆ ಸಮಾಗ್ರಿಯನ್ನು ವಿವರಿಸಿರುವುದು ಹಾಗೂ ದೇವರ ಆರಾಧನೆ ನಡೆಯುವುದು ತಿಳಿಯುತ್ತದೆ. "ದಾಸ'ರಂಥ ವೃತ್ತಿ ನಿರತ ಜಾತಿಗಳವರು ಕಥೆ ಮತ್ತು ಲಾವಣಿಗಳನ್ನು ಹೇಳುವುದಲ್ಲಿ ವಿಶೇಷ ತಜ್ಞತೆಗಳಿಸಿರುತ್ತಾರೆ. ಅವರು ಬೇರೆ ಬೇರೆ ದೇವರುಗಳ ಭಕ್ತರಾಗಿರುತ್ತಾರೆ. ಅವರು ಹಾಡಿ, ಕುಣಿದು ಕಥೆ ಹೇಳುತ್ತ ನಡಿಸುವವರೂ ಆಗಿರುತ್ತಾರೆ. ನರ್ತನವಿಲ್ಲದೆ ಆಡುಮಾತಿನ ಮಾಧ್ಯಮ ಬಳಸಿಕೊಂಡು ದೇವತೆಗೆ ಸಂಬಂಧ ಪಡೆದ ಕಥೆ ಹೇಳುತ್ತಿರುವಾಗಲೂ ನಾರಿ ಕಥೆ ಮಂಗಳ ಎಂಬ ಮೂಲ ವಿನ್ಯಾಸ ಹಾಗೇ ಉಳಿದಿರುತ್ತದೆ.

ಓಗೆ ರಂಗ ಪ್ರದರ್ಶನದ ಆದಿಮ ರೂಪವನ್ನು ಆಚರಣೆಗಳಲ್ಲಿ ಕಾಣಬಹುದು. ಥೀಮು ಧಾರ್ಮಿಕವಲ್ಲದೆ ಇರಬಹುದು. ಜಾನಪದ ರಂಗಭೂಮಿಯಲ್ಲೂ ಆಚರಣೆಯ ಕೆಲವು ನಂಬಿಕೆಗಳು ಮತ್ತು ಲಕ್ಷಣಗಳು ಇವೆ. ಉದಾಹರಣೆ, 'ಮೈ ಮೇಲೆ ಬರುವುದು' ಅನ್ನುವ ಪರಿಕಲ್ಪನೆಯು

ಎಂದೂ ಪ್ರೇಕ್ಷಕರ ಮನಸ್ಸಿನಿಂದ ದೂರವಾಗುವುದೇ ಇಲ್ಲ. ನರಸಿಂಹಾವತಾರ ಕಾಣಿಸಿಕೊಳ್ಳುವ ನಾಟಕಗಳಲ್ಲಿ ನರಸಿಂಹ ಪಾತ್ರಧಾರಿಯು ಕಾಣಿಸಿಕೊಂಡ ತಕ್ಷಣ ಪ್ರದರ್ಶನವು ನಿಂತು, ದೇವರು ಮೈಮೇಲೆ ಬಂದು ನರಸಿಂಹ ಪಾತ್ರಧಾರಿಯು ರಾಕ್ಷಸ ವೇಷಧಾರಿಯನ್ನು ಕೊಲ್ಲದಿರಲೆಂದು ಹಣ್ಣು, ಕಾಯಿ, ಆರತಿಗಳೊಡನೆ ಪೂಜಿಸುವುದನ್ನೂ ನಾನು ಹಲವು ಬಾರಿ ಕಂಡಿದ್ದೇನೆ."[೬] ಆಚರಣೆ ಆಚಾರ ವಿಚಾರಗಳು ನಮ್ಮ ಸಂಸ್ಕೃತಿಯೊಡನೆ ಬೆರೆತುಕೊಂಡಿರುವುದು ಅದುಮುಖ್ಯವಾಗಿ ರಂಗಭೂಮಿಯ ಮೇಲೆ ನಮ್ಮ ಸಂಸ್ಕೃತಿ ಪ್ರತ್ಯಕ್ಷವಾಗಿ ನಡೆಯುವಂತದ್ದಾಗಿದೆ. ಎ.ಕೆ. ರಾಮಾನುಜನ್‌ರು ಜಾನಪದ ಸಂಸ್ಕೃತಿಯ ಆಧಾರದ ಮೇಲೆ ವಿವರಣಾತ್ಮಕವಾಗಿ ಸ್ಪಷ್ಟ ಪಡಿಸುತ್ತಾರೆ. ಕಥೆಗಳ ಮೂಲಕ ಭಾರತದ ಸಂಸ್ಕೃತಿಯನ್ನು ತೋರಿಸಿಕೊಡುವವರು ಆಗಿದ್ದಾರೆ. ಮುಖ್ಯವಾಗಿ ಆಚಾರ–ವಿಚಾರ ನೀವೆ ನಿಯಮಗಳ ಮೂಲಕ ಕಥೆಯೊಳಗಿನ ಅಂಶಗಳನ್ನು ವಿವರಿಸುವರು ಆಗಿದ್ದಾರೆ. ಅಲ್ಲದೆ ದೇವರ ಕಥೆಯನ್ನು ಹೇಳುತ್ತಾನೆ. ಅಥವಾ ದೇವರನ್ನೆ ಉದ್ದೇಶಿಸಿ ಹೇಳಲಾಗುತ್ತದೆ ಎಂದು ವಿವರದ ಮೂಲಕ ಭಾರತದ ಸಂಸ್ಕೃತಿಯನ್ನು ತೋರಿಸುವವನು ಆಗಿದ್ದಾನೆ. ಎ.ಕೆ ರಾಮಾನುಜನ್‌ರು ಭಕ್ತಿ ಕವಿತೆಗಳನ್ನು ಹಚ್ಚಿಕೊಂಡು ಭಕ್ತಿ ಕಾವ್ಯದ ವೈಶಿಷ್ಟ್ಯತೆ ಮತ್ತು ಪ್ರಶ್ನೋತ್ತರ ಮೂಲಕವಾಗಿ, ಹನ್ನೆರಡನೆಯ ಶತಮಾನ ಮತ್ತು ಹದಿನಾರು ಹದಿನೇಳನೆಯ ಶತಮಾನದ ಭಕ್ತಿ ಕಾವ್ಯದ ವಿವರಣೆ ಸವಿವರವಾಗಿ ಕೊಡುತ್ತಾ ಹೋಗಿದ್ದಾರೆ. ಹನ್ನೆರಡನೆ ಶತಮಾನದಲ್ಲಿ ಶಿವ ಇಲ್ಲಿನ ಆರಾಧ್ಯದೇವನಾಗಿ ಮತ್ತು ಹದಿನಾರು ಹದಿನೇಳನೆಯ ಶತಮಾನದ ಆರಾಧ್ಯದೈವ ವಿಷ್ಣು ಅವತಾರವಾಗಿರುವ ಕೃಷ್ಣನನ್ನು ಆಗಿ ಮಾಡುವುದ ತಿಳಿಯುತ್ತದೆ. ಇವನು ಭಕ್ತಿ ಪರಪಂರೆಯನ್ನು ಮೂಡಿಸುವಂತವಳು ಆಗಿವೆ. ಇವೆರಡರಲ್ಲಿ ದೇವರನ್ನೂ ಪ್ರೀತಿಸುವ ಮತ್ತು ಆರಾಧನೆ ಮಾಡುವುದು ಆಗಿದೆ. ಇವೆರಡರಲ್ಲಿ ಇವು ಭಕ್ತಿ ಪರಂಪರೆಯನ್ನು ಮೂಡಿಸುವುದಕ್ಕಿಂತವು ಆಗಿವೆ. ಇವೆರಡರಲ್ಲಿ ದೇವರನ್ನು ಪ್ರೀತಿಸುವ ಮತ್ತು ಅವಕಾಶದ ಆರಾಧನಾಮಾಡುವುದು ಆಗಿದೆ. ಹಾಗೂ ಲೌಕಿಕ ಹಾಗೂ ಅಲೌಕಿಕ ಪ್ರೇರಣೆ ಪ್ರತಿಮೆಯಾಗಿ ಒಡ್ಡಿರುವುದು ಕಂಡುಬರುತ್ತದೆ. "ಮಹಾದೇವಿಯಕ್ಕನ ಕವಿತೆ ಮತ್ತು ವಿಶೇಷವಾಗಿ ಗೋವಿಂದದಾಸನ ಕವಿತೆ, ಎರಡೂ ಸಂಸ್ಕೃತದ ಸ್ಥಳೀಯ ಭಾಷೆಗಳ ಭಾರತೀಯ ಶೃಂಗಾರಕಾವ್ಯದ ಸಂಪ್ರದಾಯಗಳನ್ನೂ ಒಳಗೊಂಡಿವೆ. ಮಹಾದೇವಿಯಕ್ಕನ ಕವಿತೆಯಲ್ಲಿ ಬಂಧುಗಳ ಮನೆಯನ್ನು ಬಿಟ್ಟ ಪ್ರೇಮಿಯನ್ನು ಅರಸುತ್ತ ಹೋಗುವ ಅಭಿಸಾರಿಕೆಯ ಪ್ರತಿಮೆಯೇ ಕವಿತೆ ಅನ್ಯೋಕ್ತಿಯ ವಿಧಾನವನ್ನು ಬಳಸಿಕೊಂಡಿದೆ. ಮನೆಯಲ್ಲಿನ ಎವಿಧ ಸಂಬಂಧಿಗಳನ್ನು ಸ್ಪಷ್ಟವಾಗಿ ಒಂದೊಂದು ಆಮೂರ್ತ ಗುಣಗಳಿಗೆ ಸಂಪಾದಿಯಾಗಿಸಿದೆ ಆಸ್ತೀಯ ಮಾಯಮಾವನು ಲೋಕ, ಇನ್ನೂ ಕೆಲವು ಹೋಲಿಕೆಗಳು ಸೂಚಕವಾಗಿದ್ದು ಅನುಸತ್ವಿಕ ಪರೀಕ್ಷೆಗಳ ಸಾಮಾನ್ಯ ಹಿನ್ನಲೆಯನ್ನು ಬಳಸಿಕೊಂಡಿವೆ, ಉದಾಹರಣೆಗೆ ಮೂವರು ಮೈದುನರು, ವ್ಯಕ್ತಿಯ ಸ್ವಭಾವನ್ನು ನಿಯಂತ್ರಿಸುವ ಬದುಕಿರುವವರೆಗೂ ತಪ್ಪಿಸಿಕೊಳ್ಳಲಾಗದ

ಹುಲಿಯಂತೆ ಕಣ್ಣುಬ್ಬು ಕಾಯುವ ತ್ರಿಗುಣಗಳು, ಗಂಡನ ಅನೇಕ ಜನ್ಮಗಳಿಂದ ಸಾಗಿ ಬಂದಿರುವ ಅಹಂಕಾರ ಅಥವಾ 'ಕರ್ಮ' ಕವಿತೆಯನ್ನು ನುಡಿಯುತ್ತಿರುವವಳನ್ನು ಸೆರೆಯಾಗಿಟ್ಟುಕೊಂಡಿರುವ ನಾದಿನಿಯ 'ವಾಸನಾ' ಅಥವಾ ಗತಜನ್ಮಗಳ ನೆನಪುಗಳ ವಾಸನೆ, ಮನಸ್ಸು ಮಾತ್ರವೇ ಪ್ರಿಯಕರರೊಡನೆ ಬೇಟಿಗೆ ನೆರವು ನೀಡುವ ಆಪ್ತಸಖಿ.

ಎಲ್ಲಿ ಸಂಬಂಧಗಳೂ ಮದುವೆಯ ಕಾರಣದಿಂದ ಮಾಡಿಕೊಂಡ ಸಂಬಂಧಗಳೆಂಬುದನ್ನು ಗಮನಿಸಿ ಮನೆಯ ತುಂಬ ಇರುವ ಮೈದುನರು ನಾದಿನಿಯರು ಸಾಮಾಜಿಕ ಮತ್ತು ನೈತಿಕ ಬಂಧಗಳು ಜ್ಞಾನವ್ಯಕ್ತಿಯೂ ಅವಳ ರಕ್ತಸಂಬಂಧಿಯಲ್ಲ. ನೈತಿಕತೆಯ ಜ್ಞಾನ ಅವಳನ್ನೂ ಬಂಧಿಸಿವೆ. ಈ ಸಂಬಂಧ ಬಲೆ ನಮ್ಮ ಹುಟ್ಟಿನಿಂದ ಬರುವಂತದಲ್ಲ, ನಾವಾಗಿ ತೊಡಕಿಕೊಳ್ಳುವಂಥದದ್ದು ಹೀಗೆ ವಿವರವಾಗಿ ನಿರೂಪಿಸಿದ ನೈತಿಕ ವಿವರಗಳು ಕವಿತೆಯ ಶಿಖರದಲ್ಲಿ 'ಹಾದರವನಾಡುವೆ ಹರನ ಕೂಡೆ' ಎಂಬಲ್ಲಿ ಭದ್ರವಾಗುತ್ತವೆ. ಎಲ್ಲ ಮರ್ಯಾದಸ್ಥ ಕನ್ನಡ ಮನೆಗಳಲ್ಲಿ ನಿಷಿದ್ಧ ಪದವೆಂದು ಭಾವಿಸಲಾಗಿರುವ ಹಾದರ ಅನ್ನುವುದು ಬಳಕೆಯಾಗಿದೆ. ಸಶಕ್ತ ಆಡುಮಾತಿನ ಶೈಲಿಯಲ್ಲಿ ರಚಿತವಾಗಿರುವ ಇಡೀ ಕವಿತೆ ಹಾದರ ಎಂಬ ಪದದ ಬಳಕೆಯಿಂದ ನೀಡುವ ಭಾಷಿಕ ಅಘಾತ ನೈತಿಕವೆಂದು ಕರೆಯಲಾಗುವ ಎಲ್ಲ ಚೌಕಟ್ಟುಗಳನ್ನು ಮುರಿಯುವುದರಿಂದ ಉಂಟಾಗುವ ಅಘಾತವನ್ನು ಅಭಿನಯಿಸಿಬಿಡುತ್ತದೆ. ಮಹಾದೇವಿಯಕ್ಕ ಇತರ ಎಡೆಗಳಲ್ಲಿ ಲಜ್ಜೆಯ ಒಂದು ಸದ್ಗುಣ ಎಂಬುದನ್ನೇ ನಿರಾಕರಿಸುತ್ತಾಳೆ. ತನ್ನ ಸುತ್ತಲಿನ ಸಮಾಜದ ತೋರಿಕೆಯ ನೈತಿಕತೆಯನ್ನು ಧಿಕ್ಕರಿಸುವಂತೆ ಅರೆ ತೊಟ್ಟ ಉಡುಗೆಯನ್ನೇ ಕಳಚಿ ಎಸೆದಳು ಅನ್ನಲಾಗುತ್ತದೆ.

ದೇವರುಗಳ ಪ್ರೀತಿಸುವುದೆಂದರೆ ತನ್ನದೆಲ್ಲವನ್ನು ಷರತ್ತಿಲ್ಲದೆ ಒಪ್ಪಿಸುವುದು ಮಾತ್ರವಲ್ಲ ದೇವರೊಡನೆ ಬೆಸೆಯುವ ಸಂಬಂಧವು ನೀತಿ ಮತ್ತು ಸಮಾಜದ ದೃಷ್ಟಿಕೋನದಿಂದ ಅನೈತಿಕವಾದ ಸಂಬಂಧವೇ ಆಗಿರುವುದು ಅನಿವಾರ್ಯ ಎಂಬುದನ್ನು ಇದು ಸೂಚಿಸುತ್ತದೆ. ಸಾಮಾನ್ಯವಾಗಿ ನಿರೀಕ್ಷಿಸಲಾಗುವ ನಿಷ್ಠೆ ಮತ್ತು ಸುರಕ್ಷಿತ ಭಾವಗಳು ಕುಸಿದು ಬೀಳುವಂಥ ಉಲ್ಲಂಘನೆ ಇದು. ಇಂಥ ಒಂದು ವಿಚಾರ ಸಂಕೀರ್ಣವಾದ ರೂಪಕ ಕ್ರಿಯೆಯ ಹಿಂದಿದೆ. ದೇವರು ಅನೈತಿಕ ಪ್ರೇಮಿ. ಅವನು ಎಲ್ಲ ಕರ್ಮಗಳನ್ನು ಸಾಮಾನ್ಯ ಸಂಬಂಧಗಳನ್ನು ಮುರಿಯುತ್ತಾನೆ. ದೇವರೊಡನೆ ವ್ಯವಹರಿಸುವುದಿದ್ದರೆ ಗಂಡನ ಮನೆಯನ್ನು ಧಿಕ್ಕರಿಸಿ ಉಲ್ಲಂಘಿಸುವುದು ಅನುವಾರ್ಯವಾಗುತ್ತದೆ."[೨]

ಹೀಗೆ ಎ.ಕೆ ರಾಮಾನುಜನ್‌ರು ಭಕ್ತಿಯನ್ನು ವೈವಿಧ್ಯತೆಯಿಂದ ವಿವರಿಸುವುದು ತಿಳಿಯುತ್ತದೆ. ತಮ್ಮ ಆರಾಧ್ಯ ದೇವನ ಬಗ್ಗೆ ಇರುವ ನಂಬಿಕೆ ಶ್ರದ್ದೆಯನ್ನು ತೋರಿಸುವಕ್ಕಿಂತಹ ವಿಷಯಗಳು ಆಗಿವೆ. ಮತ್ತು ಕೃಷ್ಣ ಮತ್ತು ಚೆನ್ನ ಮಲ್ಲಿಕಾರ್ಜುನ ಇವರುಗಳ ಮಹಿಮೆಯನ್ನು ತೋರಿಸು

ಅಂಶಗಳ ಆಧಾರದ ಮೇಲೆ ರಾಮಾನುಜನರು ಭಕ್ತಿ ವೈವಿಧ್ಯತೆಯನ್ನು ತಮ್ಮ ಪ್ರಬಂಧದಲ್ಲಿ ವಿವರಿಸಿರುವರು, ಹಾಗೂ ಧಾರ್ಮಿಕ ಕಾವ್ಯವನ್ನು ಕುರಿತು ಚರ್ಚಿಸುವಾಗ ಪ್ರೇರಣೆ, ತಿರುಳು ಸಂಕೇತ ಭಾಷಾಶೈಲಿ ಇರುವ ಸಮಾನತೆಯನ್ನು ತೋರಿಸಿದ್ದಾರೆ. ಮತ್ತು ಕಾವ್ಯ ಮತ್ತು ಧರ್ಮಗಳ ನಡುವೆ ಈ ಬಗೆಯ ಘರ್ಷಣೆ ಭಾರತೀಯ ಕಾವ್ಯಗಳಲ್ಲಿ ಇಲ್ಲ. ಇದು ಪ್ರಧಾನವಾದ ಅಂಶವಾಗಿದೆ.

ಸುಬ್ರಾಯ ಚೊಕ್ಕಾಡಿಯವರು.. ವ್ಯಕ್ತಿಯ ಬುದ್ದಿಮತ್ತೆಯೇ ಕಾರಣವಾಗಿ ವ್ಯಕ್ತಿ ಮತ್ತು ಸಮುದಾಯದ ನಡುವೆ ಬಿದ್ದಿರುವ ಆಳವಾದ ಕಂದರ, ತನ್ನದೇ ಎನ್ನುವ– ಹುಟ್ಟಿದ, ಉಸಿರಾಡುವ, ಬದುಕುವ, ಎಲ್ಲ ಒಂದೇ ಆಗಿ ಉಳಿಯುವ ಸಂಸ್ಕೃತಿಯ ತಾಯಿಬೇರಿನ ಅಭಾವ–ಇವೆಲ್ಲ ಇಲ್ಲಿನ ನಾಯಕನನ್ನು Anti-ltere ಆಗಿಸಿವೆ."

ಎ.ಕೆ. ರಾಮಾನುಜನ್‌ರ ಭಕ್ತಿ ವೈವಿಧ್ಯತೆಯ ಅಕ್ಕಮಹಾದೇವಿಯ ಸ್ಥಿತಿಯನ್ನು ವಿವರಿಸುವ ಸಂಗತಿಯಾಗಿದೆ. ಮತ್ತು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ. ಈ ಅಂಶದಲ್ಲಿ ಮನಸ್ಸು ಅವಳಿಗೆ ಸಹಾಯಕವಾದ'ಸಖಿ'ಯಾಗಿದೆ. ಮತ್ತು ಮಹಿಳೆಯ ಆಲೋಚನೆಯು ಯಾವ ರೀತಿಯಲ್ಲಿ ಅರಿದು ಹೋಗಿದೆ ಎಂದು ಈ ವಚನದಲ್ಲಿ ಸವಿವರವಾಗಿ ವಿವರಿಸಿದ್ದಾರೆ. ಹಾಗೂ ಗೋವಿಂದದಾಸರ ಈ ಭಕ್ತಿ ಕಾವ್ಯದಲ್ಲಿ ದೇವರನ್ನೂ ಪ್ರೀತಿಸುವುದೆಂದರೆ ದೇವರೊಡನೆ ಸಂಬಂಧವು ನೀತಿ ಮತ್ತು ಸಮಾಜದ ದೃಷ್ಠಿಕೋನದಿಂದ ಅನೈತಿಕ ಸಂಬಂಧವೇ ಆಗಿರುವುದು ತಿಳಿಯುತ್ತದೆ. ಕವಿತೆಯಾಗಿ ಒಂದೊಂದು ಕೃತಿಯೂ ವಿಶಿಷ್ಟ ಮತ್ತು ಅನನ್ಯ ತಾತ್ಪರ್ಯ ರೂಪದಲ್ಲಿ ಮತ್ತು ಮರುಮಂಡನೆಗಳಲ್ಲಿ ಮಾತ್ರ ಅವುಗಳ ಹೋಲಿಕೆ ಸಾಧ್ಯ ವ್ಯತ್ಯಾಸಗಳನ್ನೂ ತೋರಿಸುವುದೇ ಹೋಲಿಕೆಯ ಕೆಲಸದ ಬಲುದೊಡ್ಡ ಗುರಿಯಾಗಿದೆ ಎಂದು ಕಂಡುಕೊಳ್ಳಬಹುದಾಗಿದೆ.

ಎ.ಕೆ. ರಾಮಾನುಜನ್‌ರ ಮಾತೊಂದು ಪ್ರಬಂಧ. "ಮಹಾಭಾರತದಲ್ಲಿ ಪುನರುಕ್ತಿ" ಈ ಪ್ರಬಂಧದಲ್ಲಿ ಮುಖ್ಯವಾಗಿ ಜಾನಪದ ಮತ್ತು ಅನಂತರದ ಮಹಾಭಾರತಗಳು ಆಧಾರದ ಮೇಲೆ ಹಾಗೂ ತಮಿಳು ಮಹಾಭಾರತ, ಕನ್ನಡ ಕುಮಾರವ್ಯಾಸನ ಭಾರತದ ಇವೆಲ್ಲವುಗಳಲ್ಲಿ ಬರುವ ಪಾತ್ರಗಳ ಸನ್ನಿವೇಶವನ್ನು ಗುರ್ತಿಸಿದ್ದಾರೆ. ಮತ್ತು ಪಾಂಡವರ ಕೌರವರ, ವಂಶವೃಕ್ಷವನ್ನು ಸವಿವರವಾಗಿ ವಿವರಿಸಿದ್ದಾರೆ. ಹಾಗೂ ಬಹುತೇಕ ಸಾಂಪ್ರದಾಯಿಕ ಹಿಂದೂಗಳು ಬಹು ಅಂತಸ್ತುಗಳ ಬಹುರೂಪವನ್ನು ಮೌಖಿಕವಾಗಿ ಆಗಿರುವ ಪಂರಪರೆಯ ಪ್ರಮುಖ ಸಾಹಿತ್ಯಕ ಕೃತಿಗಳನ್ನು ಕಲಿಯುತ್ತಾರೆ. ನಂತರದಲ್ಲಿ ಕಲಿಯುವವರ ಮನಸ್ಸಿನಲ್ಲಿ ಒಟ್ಟುಗೂಡಿ ಇಡಿಯಾಗುವ ಬಿಡಿ ಬಿಡಿ ತುಣುಕುಗಳಾಗಿ ಕಲಿಯುತ್ತಾರೆ. ಹಾಗೂ ಮಾತೃಭಾಷೆ ಮೂಲಕವಾಗಿ ಅನುವಾದವಾಗಿ ರೂಪಾಂತರವಾಗಿ, ಭಾಷಾಂತರವಾಗಿ, ಹಲವು ಸಮುದಾಯಗಳಲ್ಲಿ ದ್ರೌಪದಿಯೂ ಪಾಂಡವರೂ

ಪ್ರಜೆಗಳಿಗೆ ಪ್ರದರ್ಶನಗಳಾಗಿ ಕಾಣಿಸಿಕೊಳ್ಳುತ್ತವೆ. ಮಹಾಭಾರತವನ್ನು ಮನರಂಜನೆಯಾಗಿ, ನೀತಿ ಬೋಧನೆಯಾಗಿ, ಕಂಡುಬರುವಂತದ್ದು ಆಗಿದೆ. ಪುನರುಕ್ತಿಯು ಮಹಾಭಾರತದ ಮಹತ್ವದ ತತ್ವವಾಗಿ ಕಂಡುಬರುತ್ತದೆ. ಪುನರುಕ್ತಿ ಅಥವಾ 'ಪ್ರತಿ' ಎ.ಕೆ. ರಾಮಾನುಜನ್‌ರು ಈ ಪ್ರಬಂಧದಲ್ಲಿ ಪ್ರಮುಖ ಪಾತ್ರಗಳ ವಂಶಾವಳಿಯನ್ನು ನಕ್ಷೆಯ ಮೂಲಕ ತೋರ್ಪಡಿಸಿದ್ದಾರೆ. ಮೂರು ತಲೆ ಮಾರುಗಳವರೆಗೆ ಚಿತ್ರಣವನ್ನು ನಕ್ಷೆಯ ಮೂಲಕ ತೋರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಪುರುಷ ಪಾತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ.

"ಇಂಥ ಪುನರುಕ್ತಿಯ ಘಟಕಗಳು ಮುಂದೆ ನಡೆಯಲಿರುವ ಘಟನೆಗಳ ಸೂಚನೆಯೂ ಹಿಂದೆ ಆದದ್ದನ್ನು ನೆನಪು ಮಾಡಿಕೊಳ್ಳುವಂಥವು ಆಗಿರುತ್ತವೆ. ಈ ಅಂಶವನ್ನು ಸ್ಪಷ್ಟಪಡಿಸಲು ಎರಡು ಪ್ರಮುಖ ಉದಾಹರಣೆಗಳು ಸಾಕೆನಿಸುತ್ತವೆ. ದ್ರೌಪದಿಯು ಮೊದಲು ಧೃತರಾಷ್ಟ್ರನ ಆಸ್ಥಾನದಲ್ಲಿ ಅವಮಾನಕ್ಕೆ ಗುರಿಯಾಗುತ್ತಾಳೆ; ಹಿರಿಯರ ಮೌನ ಸಮ್ಮತಿ ಇರುತ್ತದೆ. ಗಂಡಂದಿರು ಅಸಹಾಯಕ ಷಂಡತನದಲ್ಲಿ ಸುಮ್ಮನಿರುತ್ತಾರೆ. ವಿರಾಟನ ಆಸ್ಥಾನಲ್ಲಿ ಅವಳು ಮತ್ತೆ ಅವಮಾನಿತಳಾಗುತ್ತಾಳೆ. ರಾಣಿಯ ಸಹಾಯಕರಾಗಿರುತ್ತಾರೆ. ಅದರ ಈ ಪ್ರಸಂಗ ಬೇರೆಯ ರೀತಿಯಲ್ಲಿ ಕೊನೆಗಾಣುತ್ತದೆ. ಭೀಮ ಹಿಂದಿನಂತೆ ತನ್ನ ಕೋಪವನ್ನು ಹತ್ತಿಕ್ಕಿಕೊಳ್ಳುವುದಿಲ್ಲ; ಕೀಚಕನನ್ನು ಬಡಿದು ಕೊಲ್ಲುತ್ತಾನೆ. ಇದು ಮೊದಲು ಅಪಮಾನಿಸಿದ ದುಶ್ಯಾಸನನಿಗೆ ಮುಂದೆ ಅವನೇನು ಮಾಡಲಿದ್ದಾನೆ ಎಂಬುದರ ಮುನ್ಸೂಚನೆಯಾಗಿದೆ ಕೀಚಕನ ಸಾವುಕೂಡ ಸರಣಿಯೊಂದರ ಭಾಗ. ಏಕೆಂದರೆ ಈ ಮಹಾಕಾವ್ಯದಲ್ಲಿ ಕೇವಲ ಐದು ಜನ ಮಾತ್ರ ಗದಾಯುದ್ಧ ಮತ್ತು ಮಲ್ಲಯುದ್ಧಗಳಲ್ಲಿ ಸಮಾನ ಶಕ್ತಿಯುಳ್ಳವರು. ಜರಾಸಂಧ, ಕೀಚಕ, ಶಲ್ಯ, ಭೀಮ ಮತ್ತು ದುರ್ಯೋಧನ ಇವರೇ ಆ ಐದು ಜನ ಮಹಾಕಾವ್ಯದ ಮೊದಲಲ್ಲೇ ಜರಾಸಂಧನ ಸಾವಿಗೆ ಕೃಷ್ಣ ಏರ್ಪಾಡು ಮಾಡುತ್ತಾನೆ. ಈಗ ಕೀಚಕ ಸಾಯುತ್ತಾನೆ. ಅನಂತರ ಶಲ್ಯ ಹೀಗಾಗಿ ಅಂತಿಮ ಯುದ್ಧದಲ್ಲಿ ಪರಸ್ಪರ ಎದುರಾಗಲು ಉಳಿದವರು ಭೀಮ ದುರ್ಯೋಧನರು ಮಾತ್ರ. ಸಮಾನರನ್ನು ಹೀಗೆ ಸರಣಿಯಾಗಿ ಇಲ್ಲವಾಗಿಸುವುದು ಪ್ರತಿಸ್ಪರ್ಧಿಗಳಾದ ಅರ್ಜುನ ಮತ್ತು ಕರ್ಣ ಆಯುಧಗಳನ್ನು ಸಂಗ್ರಹಿಸುವುದರಂತೆಯೇ ಮಹಾಕಾವ್ಯದ ಚಲನೆಯ ಭಾಗವಾಗಿದೆ.

ಪುನರುಕ್ತಿಯ ಮತ್ತೊಂದು ಮಹತ್ವದ ನಿದರ್ಶನ ಭಗವದ್ಗೀತೆಯನ್ನು ಕುರಿತತದ್ದು. ಭಗವದ್ಗೀತೆಯು ಈ ಮಹಾಕಾವ್ಯದ ಭಾಗ ಹೌದೇ ಅಲ್ಲವೇ ಎಂದು ವಿದ್ವಾಂಸರು ಚರ್ಚಿಸಿದ್ದಾರೆ. ಸಂಪಾದಕರು ಇದನ್ನೂ ಪ್ರಕ್ಷಿಪ್ತವೆಂದು ಕರೆದಿದ್ದಾರೆ. ಆದರೆ ಸ್ಥಳೀಯರು ಮಾತ್ರ ಅದು ನಿರ್ವಿವಾದವಾಗಿ, ನಿಸ್ಸಂದಿಗ್ಧವಾಗಿ, ಕಲಾತ್ಮಕವಾಗಿ, ಕಲಾತ್ಮಕವಾಗಿ ಮತ್ತು ರಾಚನಿಕವಾಗಿ ಇರಬೇಕಾದ ಸ್ಥಳದಲ್ಲೇ ಇದೆ ಎಂದು ಭಾವಿಸುತ್ತಾರೆ. ಅದೊಂದು ಕೇಂದ್ರ ಘಟನೆ-ಯೋಧನೊಬ್ಬ ಯುದ್ಧಕ್ಕೆ ಮುನ್ನ ಕ್ಲೈಬ್ಯಕ್ಕೆ ಒಳಗಾಗುತ್ತಾನೆ. ಅವನಿಗೆ ತಕ್ಕ ಬೋಧನೆ ನೀಡಿ ಯುದ್ಧಕ್ಕೆ ತೊಡಗುವ ಉತ್ಸಾಹ

ಮೂಡಿಸಲಾಗುತ್ತದೆ. ಇಂಥ ಘಟನೆ ಈ ಕಾವ್ಯದಲ್ಲಿ ಕನಿಷ್ಠಪಕ್ಷ ಐದು ಬಾರಿ ನಡೆಯುತ್ತದೆ. ಆದರೆ ಇದಕ್ಕೆ ಅತ್ಯಂತ ವ್ಯಂಗ್ಯದಿಂದ ಒಡಗೂಡಿದ ಸಮಾನಾಂತರ ಘಟನೆ ಯುದ್ಧ ದೃಶ್ಯಗಳ ಮುನ್ನ ವಿರಾಟ ಪರ್ವದಲ್ಲಿ ಹಾಸ್ಯ ಪ್ರಸಂಗವಾಗಿ ಕಾಣಿಸಿಕೊಳ್ಳುತ್ತವೆ.

ಕೀಚಕನ ಸಾವಿನ ಸುದ್ಧಿ ಕೇಳಿದ ದುರ್ಯೋಧನ ತಕ್ಷಣವೇ ಪಾಂಡವರು ವಿರಾಟನ ಆಸ್ಥಾನದಲ್ಲಿರಬಹುದೆಂದು ಅನುಮಾನಿಸುತ್ತಾನೆ. ಪಾಂಡವರ ಪತ್ತೆ ಹಚ್ಚಲು ವಿರಾಟನ ಮೇಲೆ ದಂಡೆತ್ತಿ ಹೋಗುತ್ತಾನೆ. (ಅಜ್ಞಾತವಾಸದಲ್ಲಿರುವ ಪಾಂಡವರು ಪತ್ತೆಯಾದರೆ ಅವರು ಮರಳಿ ಹನ್ನೆರಡು ವರ್ಷ ವನವಾಸಕ್ಕೆ ಹೋಗಬೇಕೆಂಬ ಷರತ್ತು ಇರುತ್ತದೆ.) ವಿರಾಟನ ಸೈನ್ಯ ಯುದ್ಧ ಸನ್ನದ್ಧವಾಗುತ್ತಿದ್ದಂತೆ ರಾಜಕುಮಾರ ಉತ್ತರ ಅಂತಃಪುರದ ಹೆಂಗಳೆಯರಿಗೆ ಪ್ರಿಯನಾದವನು. ತನಗೊಬ್ಬ ಸರಿಯಾದ ಸಾರಥಿ ಇದ್ದಿದ್ದರೆ ಕೌರವರನ್ನೂ ಮಣ್ಣು ಮುಕ್ಕಿಸುತ್ತಿದೆ ಎಂದು ಕೊಚ್ಚಿಕೊಳ್ಳುತ್ತಾನೆ. ಸೈರಂಧ್ರಿಯ ವೇಷದಲ್ಲಿದ್ದ ದ್ರೌಪದಿಯು ಶಿಖಂಡಿ (ನಿಜವಾಗಿ ಅವನೇ ಅರ್ಜುನ) ಅರ್ಜುನನ್ನು ಚೆನ್ನಾಗಿ ಬಲ್ಲವನು ಅವನ ಸಾರಥಿಯಾಗಿದ್ದವನು ಎಂದು ಸೂಕ್ಷ್ಮವಾಗಿ ಸೂಚಿಸುತ್ತಾಳೆ. ಈ ಸಂದರ್ಭದಲ್ಲಿ ಹಾಸ್ಯ ಸೃಷ್ಠಿಯಾಗುವಂತೆ ಆಡಿ. ತಾನು ಕೇವಲ ನರ್ತನ ಕಲಿಸುವ ಶಿಖಂಡಿ, ಕವಚ ತಡಲಿ ಅರಿಯ, ಕುದುರೆಯನ್ನು ಏರಲಾರೆ ಅಂದು ಅರ್ಜುನ/ಶಿಖಂಡಿ ಸಾರಥಿಯಾಗಲು ಒಪ್ಪುತ್ತಾನೆ. ಉತ್ತರ ತೋರಿಕೆಗಷ್ಟೆ ಯುದ್ಧಕ್ಕೆ ಸಿದ್ಧನಾಗುತ್ತ ಅರ್ಜುನನಿಗೆ ಧೈರ್ಯ ಹೇಳುತ್ತ ರಥವನ್ನೇರುತ್ತಾನೆ. ಅರ್ಜುನ ರಥವನ್ನೂ ಉಭಯ ಸೈನ್ಯಗಳ ಮಧ್ಯಕ್ಕೆ ಒಯ್ದಾಗ ಹೊಳೆಯುವ ಭರ್ಜಿ, ಘೀಳಿಡುವ ಆನೆ, ಮತ್ತು ಎದುರಿಗಿರುವ ವೀರರ ಸಮೂಹವನ್ನು ಕಂಡು ತಬ್ಬಿಬ್ಬಾದ ಉತ್ತರ ರಥದಿಂದ ದುಮುಕಿ ಪ್ರಾಣ ಉಳಿಸಿಕೊಳ್ಳಲು ರಣರಂಗದಿಂದ ಪಲಾಯನ ಮಾಡುತ್ತಾನೆ. ಅರ್ಜುನ ಅವನ ಬೆನ್ನಟ್ಟಿ ಹೋಗಿ ಹಿಡಿದು 'ನೀನು ಯಾರೆಂದು ಕೊಂಡಿದ್ದೀಯೆ?' ಎಂದು ಕೇಳಿದಾಗ ಉತ್ತರ ಅವನ ಕಾಲಿಗೆ ಬಿದ್ದು ಪ್ರಾಣ ಉಳಿಸುವಂತೆ ಬೇಡಿಕೊಳ್ಳುತ್ತಾನೆ. ಅರ್ಜುನ ಕರುಣೆ ತೋರಿ ತಾವು ಅಜ್ಞಾತವಾಸಕ್ಕೆ ತೊಡಗುವ ಮುನ್ನ ಮೇಲೆ ಬಚ್ಚಿಟ್ಟಿದ್ದ ತನ್ನ ದಿವ್ಯಾಸ್ತ್ರಗಳನ್ನೂ ಉತ್ತರನ ನೆರವಿನಿಂದ ಮತ್ತೆ ಪಡೆದುಕೊಂಡು, ಉತ್ತರನನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಯುದ್ಧಕ್ಕೆ ತೊಡಗುತ್ತಾನೆ. ತನ್ನ ದಿವ್ಯ ಗಾಂಢೀವಕ್ಕೆ ಹೆದೆಯೇರಿಸಿ ಝೇಂಕರಿಸುತ್ತಾನೆ. ನರ್ತನ ಗುರುವಾಗಿದ್ದ ಶಿಖಂಡಿ ಇದ್ದಕ್ಕಿದ್ದಂತೆ ಪರಮವೀರನಾಗಿ ಮಾರ್ಪಟ್ಟದ್ದು ಉತ್ತರ ದಿಗ್ಭ್ರಾಂತನಾಗುತ್ತಾನೆ. ನಿಜವಾಗಿ ನೀನು ಯಾರೆಂದು ಉಳಿದಾಗ ಅರ್ಜುನ ತನ್ನ ನಿಜವನ್ನು ಹೇಳಿ ಸುಪ್ರಸಿದ್ಧವಾದ ಫಲ್ಗುಣ ಸವ್ಯಸಾಚಿ. ಧನಂಜಯ ಇತ್ಯಾದಿ ತನ್ನ ಹತ್ತು ಹೆಸರುಗಳನ್ನು ಹೇಳುತ್ತಾನೆ. ರಣರಂಗಕ್ಕೆ ನುಗ್ಗಿ ಶತ್ರುಗಳನ್ನು ಸೋಲಿಸಿ ಉತ್ತರ ಮತ್ತಷ್ಟು ದಿಗ್ಭ್ರಾಂತನಾಗುವಂತೆ ಮಾಡುತ್ತಾನೆ."[೯]

ಎ.ಕೆ. ರಾಮಾನುಜನ್‌ರು ಮಹಾಭಾರತದ ಕೆಲವು ಪ್ರಸಂಗಗಳನ್ನು ವಿವರಿಸುತ್ತ. ಇಲ್ಲಮುಖ್ಯ. ಕನ್ನಡ ಮಹಾಭಾರತ, ಕುಮಾರವ್ಯಾಸ, ತೆಲುಗು ಮಹಾಭಾರತ, ತಮಿಳು ಮಹಾಭಾರತ, ಭಗವದ್ಗೀತೆಯ ಮುಂತಾದವುಗಳ ಕುರಿತಾದ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ ಎಂದು ತಿಳಿಯಬಹುದಾಗಿದೆ. 'ಮಾಸ್ತಿ'ಯವರು ಹೇಳುತ್ತ "ಈ ಸಂದರ್ಭದಲ್ಲಿ ಯಾವ ಪಠ್ಯವೂ ಮೂಲವಲ್ಲ, ಆದರೆ ಯಾವ ಕಥನವೂ ಕೇವಲ ಮರುಕಥನವಲ್ಲ. ಮತ್ತು ಈ ಕಥೆಗೆ ಕೊನೆಯಿಲ್ಲ ಆದರೆ ಪ್ರತಿಯೊಂದು ಪಠ್ಯವೂ ಈ ಕಥೆಯನ್ನು ತನ್ನೊಳಗೆ ಪೂರ್ಣವಾಗಿ ಅಳವಡಿಸಿಕೊಂಡಿರುತ್ತದೆ." ಎಂದು ಮಾಸ್ತಿಯವರು ಗುರ್ತಿಸಿದ್ದು ತಿಳಿದುಬರುತ್ತದೆ. ಎ.ಕೆ. ರಾಮಾನುಜನ್‌ರು. ಮಹಾಭಾರತವು ಮತಗ್ರಂಥಗಳೆಂದು ಪರಿಗಣಿಸದೆ ಈ ಬಂಧನದಿಂದ ಬಿಡುಗಡೆಗೊಳಿಸಿದ್ದಾರೆ. ಹಾಗೂ ಮಹಾಭಾರತವು ನಮ್ಮ ಜನಾಂಗಕ್ಕೆ ಆಸ್ತಿ ಎಂದು ಹೇಳಿದ್ದಾರೆ.

ಎ.ಕೆ. ರಾಮಾನುಜನ್‌ರು ಮಹಾಭಾರತದಲ್ಲಿ ಘಟನೆಗಳನ್ನು ಪುನರುಕ್ತಿಯನ್ನು ಗಮನಿಸಿರುವುದು ತಿಳಿಯುತ್ತದೆ. ಇಲ್ಲಿ ಕೇವಲ ಎರಡು ನಿದರ್ಶನಗಳನ್ನು ನೀಡುತ್ತೇನೆ. ಭೀಷ್ಮನು ತನ್ನ ತಂದೆಯ ಮರು ಮದುವೆ ನಡೆಯಲೆಂಬ ಕಾರಣಕ್ಕೆ ಸಿಂಹಾಸನದ ಹಕ್ಕನ್ನು ವೈವಾಹಿಕ ಬದುಕನ್ನೂ ತ್ಯಾಗ ಮಾಡುವ ತೀರ್ಮಾನ ಎಂಬಂತೆ ಯಯಾತಿಯ ಕಥೆ ಬರುತ್ತದೆ. ಪುರು ತನ್ನ ಯೌವನವನ್ನು ತಂದೆ ಯಯಾತಿಗೆ ಧಾರೆ ಎರೆದುಕೊಟ್ಟು ಪುಣ್ಯವನ್ನು ಸಂಪಾದಿಸುತ್ತಾನೆ. ಇಂಥ ಸೂಕ್ತಿ ನೆನಪುಗಳು ವರ್ತಮಾನದ ಕ್ರಿಯೆಯನ್ನು ಪ್ರಚೋದಿಸುವಂಥ ಪೌರಾಣಿಕ ಮುದ್ರೆ ಎಂಬಂತೆ ವರ್ತಿಸುತ್ತವೆ. ಇಂಥ ಹಲವಾರು ಪ್ರಸಂಗಗಳಿವೆ. ಅವುಗಳಲ್ಲಿ ಇನ್ನೊಂದು ನಿದರ್ಶನ ಯುಧಿಷ್ಠರನು ಜೂಜಿನಲ್ಲಿ ಎಲ್ಲವನ್ನೂ ಕಳೆದುಕೊಂಡು ಹತಾಶನಾಗಿ ವನವಾಸದಲ್ಲಿರುವಾಗ ಋಷಿಯೊಬ್ಬ ನಳನ ಕಥೆಯನ್ನು ಹೇಳುತ್ತಾನೆ. ನಳಕೂಡ ತನ್ನ ಜೂಜಿನಲ್ಲಿ ಸೋತು ರಾಜ್ಯವನ್ನು ತಮ್ಮನಿಗೆ ಒಪ್ಪಿಸುತ್ತಾನೆ. ವನವಾಸ ಮಾಡುತ್ತ ಹೆಂಡತಿಯನ್ನು ಕಳೆದುಕೊಳ್ಳುತ್ತಾನೆ. ಹಾವು ಕಚ್ಚಿ ವಿರೂಪಗೊಂಡು ಆ ಕುರೂಪವೇ ಅಜ್ಞಾತವಾಸ ಮುಗಿಸಲು ಅವನಿಗೆ ಸಹಾಯಮಾಡುತ್ತದೆ. ಕೊನೆಗೆ ಅವನು ಪತ್ನಿಯನ್ನು ಮರಳಿ ಪಡೆಯುತ್ತಾನೆ. ಜೂಜಿನಲ್ಲಿ ನಿಪುಣನಾಗಿ ರಾಜ್ಯವನ್ನು ಮರಳಿ ಪಡೆಯುತ್ತಾನೆ. ಈ ಕಥೆಯನ್ನು ಯುಧಿಷ್ಠರ ತಾನು ಅನುಭವಿಸುತ್ತಿರುವಂಥ ಕಷ್ಟ ತನಗೊಬ್ಬನಿಗೆ ಮಾತ್ರವೇ ಬಂದದ್ದಲ್ಲ, ವನವಾಸದಲ್ಲಿರುವ ತನ್ನಕಥೆ ಇನ್ನು ಪೂರ್ಣಗೊಳ್ಳಬೇಕಾಗಿದೆ ಎಂಬ ಅರಿವು ಪಡೆಯುತ್ತಾನೆ."[೧೧] ಈಗ ರಾಮಾನುಜನ್‌ರು ಘಟನೆಗಳ ಪುನರುಕ್ತಿಯನ್ನು ಈ ಮಹಾಭಾರತದಲ್ಲಿ ಗುರ್ತಿಸಿದ್ದಾರೆ. ಹಾಗೂ ಉಪಕಥೆಗಳು ಕಥನದ ನಿಯೋಗವೊಂದನ್ನು ಪೂರೈಸುತ್ತವೆ. ಮತ್ತು ನಾಯಕರ ಬದುಕು ವಿಶಿಷ್ಟವಲ್ಲ. ಪ್ರಾತಿನಿಧಿಕ, ನಾಯಕರು ಮಾದರಿಗಳು ಎನ್ನುವುದನ್ನು ಸ್ಥಾಪಿಸುವುದಕ್ಕೆ ಸಹಾಯಮಾಡುತ್ತವೆ. ಇಂತಹ ಅನೇಕ ಮಹತ್ವದ ಪ್ರಸಂಗಗಳನ್ನು ಈ ಮಹಾಭಾರತದಲ್ಲಿ ಕಂಡುಬರುತ್ತವೆ. ಮಹಾಭಾರತದ ಅರ್ಜುನ-ಕರ್ಣ, ಭೀಮ ಮತ್ತು

ದುರ್ಯೋಧನ ಇವರ ದ್ವೇಷ ಮೊದಲಿನಿಂದ ಆರಂಭಗೊಂಡು ಬದುಕಿನುದ್ದಕ್ಕೂ ಮುಂದುವರೆಯುತ್ತದೆ ಎಂದು ಎ.ಕೆ. ರಾಮಾನುಜನ್‌ರವರು ವಿವರಿಸಿದ್ದಾರೆ. ಹಾಗೂ ಅದೃಷ್ಟ, ಫಲಿತಾಂಶ ಮತ್ತು ಭಾವನೆಗಳ ಸಂದಿಗ್ಧತೆ ಮತ್ತು ಹೊಯ್ದಾಟಕ್ಕೆ ಸಮಸಮನಾಗಿ ನ್ಯಾಯ–ಅನ್ಯಾಯದ ಸಂದಿಗ್ಧತೆಗಳು, ವಾದ–ಪ್ರತಿವಾದಗಳು ಪ್ರತಿಯೊಂದು ಮುಖ್ಯ ಘಟನೆಯ ಮುನ್ನ ಮತ್ತು ಘಟನೆಯ ನಂತರ ಕಾವ್ಯದಲ್ಲಿ ತಪ್ಪಿದೆ ಕಾಣಿಸಿಕೊಳ್ಳುತ್ತವೆ ಎಂದು ಎ.ಕೆ. ರಾಮಾನುಜನ್‌ರವರು ಗುರ್ತಿಸಿದ್ದಾರೆ.

ಅಡಿ ಟಿಪ್ಪಣಿಗಳು

೧. ಎ.ಕೆ. ರಾಮಾನುಜನ್, ನೆನಪಿನ ಸಂಪುಟ ಪುಟ. ೧೨೪.

೨. ಎ.ಕೆ. ರಾಮಾನುಜನ್, ಆಯ್ದ ಪ್ರಬಂಧಗಳು, ಪುಟ. ೧೩೪.

೩. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೨೩೭, ೨೩೮, ೨೩೯.

೪. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೨೪೩, ೨೪೪.

೫. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೨೩೬, ೨೩೭.

೬. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೨೭೦, ೨೭೧.

೭ ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೧೪೮, ೧೪೯, ೧೫೦

೮. ಎ.ಕೆ. ರಾಮಾನುಜನ್ ನೆನಪಿನ ಸಂಕಲನ, ಪುಟ. ೭೪

೯. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು,

೧೦. ಆಧುನಿಕ ಕನ್ನಡ ವಿಮರ್ಶೆ (ಪ್ರಕರ, ಪ್ರೇರಣೆ, ಪ್ರಯೋಗ) ಜಿ.ಎಸ್. ಆಮೂರ, ಪುಟ. ೧೬೫.

೧೧. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು, ಪುಟ. ೧೧೪,೧೧೫.

* * *

ಅಧ್ಯಾಯ ೮

ಸಮಾರೋಪ

ಸಮಾರೋಪ

ಯಾವುದೇ ಲೇಖಕ ಅವನ ಬರಹ ಇಡೀ ಸಾಹಿತ್ಯ ವಾಙ್ಞಯದಲ್ಲಿ ಒಂದು ಒಳ್ಳೆಯ ಸ್ಥಾನಮಾನ ಪಡೆದುಕೊಳ್ಳಬೇಕಾದರೆ ಆ ಬರಹ ಸತ್ವಯುತವಾಗಿರಬೇಕು ಒಂದು ಮನಸ್ಸನ್ನು ಆಕರ್ಷಿಸುವಂತಿರಬೇಕು, ತಮ್ಮ ಸಾಹಿತ್ಯದ ಮೂಲಕ ಸಮಾಜದ ಬದಲಾವಣೆಗೆ, ಸಮಸ್ಯೆಗೆ ಸ್ಪಂದಿಸುವಂತಿರಬೇಕು ಆಗ ಮಾತ್ರ ಅದು ಇಡೀ ಸಾಹಿತ್ಯದಲ್ಲಿ ಉಳಿದು ಶಾಶ್ವತ ಸ್ಥಾನಮಾನ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಎ.ಕೆ. ರಾಮಾನುಜನ್‌ರ ಸಾಹಿತ್ಯಿಕ ಪ್ರಾಮುಖ್ಯತೆ ಯಾವ ರೀತಿಯದು ಎಂಬುದನ್ನು ಇನ್ನೂ ಪರಿಶೀಲಿಸಬಹುದಾಗಿದೆ.

ಕನ್ನಡದ ಶ್ರೇಷ್ಠ ಲೇಖಕರಲ್ಲಿ ಎ.ಕೆ. ರಾಮಾನುಜನ್‌ರು ಒಬ್ಬರು ಕನ್ನಡ ಗದ್ಯ ಸಾಹಿತ್ಯಿಕ ತಮ್ಮ ಜೀವನದ ಅನುಭವದ ಸತ್ವವನ್ನು ತುಂಬಿ ವೈವಿಧ್ಯತೆಯನ್ನು ಸಾಧಿಸಿದವರು. ಗ್ರಾಮ ಜೀವನದ ದಟ್ಟ ಅನುಭವದ ಜನಪದರ ಸೊಗಸನ್ನು ತಮ್ಮ ಎಲ್ಲಾ ಪ್ರಬಂಧದಲ್ಲಿಯೂ ತಂದವರು ಆದ್ದರಿಂದಲೇ ಇವರನ್ನು ''ಸಾಂಸ್ಕೃತಿಕ ನಾವಿಕ'' ಎಂಬುದಾಗಿಯೂ ಕರೆಯಬಹುದಾಗಿದೆ. ಎ.ಕೆ. ರಾಮಾನುಜನ್‌ರು ತಮ್ಮ ಮೂಲ ಜೀವನದಿಂದ ಹೊರಬಂದ ತಾವು ಬದುಕಿದ ಸಮಾಜದ ಜನಪದ ನಾಯಕನಾಗಿ ಸಾಹಿತ್ಯ ರಚನೆ ಮಾಡಿದವರು. ತಮ್ಮ ಬರವಣಿಗೆಯಲ್ಲಿ ತಾವು ಬಾಳಿ ಬದುಕಿದ ಪರಿಸರವನ್ನು ಪುನರ್‌ಸೃಷ್ಟಿಸಿದ್ದಾರೆ. ತಾವು ಪ್ರಕೃತಿಯ ಒಂದು ಭಾಗವಾಗಿ ರಾಮಾನುಜನ್ ಕನ್ನಡ ಕವಿಗಳಿಗೆ ನವ್ಯಯುಗದ ಹುಬ್ಬುಗಂಟಿಕ್ಕಿದ ಕಾವ್ಯಕ್ಕೆ ಪೂರ್ತಿ ಭಿನ್ನವಾದ ಒಂದು ಮಾದರಿಯನ್ನು ಒದಗಿಸಿದರು ಎಂಬುದನ್ನು ಒಪ್ಪಿಕೊಳ್ಳಬೇಕು, ಅವರಲ್ಲಿ ಅನಂತಮೂರ್ತಿ, ಲಕ್ಷ್ಮಣರಾವ್, ಹಾಗೂ ತಿರುಮಲೇಶ್ ಹೆಸರುಗಳನ್ನು ಹೇಳಬಹುದು. ಕಾವ್ಯಕ್ಕೆ ಇದು ಏಕೈಕ ಮಾರ್ಗ ಎನ್ನುವಂತೆ ಈ ಅಭಿವ್ಯಕ್ತಿ ವಿಧಾನವನ್ನು ಕನ್ನಡವು ಅರಗಿಸಿಕೊಳ್ಳುವುದೇ ಎನ್ನುವುದನ್ನು ಕಾಲವೇ ಹೇಳಬೇಕಾಗುತ್ತದೆ.

ಎ.ಕೆ ರಾಮಾನುಜನ್ ಅವರನ್ನು ಶಿಷ್ಟಸಾಹಿತಿ ಎನ್ನುವುದಕ್ಕಿಂತಲೂ ಮಿಗಿಲಾಗಿ ಅವರೊಬ್ಬ

ಜಾನಪದ ಸಾಹಿತಿ ಎಂದೇ ಕರೆಯಬಹುದು. ಆದ್ದರಿಂದಲೇ ಎ.ಕೆ ರಾಮಾನುಜನ್‌ರು ತಮ್ಮ ಬರವಣಿಗೆಯ ಜೊತೆ ಜೊತೆಯಲ್ಲಿ ಪರಿಸರವನ್ನು ಸೇರಿಸಿಕೊಂಡು ಅದರಲ್ಲಿನ ಅರೆಕೊರೆಗಳನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ.

ಎ.ಕೆ ರಾಮಾನುಜನ್‌ರು ಸಾಹಿತ್ಯಿಕ ಸೃಷ್ಠಿಸಿಕೊಟ್ಟಿದ್ದಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಅವರು ತಮ್ಮ ಸುತ್ತಮುತ್ತಲಿನ ಜನ ಜೀವನವನ್ನು ಸೃಷ್ಠಿಸಿತೋರಿಸಿದ್ದಾರೆ ಎಂದರೆ ಹೆಚ್ಚು ಸೂಕ್ತವಾಗುತ್ತದೆ. ಅವರ ಈ ಬರವಣಿಗೆ ಸರಳ ಸುಂದರವಾದದ್ದು. ನೀತಿಪರವಾದದ್ದು ಮತ್ತು ಸಂಸ್ಕೃತಿಪರವಾದದ್ದು ಎಂಬುದಾಗಿ ಹೇಳಬಹುದು.

ಇವೆಲ್ಲವುಗಳ ಜೊತೆಗೆ ಎ.ಕೆ ರಾಮಾನುಜನ್‌ರು ಭಾರತೀಯ ಸಂಸ್ಕೃತಿಯ ತತ್ವಗಳನ್ನು ಚಿಂತನೆಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಹಾಗೆಯೇ ಬದುಕಲು ಪ್ರಯತ್ನಿಸಿದವರು, ಬರವಣಿಗೆಯಲ್ಲಿಯೂ ಅವರ ತತ್ವಗಳನ್ನು ಅಳವಡಿಸಿಕೊಂಡವರು ಹಾಗಾಗಿಯೇ ಅವರ ಬರವಣಿಗೆಯಲ್ಲಿ ಯಾವುದೇ ಜಾತಿಯ ಬಗೆಗೆ ನಿಂದನೆಯಾಗಲಿ ಬಲವಾಗಲಿ ಕಂಡುಬರುವುದಿಲ್ಲ ಎಲ್ಲವನ್ನು ಸಹ. ಒಂದೇ ಮನಸ್ಸಿನಿಂದ ಕಾನೂನು ದೊಡ್ಡತನವನ್ನು ಅವರಲ್ಲಿ ಗುರ್ತಿಸಬಹುದಾಗಿದೆ.

ಎ.ಕೆ ರಾಮಾನುಜನ್‌ರು ತಮ್ಮ ಕೃತಿಗಳಲ್ಲಿ ಅವರ ಕಾಲದ ಜನಜೀವನದ ವಿಧಾನ ಮತ್ತು ನಮ್ಮ ಜನಪದ ಪರಿಸರವನ್ನು ಕಟ್ಟಿಕೊಡುವ ಸಾಹಿತ್ಯಿಕ, ಸಾಂಸ್ಕೃತಿಕ ದಾಖಲೆಗಳನ್ನೂ ನೀಡುತ್ತಾರೆ ಅವರ ಸಾಹಿತ್ಯದಲ್ಲಿ ಇವರೇ ನಾಯಕ, ನಾಯಕಿಯಾಗಿ ಪಾತ್ರವಹಿಸುತ್ತಾರೆ ಎಂದು ಹೇಳಬಹುದಾಗಿದೆ. ಅವರ ಹಳ್ಳಿ ಜನಜೀವನ ಸಾಹಿತ್ಯ ಸಂಸ್ಕೃತಿ, ಬದುಕು, ಭಾಷೆಗಳನ್ನೂ ಪ್ರತಿನಿಧಿಸುವ ಉತ್ತಮವಾದ ಮಾದರಿ ಹಳ್ಳಿಯಾಗಿ ಕಂಡುಬರುತ್ತದೆ. ಈ ಮೂಲಕ ಅವರು ಒಂದು ಉತ್ತಮ ಸಾಹಿತ್ಯ ಮಾದರಿಯನ್ನು ತೋರಿಸಿಕೊಡುತ್ತಾರೆ. ಎ.ಕೆ ರಾಮಾನುಜನ್‌ರ ಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿ, ಜನಪದಸಂಸ್ಕೃತಿ, ಮುಂತಾದ ನಿತ್ಯ ಜೀವನದ ಸಂಸ್ಕೃತಿ ವಿವರಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದ್ದರಿಂದ ಅವರೊಬ್ಬ ಸಂಸ್ಕೃತಿ ನಿಷ್ಠ ಬರಹಗಾರರು ಎಂಬುದಾಗಿ ಹೇಳಬಹುದು.

ಎ.ಕೆ ರಾಮಾನುಜನ್‌ರ ಯಾವುದೇ ಒಂದು ಸಿದ್ಧಾಂತಕ್ಕೆ ಮೌಲ್ಯಗಳಿಗೆ ಒಳಗಾಗುವುದಿಲ್ಲ ತಮ್ಮ ಸುತ್ತಲಿನ ಸಾಮಾಜಿಕ ವ್ಯವಸ್ಥೆಯನ್ನು ಆತ್ಮೀಯತೆಯಿಂದ ಚಿತ್ರಿಸುತ್ತಾರೆ. ಗ್ರಾಮೀಣತೆಯ ಜೀವನಪದ್ದತಿಯ ಸರಳ ಸೌಂದರ್ಯವನ್ನು ಸೂಕ್ಷ್ಮವಾಗಿ ಕಂಡು ಸಹಜವಾಗಿ ಚಿತ್ರಿಸುತ್ತಾರೆ ಕಲ್ಪನೆಗೆ ಇವರ ಸಾಹಿತ್ಯದಲ್ಲಿ ಅವಕಾಶವೇ ಇರುವುದಿಲ್ಲ.

ಭಾರತೀಯ ಸಂಸ್ಕೃತಿಯ ಜನಜೀವನ ಆಚಾರವಿಚಾರ, ವೈಚಾರಿಕೆ, ಪ್ರಾಮುಖ್ಯತೆ ಮುಂತಾದ ವಿಚಾರಗಳನ್ನು ಎಳೆ ಎಳೆಯಾಗಿ ವಿವರಿಸುತ್ತಾರೆ. ಎ.ಕೆ ರಾಮಾನುಜನ್‌ರ ಪ್ರಬಂಧಗಳನ್ನು

ಗಮನಿಸಿದಾಗ ಅವರು ಸಮಾಜದ ಜೊತೆಗೆ ನೇರವಾಗಿ ಮಾತನಾಡುತ್ತಿರುವಂತೆ ಕಂಡುಬರುತ್ತದೆ. ಅವರು ಶಿಷ್ಟ ಸಾಹಿತಿಗಳ ಹಾಗೆ ಸಾಹಿತ್ಯಕ್ಕಾಗಿ ಸಾಹಿತ್ಯ ರಚನೆ ಮಾಡುವುದಿಲ್ಲ. ಅವರು ಜನರ ಸಾಹಿತಿಯಾಗಿ ಜನರಿಂದ ಜನರಿಗಾಗಿಯೇ ಬದುಕಿ ಬರೆದವರು, ಸಾಮಾನ್ಯ ಜನರೊಂದಿಗೆ ಮುಖಾಮುಖಿ ಯಾಗಿರುವುದೇ ಅವರ ಸಾಹಿತ್ಯದ ವೈಶಿಷ್ಟ್ಯ ಅವರು ಪ್ರಬಂಧ ರಚನೆಯಲ್ಲಿಯೂ ಕೂಡ ಸಾಹಿತ್ಯಿಕ ಸ್ವಾರಸ್ಯವನ್ನು ಪ್ರಧಾನವಾಗಿ ಹೇಳುತ್ತಾನೆ. ''ಲಕ್ಷ್ಮಣ ಬಾಗಿಲಲ್ಲಿ ನಿಂತಿರುವಾಗ ವಿಶ್ವಾಮಿತ್ರ ಬಂದ 'ರಾಮನನ್ನು ಕಾಣಬೇಕು, ಬಹಳ ತುರ್ತಿನ ವಿಚಾರ, ಎಲ್ಲಿದ್ದಾನೆ ರಾಮ? ಅಂತ ಲಕ್ಷ್ಮಣನನ್ನು ಕೇಳಿದ. 'ಈಗ ಒಳಗೆ ಹೋಗಬೇಡಿ, ರಾಮ ಯಾರ ಜೊತೆಯಲ್ಲೋ ಮಾತನಾಡುತ್ತಿದ್ದಾನೆ. ಬಹಳ ಮುಖ್ಯವಾದ ವಿಚಾರ' ಅಂದ ಲಕ್ಷ್ಮಣ.

'ರಾಮ ನನ್ನಿಂದಲೂ ಬಚ್ಚಿಡುವಂಥದ್ದು ಏನಿದೆ ಒಳಗೆ ಹೋಗಲೇಬೇಕು ನಾನು. ಈಗಲೇ' ಅಂದ ವಿಶ್ವಾಮಿತ್ರ.

'ನಿಮ್ಮನ್ನು ಒಳಗೆ ಬಿಡುವ ಮೊದಲು ನಾನು ಅಪ್ಪಣೆ ಪಡೆಯಬೇಕು'

ಅಂದ ಲಕ್ಷ್ಮಣ:

ಒಳಗೆ ಹೋಗಿ ಕೇಳಿಕೊಂಡು ಬಾ'

'ರಾಮ ಹೊರಗೆ ಬರುವವರೆಗೆ ಹೋಗಲಾರೆ. ನೀವು ಕಾಯಬೇಕು'

'ನಾನು ಬಂದಿದ್ದೇನೆ ಅಂತ ನೀನು ಒಳಗೆ ಹೋಗಿ ಹೇಳದಿದ್ದರೆ ಶಾಪಕೊಟ್ಟು ಇಡೀ ಅಯೋಧ್ಯೆಯನ್ನು ಸುಟ್ಟುಬಿಡುತ್ತೇನೆ' ಅಂದ ವಿಶ್ವಾಮಿತ್ರ.

'ನಾನೀಗ ಒಳಗೆ ಹೋದರೆ ಸಾಯಿತೇನೆ. ಹೋಗದಿದ್ದರೆ ಈ ಕೋಪಿಷ್ಠ ಇಡೀ ರಾಜ್ಯ ಸುಟ್ಟು ಬಿಡುತ್ತಾನೆ. ಎಲ್ಲರೂ ಸತ್ತು ಹೋಗತ್ತಾರೆ. ನಾನೊಬ್ಬನೇ ಸಾಯುವುದು ವಾಸಿ' ಅಂದುಕೊಂಡ ಲಕ್ಷ್ಮಣ.

ಒಳಕ್ಕೆ ಹೋದ

'ಏನು ವಿಚಾರ?' ರಾಮ ಕೇಳಿದ

'ವಿಶ್ವಾಮಿತ್ರ ಬಂದಿದ್ದಾರೆ'

'ಒಳಗೆ ಕಳಿಸು'

ವಿಶ್ವಾಮಿತ್ರ ಒಳಗೆ ಹೋದ. ರಾಮನ ಖಾಸಗೀ ಮಾತು ಮುಗಿದಿತ್ತು. ಬ್ರಹ್ಮ ಮತ್ತು ವಿಶ್ವಾಮಿತ್ರ ಯಾಕೆ ಬಂದಿದ್ದರೆಂದರೆ 'ಭೂ ಲೋಕದಲ್ಲಿ ನೀನು ಮಾಡಬೇಕಾದ ಕಾರ್ಯ ಮುಗಿಯಿತು. ನಿನ್ನ ರಾಮಾವತಾರ ಕೊನೆಗಾಣಬೇಕು, ಶರೀರವನ್ನೂ ಬಿಟ್ಟು ದೇವಲೋಕಕ್ಕೆ ಬಾ' ಎಂದು ರಾಮನಿಗೆ

ಹೇಳಲು ಬಂದಿದ್ದರು. ಅವರು ಹೇಳಬೇಕಾಗಿದ್ದದ್ದು ಅಷ್ಟೇ.

'ಅಣ್ಣಾ ನನ್ನ ಶಿರಚ್ಛೇದನವಾಗಬೇಕು' ಅಂದ ಲಕ್ಷ್ಮಣ.

'ನಮ್ಮ ಮಾತು ಮುಗಿದಿತ್ತು. ಹೇಳಬೇಕಾದದ್ದು ಏನೂ ಉಳಿದಿರಲಿಲ್ಲ. ನಿನ್ನ ಶಿರಚ್ಛೇದನ ಯಾಕೆ ಮಾಡಲಿ?' ಅಂದ ರಾಮ

'ಹಾಗೆ ಸುಮ್ಮನೆ ಬಿಡಬಾರದು ನೀನು. ನಾನು ನಿನ್ನ ತಮ್ಮನೆಂದು ಶಿಕ್ಷೆಕೊಡದೆ ಬಿಟ್ಟರೆ ನಿನ್ನ ಹೆಸರಿಗೆ ಕಳಂಕ ಬರುತ್ತದೆ. ನಿನ್ನ ಹೆಂಡತಿಯನ್ನೇ ದಾಕ್ಷಿಣ್ಯವಿಲ್ಲದೆ ಕಾಡಿಗೆ ಕಳಿಸಿದವನು ನೀನು. ನನಗೆ ಶಿಕ್ಷೆ ಆಗಲೇಬೇಕು. ಹೋಗುತ್ತೇನೆ' ಅಂದ ಲಕ್ಷ್ಮಣ. ವಿಷ್ಣು ಪವಡಿಸುವ ಆದಿಶೇಷನು ಅವತಾರ ಲಕ್ಷ್ಮಣ. ಅವನ ಕಾಲವೂ ಮುಗಿದಿತ್ತು. ನೇರವಾಗಿ ಸರಯೂ ನದಿಗೆ ಹೋಗಿ, ನೀರಿಗೆ ಇಳಿದು ಮರೆಯಾಗಿಬಿಟ್ಟ.[?]

ಹಾಗೆಯೇ ಅವರ ಪ್ರಬಂಧಗಳಲ್ಲಿ ಕಂಡುಬರುವ ರಾಮ, ಹನುಮಂತ, ಮುಂತಾದ ಹಿಂದೂಧರ್ಮದಲ್ಲಿ ಅವರು ಕಾಣುವ ಆದರ್ಶ ಆತ್ಮೀಯತೆ, ಧರ್ಮಸಹಿಷ್ಣುತೆಗಳು ಎ.ಕೆ ರಾಮಾನುಜನ್ ಸಾಹಿತ್ಯಕ ಶ್ರೇಷ್ಠತೆ ಎಂಬುದಾಗಿ ಹೇಳಲಾಗಿದೆ.

ಎ.ಕೆ ರಾಮಾನುಜನ್‌ರ ತಮ್ಮ ಸಾಹಿತ್ಯ ರಚನೆಯಲ್ಲಿ ಎಲ್ಲಾ ಸಮಸ್ಯೆಗಳನ್ನೂ ಮುಖಾಮುಖಿಯಾಗಿಸುವುದಿಲ್ಲ ತಮಗೆ ಗೋಚರವಾಗುವ ಜನರ ಬದುಕನ್ನು ಮುಖ್ಯ- ಅಮುಖ್ಯ ಎನ್ನದೆ ಎಲ್ಲವನ್ನೂ ವಾಸ್ತವಿಕ ನೆಲೆಗಟ್ಟಿನಲ್ಲಿ ವಿವರಿಸುತ್ತದೆ. ಜನರ ನಿಷ್ಠೆ ಜಾತಿ ಭೇದಗಳನ್ನೂ ಮೀರಿದ ಮಾನವೀಯ ಮೌಲ್ಯ ಜೀವನದ ಸರಳತೆ ಶ್ರದ್ಧೆ ಜನ ಜೀವನದ ಪ್ರಧಾನ ಸಂದರ್ಭ ಮುಂತಾದವುಗಳ ವಿವರಗಳು ಹೇರಳವಾಗಿ ದೊರೆಯುತ್ತವೆ.

ಎ.ಕೆ ರಾಮಾನುಜನ್‌ರು ಸಂಪ್ರದಾಯವನ್ನೂ ಪೂರ್ಣವಾಗಿ ವಿರೋಧಿಸಿ ಅರ್ಥವಿಲ್ಲದ ಆಚರಣೆಗಳ ಬಗೆಗೆ ವಿಡಂಬನೆಯನ್ನು ವ್ಯಕ್ತಪಡಿಸುತ್ತಾರೆ. ''ಇತ್ತೀಚೆಗೆ ನಾನು 'ಕರ್ಮ'ವನ್ನೂ ಕುರಿತ ಸಮ್ಮೇಳನವೊಂದಕ್ಕೆ ಹೋಗಿದ್ದೆ. ಭಾರತೀಯ ಅಥವಾ ಹಿಂದೂ ಅನ್ನುವುದಕ್ಕೆ ಶರ್ಮ ಅನ್ನುವುದು ಸಮಾನಾರ್ಥಕವೆಂದೇ ಹಲವು ವಲಯಗಳ ಜನ ಭಾವಿಸಿದರೆ 'ಕರ್ಮ' ಬ್ರಾಹ್ಮಣ ಪಠ್ಯಗಳಲ್ಲಿದೆ. ಬೌದ್ಧ ಪಠ್ಯಗಳಿಲ್ಲಿದೆ. ಜೈನ ಪಠ್ಯಗಳಲ್ಲದೆ, ಆದರೆ ಕನ್ನಡದ ನೂರಾರು ಜಾನಪದ ಕಥೆಗಳನ್ನು ನೋಡಿದಾಗ 'ಕರ್ಮ'ವನ್ನು ಆಶಯವಾಗಿ ಅಥವಾ ಮುಖ್ಯ ಪ್ರೇರಣೆಯಾಗಿ ಹೊಂದಿರುವ ಒಂದೇ ಒಂದು ಕಥೆಯೂ ನನಗೆ ಕಾಣಲಿಲ್ಲ ಆದರೂ ಮಕ್ಕಳು ತೀರ ಗಲಾಟೆ ಮಾಡಿದಾಗ ಬಳಸುವ ಬೈಗುಳಗಳಲ್ಲಿ 'ನನ್ನ ಕರ್ಮ'! ಅನ್ನುವುದೂ ಸೇರಿದೆ. ಭಾರತದ ಅನೇಕ ಹಳ್ಳಿಗರಿಗೆ ಪುರ್ನಜನ್ಮದ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಎಂದು ಹಾರ್ಪರ್ ಮತ್ತು ಅನಂತರ ಇತರರು ವರದಿ ಮಾಡಿದಾಗ ಜಾತಿ, ಶಿಕ್ಷಣ ಇತ್ಯಾದಿಗಳು ಈ ವ್ಯತ್ಯಯಕ್ಕೆ ಕಾರಣ ಅನ್ನುವ

ವಿವರಣೆಗಳು ಬಂದವು. ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ನಾನು ಮತ್ತು ಇತರರು ಸಂಗ್ರಹಿಸಿದ ಸುಮಾರು ೨.೦೦೦ ಕನ್ನಡ ಜಾನಪದ ಕಥೆಗಳನ್ನು ಬ್ರಾಹ್ಮಣರು, ಜೈನರು ಮತ್ತು ಇತರ ಜಾತಿಗಳವರು ಹೇಳಿದ್ದಾರೆ. ಯಾವ ಕಥೇಯಲ್ಲೂ 'ಕರ್ಮ'ದ ಪ್ರಸ್ತಾಪವಿಲ್ಲ. ಇನ್ನೂ ಆಶ್ವರ್ಯವೆಂದರೆ ಶೆರಿಲ್ ಡೇನಿಯಲ್ ಸ್ವಂತ ಅಧ್ಯಯನವೊಂದರಲ್ಲಿ (೧೯೮೩) ತಾವು ಇದ್ದ ತಮಿಳು ಹಳ್ಳಿಯ ಜನ ತಮ್ಮ ಸುತ್ತಲ ಸಂಗತಿಗಳನ್ನು ವಿವರಿಸುವುದಕ್ಕೆ ಕರ್ಮ ಮತ್ತು 'ತಲೈವಿದಿ' (ಹಣೆಬರಹ) ಎಂಬ ಮಾತುಗಳನ್ನು ಪರ್ಯಾಯವಾಗಿ ಬಳಸುತ್ತಿದ್ದರು ಎಂದಿದ್ದಾರೆ. ಇವೆರಡೂ ಪರಸ್ಪರ ಹೊಂದಾಣಿಕೆಯಾಗದ ಕಲ್ಪನೆಗಳು 'ಕರ್ಮ' ಎಂಬುದನ್ನು ಒಬ್ಬ ವ್ಯಕ್ತಿಯ ಭೂತಕಾಲ ವರ್ತಮಾನವನ್ನು ನಿಯಂತ್ರಿಸುವುದನ್ನೂ ಸೂಚಿಸುತ್ತದೆ. ಕಾರ್ಯಕಾರಣದ ಉಕ್ಕಿನಸರಪಳಿ ಕರ್ಮ ಅದೊಂದು ನೈತಿಕ ಹೊಣೆಗಾರಿಕೆ, ತಲೈವಿದಿ ಅನ್ನುವುದು ವ್ಯಕ್ತ ಹುಟ್ಟುತ್ತಿದ್ದಂತೆ ಅವನ ಹಣೆಯ ಮೇಲೆ ಬರೆಯಲಾಗುವ ಅವನ ವಿಧಿ, ಇದು ಯಥೇಚ್ಛಿಕ ಹಣೆಬರಹಕ್ಕೂ ವ್ಯಕ್ತಿ ಮಾಡಿದ್ದ ಹಿಂದಿನ ಕರ್ಮಗಳಿಗೂ ಸಂಬಂಧವಿಲ್ಲ. ಹಣೆಬರಹವನ್ನು ಕುರಿತ ವಿವರಣೆಗಳಲ್ಲಿ ಜಾನಪದ ಕಥೆಗಳಲ್ಲಿ ಪುರ್ವಜನ್ಮದ ಪ್ರಸ್ತಾಪ ಬರುವುದಿಲ್ಲ.

ಇದಕ್ಕೆ ಸಂಬಂಧಪಟ್ಟಿರುವ ಇನ್ನೊಂದು ಲಕ್ಷಣ ವೀಕ್ಷಕರ ಗಮನ ಸೆಳೆದಿರುವಂತೆ ತೋರುತ್ತದೆ. ಅದು ನಮ್ಮಪ್ಪನಲ್ಲಿತ್ತೆಂದು ಆಗಲೇ ಪ್ರಸ್ತಾಪಿಸಿದ ಅಸಂಗತೆ, ಅಸಂಬದ್ಧತೆ ಮತ್ತು ಬ್ರಾಹ್ಮಣರು ಜೈನರು ಕರ್ಮವನ್ನೂ ಬಳಸುವ ರೀತಿಯನ್ನು ಕುರಿತದ್ದು. ಈ ಅಸಂಗತೆ ಶಿಕ್ಷಣದ ಕೊರತೆಯನ್ನೋ ತರ್ಕಶಕ್ತಿಯ ಅಭಾವವನ್ನೋ ತೋರುವುದಿಲ್ಲ. ಬಹುಶಃ ಇವರೆಲ್ಲ ಬೇರೆಯದೇ 'ತರ್ಕ'ವನ್ನು ಬಳಸುತ್ತಿರಬಹುದು. ಇಂಥ ತರ್ಕವೂ 'ಸಾಂಸ್ಕೃತಿಕ ವಿಕಾಸ'ದ ಪೂರ್ವಸ್ಥಿತಿ; ಭಾರತೀಯರು 'ದತ್ತಾಂಶ' ಮತ್ತು ವಸ್ತುನಿಷ್ಠ ಸತ್ಯ ಎಂಬ ಐಡಿಯಾಲಜಿಯನ್ನೇ ಬೆಳೆಸಿಕೊಂಡಿಲ್ಲ ಎಂದು ಕೆಲವು ಚಿಂತಕರು ನಂಬುತ್ತಾರೆ.[೨] ಹೀಗೆ ಸಂಪ್ರದಾಯವನ್ನು ಸಂಪೂರ್ಣವಾಗಿ ವಿರೋಧಿಸದೆ ಅರ್ಥವಿಲ್ಲದ ಆಚರಣೆಗಳ ಬಗೆಗೆ ವಿಡಂಬನೆಯನ್ನು ಈ ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಬಹುದು.

ಎ.ಕೆ ರಾಮಾನುಜನ್ ನಯವಾದ ಹಾಸ್ಯದ ಮೂಲಕ ವ್ಯಂಗ್ಯತೆಯನ್ನು ತಂದು ವಿಡಂಬಿಸುತ್ತಾರೆ. ನಾನು ಹೇಳಿದ್ದು ಮಾಡುವ ಹಾಗಿದ್ದರೆ ಮಾತ್ರ ನಿನ್ನ ಮಾತಾಡಿಸುತ್ತೇನೆ ರಾಜಕುಮಾರ ಒಲಟಾಗಿ ಹೇಳಿದ.

'ನನ್ನ ಗಂಡ ಕೇಳಿದ್ದನ್ನು ಇಲ್ಲಿ ಅನ್ನತೇನಾ ಕೇಳಿ ಏನು ಬೇಕು'

ನಿನಗೆ ಹೂ ಬಿಡುವ ಮರ ಆಗುವುದಕ್ಕೆ ಬರುತ್ತದೆ ಅಲ್ಲವಾ? ಹೇಗೆ ಮರ ಆಗತೀಯೋ ಮರ ಆಗತಿಯೋ ನಾನು ನೋಡಬೇಕು. ನಾನು ಹೂವನ್ನೇ ಹಾಸಿ ಹೊದ್ದುಕೊಳ್ಳಬಹುದು.

ಚೆನ್ನಾಗಿರುತ್ತದೆ ಅಂದ.

'ನೋಡಿ, ನಾನು ರಾಕ್ಷಸಿಯಲ್ಲ, ದೇವತೆಯೂ ಅಲ್ಲ. ಎಲ್ಲರ ಹಾಗೆ ಮಾಮೂಲಿ ಮನುಷ್ಯಳು ಮನುಷ್ಯರು ಎಲ್ಲಿಯಾದರೂ ಮರವಾಗುವುದು ಉಂಟೇ?' ಅಂತ ವಿನಯವಾಗಿ ಹೇಳಿದಳು.

'ಹೀಗೆಲ್ಲ ಸುಳ್ಳು ಹೇಳಿ ಮೋಸ ಮಾಡಬೇಡ. ಆವತ್ತು ನೀನು ಮರವಾಗಿದ್ದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ನಿನಗೋಸ್ಕರ ಮರವಾಗದಿದ್ದರೆ ಇನ್ನೂ ಯಾರಿಗಾಗಿ ಆಗುತ್ತೀಯ?' ಅಂದ ರಾಜಕುಮಾರ.

ಮದುವೆ ಹೆಣ್ಣಿನ ಕಣ್ಣಲಿ ನೀರು ತುಳುಕಿತು. ಸೆರಗಿನಲ್ಲಿ ಒರಸಿಕೊಂಡಳು. 'ಕೋಪ ಮಾಡಿಕೊಳ್ಳಬೇಡಿ, ನೀವು ಅಷ್ಟೊಂದು ಬಲವಂತ ಮಾಡಿದರೆ ಮರವಾಗುತ್ತೇನೆ. ಎರಡು ಬಿಂದಿಗೆ ನೀರು ತನ್ನಿ' ಅಂದಳು.

ನೀರು ತಂದ, ಅವಳು ಎಲ್ಲ ಕಿಟಕಿ, ಬಾಗಿಲು ಮುಚ್ಚಿದಳು ನೀರಿಗೆ ಮಂತ್ರಹಾಕಿದಳು ನೆನಪಿರಲಿ, ಬೇಕಾದಷ್ಟು ಹೂವು ಬಿಡಿಸಿಕೊಳ್ಳಿ ಕೊಂಬೆ ಮುರಿಯಬೇಡಿ, ಎಲೆಹರಿಯಬೇಡಿ ಅಂದಳು ಹೇಗೆ, ಯಾವಾಗ ನೀರು ಹಾಕಬೇಕು ಎಂದೆಲ್ಲ ಹೇಳಿ ಕೋಣೆಯ ಮಧ್ಯೆ ಕೂತು ಕಣ್ಣು ಮುಚ್ಚಿ ದೇವರ ಧ್ಯಾನ ಮಾಡಿದಳು. ರಾಜಕುಮಾರ ಅವಳ ತಲೆಯ ಮೇಲೆ ಒಂದು ಕೊಡ ನೀರು ಸುರಿದ. ಅವಳು ಹೂ ಬಿಡುವ ಮರವಾದಳು. ಹೂವಿನ ಪರಿಮಳ ಮನೆಯನ್ನೆಲ್ಲ ತುಂಬಿತು. ಅವನು ಬೇಕಾದಷ್ಟು ಹೂ ಬಿಡಿಸಿಕೊಂಡ. ಮತ್ತೆ ಮರದ ಮೇಲೆ ಎರಡನೆಯ ಬಿಂದಿಗೆಯ ನೀರು ಸುರಿದ ಅವಳು ಮತ್ತೆ ಹೆಣ್ಣಾದಳು ತಲೆ ಕೊಡವಿಕೊಂಡು ಮುಗುಳ್ನಗುತ್ತ ಎದ್ದು ನಿಂತಳು.

ಅವರು ಹೂವನ್ನೆ ಹಾಸಿ, ಹೂವನ್ನ ಹೊದ್ದು ಮಲಗಿದರು. ಹೀಗೆ ಏಷ್ಟು ದಿನ ಮಾಡಿದರು. ಬಾಡಿದ ಹೂವುಗಳನ್ನು ಕಿಟಕಿಯಾಚೆ ಎಸೆಯುತ್ತಿದ್ದರು. ಅದು ಒಂದು ಬೆಟ್ಟದಷ್ಟು ಎತ್ತರವಾದ ರಾಶಿಯಾಯಿತು.

ರಾಜನ ಕಿರಿಯ ಮಗಳು ಒಂದು ದಿನ ಈ ಹೂವಿನರಾಶಿ ನೋಡಿದಳು ನೋಡಮ್ಮ ಅಣ್ಣ ಅತ್ತಿಗೆ ದಿನಾ ಬಳಸಿ ಎಸೆದ ಹೂವು ಬೆಟ್ಟದಹಾಗೆ ರಾಶಿ ಬಿದ್ದಿದೆ. ನನಗೆ ಮಾತ್ರ ಒಂದೂ ಕೊಟ್ಟಿಲ್ಲ. ಅನ್ನುತ್ತೆ ತಾಯಿಗೆ ದೂರು ಹೇಳಿದಳು.

ಬೇಜಾರು ಮಾಡಿಕೊ ಬೇಡ. ನಿನಗೂ ಒಂದಷ್ಟು ಹೂವು ಕೊಡುವುದಕ್ಕೆ ಹೇಳುತ್ತೇನೆ ಅವರಿಗೆ ರಾಣಿ ಸಮಾಧಾನ ಹೇಳಿದಳು.

ಒಂದು ದಿನ ರಾಜರು ಮರ ಎಲ್ಲಿಗೋ ಹೋಗಿದ್ದ ರಾಜನ ಮಗಳು ಇಷ್ಟು ಹೊತ್ತಿಗೆ

ಹೂವಿನ ಗುಚ್ಚ ಕಂಡು ಹಿಡಿದಿದ್ದಳು. ತನ್ನ ಗೆಳತಿಯರನ್ನೆಲ್ಲ ಕರೆದಳು ಬನ್ನಿ ಸುರಹೊನ್ನೆ ತೋಟಕ್ಕೆ ಹೋಗಿ ಉಯ್ಯಾಲೆ ಆಡೋಣ ಅತ್ತಿಗೆಯನ್ನು ಪರಿಮಳದ ಹೂ ಬೇಕಾದಷ್ಟು ಕೊಡುತ್ತೇನೆ ಅಂದಳು.'[೩] ಪಾತ್ರಗಳ ಬಗೆಗೆ ಚಿಂತಿಸುವಾಗ ನಮ್ಮಲ್ಲಿರುವ ಅಹಂ ಕೂಡ ಮರೆಯಾಗುತ್ತದೆ. ಅಂತಹ ಪರಿಣಾಮಕಾರಿಯಾದ ಘಟನೆಗಳನ್ನು ಎ.ಕೆ ರಾಮಾನುಜನ್ ಅಂತಹ ಪರಿಣಾಮಕಾರಿಯಾದ ಘಟನೆಗಳನ್ನೂ ಎ.ಕೆ ರಾಮಾನಜನ್‌ರು ಪರಿಚಯಿಸುತ್ತಾರೆ.

ನಮ್ಮ ಸಾಹಿತ್ಯಿಕ ಕೃತಿಗಳ ಮೂಲಕ ಮಾನವೀಯತೆಯನ್ನು ಎತ್ತಿಹಿಡಿಯುವ ಪ್ರಯತ್ನವನ್ನು ಮಾಡುತ್ತಾರೆ.

ಎ.ಕೆ. ರಾಮಾನುಜನ್‌ರು ಹೆಚ್ಚಾಗಿ ಘಟನೆಗಳ ನಿರೂಪಣೆಯ ಕಡೆಗೇ ಹರಿಯುತ್ತದೆ. “ಪ್ರತಿವ್ಯವಸ್ಥೆಯತ್ತ: ಹೆಂಗಸರ ಕಥೆಗಳು, ಹಾಗೂ ಕತೆ ಹೇಳುವುದು” ಪ್ರಬಂಧಗಳಲ್ಲಿ ಕಂಡುಬರುವ ಘಟನೆಗಳ ನಿರೂಪಣೆಯ ರೀತಿಯನ್ನು ಗಮನಿಸಿದರೆ ಚೆನ್ನಾಗಿ ತಿಳಿದುಬರುತ್ತದೆ. ಹೀಗೆ ಅವರು ಚಿತ್ರಿಸಿರುವ ಗ್ರಾಮೀಣ ಬದುಕು ತನ್ನದೇ ಆದ ಆಕರ್ಷಣೆಯಿಂದ ಓದುಗರನ್ನು ತನ್ನತ್ತ ಸೆಳೆದುಕೊಳ್ಳುತ್ತದೆ ಸಾಮಾನ್ಯ ಜೀವನದಲ್ಲಿ ಸಹಾನುಭೂತಿ, ವರ್ಣನೆಯ ರೀತಿಯಲ್ಲಿ ಸ್ವಚ್ಛವೂ ಲಲಿತವೂ ಆದ ಸ್ವಾಭಾವಿಕತೆ ಹಾಸ್ಯ ವಿನೋದ ಅವಕಾಶಗಳಲ್ಲಿ ಮರ್ಯಾದೆ ಮರೆಯದ ಕುತೂಹಲ ಈ ಗುಣಗಳಿಂದ ಅವರ ಪುಸ್ತಕಗಳು ನಮ್ಮ ಹೊಸ ಸಾಹಿತ್ಯದಲ್ಲಿ ಮೇಲ್ತರಗತಿಗೆ ಸೇರತಕ್ಕವಾಗಿವೆ.

ಅಡಿ ಟಿಪ್ಪಣಿಗಳು

೧. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಪುಟ. ೬೮,೬೯.

೨. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಪುಟ. ೪೪,೪೫

೩. ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು ಪುಟ. ೧೬೩, ೧೬೪

* * *

ಅನುಬಂಧಗಳು

೧. ಗ್ರಂಥಋಣ

೧. ಗ್ರಂಥಋಣ

೧. ಅಶೋಕ ಟಿ.ಪಿ. (ಸಂ), ಎ.ಕೆ. ರಾಮಾನುಜನ್ ನೆನಪಿನ ಸಂಪುಟ, ಕರ್ನಾಟಕ ಸಂಘ, ಪುತ್ತೂರು, ೧೯೯೩.

೨. ಆಮೂರ ಜಿ.ಎಸ್., ಆಧುನಿಕ ಕನ್ನಡ ವಿಮರ್ಶೆ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮.

೩. ಕುರ್ತಕೋಟಿ ಕೀರ್ತಿನಾಥ, ಬಯಲು-ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೬೨.

೪. ಗುರುಲಿಂಗ ಕಾಪಸೆ (ಸಂ), 'ಶತಮಾನದ ಲಲಿತ ಪ್ರಬಂಧ', ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೧.

೫. ನಾಗಭೂಷಣಸ್ವಾಮಿ ಓ.ಎಲ್., ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು (ಅನುವಾದ) ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨.

೬. ನಾಗೇಶ ಹೆಚ್.ವಿ. (ಸಂ), ಪ್ರಬಂಧ ಪ್ರಪಂಚ, ಡಾ.ರಾ.ಯ. ಧಾರವಾಡಕರ, ಸನ್ಮಾನ ಸಮಿತಿ ಧಾರವಾಡ, ೧೯೯೦.

೭. ಪುರುಷೋತ್ತಮಮ ಬಿಳಿಮಲೆ (ಸಂ), ಪ್ರಬಂಧ ೧೯೮೮, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೯.

೮. ಬೀಚನಹಳ್ಳಿ ಕರೀಗೌಡ, ಕಥೆ ಮತ್ತು ಹಾಡು ಅನುವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೯. ಬದೀಕಾನ ವಿಶ್ವನಾಥ., ಎ.ಕೆ. ರಾಮಾನುಜನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೧೯೯೫.

೧೦. ಶಾಮರಾಯ ತ.ಸು., ಕನ್ನಡ ಸಾಹಿತ್ಯ ಚರಿತ್ರೆ, ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆ, ಮೂರನೇ ಹಂತ, ಮೈಸೂರು, ೨೦೦೧

೧೧. ಶೇಷಗಿರಿರಾವ್., ಹೊಸಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೮.